ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ50 । ಡಿಸೆಂಬರ್7–13, 2020 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com





ಇತಿಹಾಸ ಸೃಷ್ಟಿಸಿರುವ ರೈತರ ದಿಲ್ಲಿ ಚಲೋ



ಕೋವಿಡ್–19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ



ಪ್ರಾದೇಶಿಕ ಪಕ್ಷಗಳಿಗೆ ಅಳಿವು–ಉಳಿವಿನ ಪ್ರಶ್ನೆ



ಸಿಲಿಕಾನ್ ಸಿಟಿಗೆ ಕಸ ನಿರ್ವಹಣೆ ಮಂಡಳಿ!



ಇರಾನಿನ ಪರಮಾಣು ವಿಜ್ಞಾನಿಯ ಹತ್ಯೆಯ ಹಿಂದೆ



ಡಿಸೆಂಬರ್ 8: ರೈತ–ವಿರೋಧಿ ಕಾಯ್ದೆಗಳ ವಿರುದ್ಧ ಭಾರತ ಹರತಾಳ – ರೈತ ಸಂಘಟನೆಗಳ ಕರೆ

ನಮ್ಮ ರೈತರ ದನಿಗೆ ಕಿವಿಗೊಡಿ: ದಮನವನ್ನು ನಿಲ್ಲಿಸಿ –ಎಂಟು ಪಕ್ಷಗಳ ಮುಖಂಡರ ಜಂಟಿ ಹೇಳಿಕೆ

ನವಂಬರ್28: ರೈತರು ಸರಕಾರದ ಕೃಷಿ ಕಾಯ್ದೆಗಳ ಬಗ್ಗೆ ತಮ್ಮ ಗಂಭೀರ ಆತಂಕಗಳಿಗೆ ದನಿ ನೀಡಲು ಸರಕಾರದ ಎಲ್ಲ ರೀತಿಗಳ ದಮನ ಕ್ರಮಗಳನ್ನು ಎದುರಿಸಿ ರಾಷ್ಟ್ರದ ರಾಜಧಾನಿಗೆ ಬಂದಿದ್ದಾರೆ. ಸಾವಿರ–ಸಾವಿರ ಸಂಖ್ಯೆಯಲ್ಲಿ ಬಂದಿರುವುದರಿಂದ ಅವರಿಗೆ ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ರಾಮಲೀಲಾ ಮೈದಾನದಂತಹ ದೊಡ್ಡ ಮೈದಾನವನ್ನು ಒದಗಿಸಿ, ಅವರ ಆಹಾರ ಇತ್ಯಾದಿಗಳಿಗೆ ಸಕಲ ಏರ್ಪಾಡುಗಳನ್ನು ಮಾಡಬೇಕು ಎಂದು ಎಂಟು ರಾಜಕೀಯ ಪಕ್ಷಗಳ ಮುಖಂಡರು ಕೇಂಧ್ರ ಸರಕಾರವನ್ನು ಆಗ್ರಹಿಸಿದ್ದಾರೆ. ಐದು ಎಡಪಕ್ಷಗಳ ಪ್ರಧಾನ ಕಾರ್ಯದರ್ಶಿಗಳು, ಮತ್ತು ಎನ್.ಸಿ.ಪಿ. ಅಧ್ಯಕ್ಷರು, ಡಿ.ಎಂ.ಕೆ.ಯ ಖಜಾಂಚಿ ಹಾಗೂ ಆರ್.ಜೆ.ಡಿ.ಯ ಪ್ರಮುಖ ಮುಖಂಡರು ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

ಹೇಳಿಕೆಯ ಪೂರ್ಣ ಪಾಟ ಹೀಗಿದೆ:

ತೀವ್ರ ದಮನ, ಅಶ್ರುವಾಯು ಪ್ರಯೋಗ, ಭಾರೀ ಜಲಫಿರಂಗಿ, ರಸ್ತೆ ಅಡ್ಡಗಟ್ಟುಗಳು, ಪೋಲಿಸ್ ಬ್ಯಾರಿಕೇಡುಗಳನ್ನು ಮತ್ತು ದಿಲ್ಲಿಯ ಸುತ್ತಮುತ್ತಲ ರಾಷ್ಟ್ರೀಯ ಹೆದ್ದಾರಿಗಳನ್ನು ಅಗೆದು ಹಾಕಿ ನಮ್ಮ ರೈತರ ಮೇಲೆ 'ಯುದ್ಧ'ವನ್ನೇ ನಡೆಸುವಂತೆ ಕಂಡರೂ, ಅವನ್ನೆಲ್ಲ ಎದುರಿಸಿ ಹತ್ತಾರು ಸಾವಿರ ರೈತರು ಯಶಸ್ವಿಯಾಗಿ ರಾಷ್ಟ್ರೀಯ ರಾಜಧಾನಿ ದಿಲ್ಲಿ ತಲುಪಿದ್ದಾರೆ. ರೈತ–ವಿರೋಧಿಯಾದ ಪ್ರತಿಗಾಮಿ ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಿರುವ ಈ ಬೃಹತ್ ಪ್ರತಿಭಟನೆಯಲ್ಲಿ ಅವರ ದೃಢನಿರ್ಧಾರ ಮತ್ತು ಎದೆಗಾರಿಕೆಗೆ ನಮ್ಮ ಅಭಿವಂದನೆಗಳು.

ಕೇಂದ್ರ ಸರಕಾರ ನಮ್ಮ ರೈತರು ದಿಲ್ಲಿಗೆ ಬಂದು ತಮ್ಮ ಪ್ರತಿಭಟನೆಗೆ ಶಾಂತಿಯುತವಾಗಿ ದನಿ ನೀಡುವುದನ್ನು ತಡೆಯಬೇಕೆಂಬ ತನ್ನ ನಿರ್ಧಾರದಿಂದ ಹಿಂದೆ ಸರಿಯಲೇ ಬೇಕಾಗಿ ಬಂದಿದೆ, ಬದಲಿಸಲೇ ಬೇಕಾಗಿ ಬಂದಿದೆ. ಅದು ರೈತರು ಸಭೆ ಸೇರಲು ಒಂದು ಸ್ಥಳವನ್ನು ಒದಗಿಸಿದೆ. ಆದರೆ ಸಾವಿರ–ಸಾವಿರ ಸಂಖ್ಯೆಯಲ್ಲಿ ರೈತರು ದಿಲ್ಲಿಗೆ ಬಂದಿರುವಾಗ ಈ ಮೈದಾನ ಅವರಿಗೆ ಬಹಳ ಸಣ್ಣದಾಗುತ್ತದೆ. ರಾಮಲೀಲಾ ಮೈದಾನದಂತಹ ದೊಡ್ಡ ಮೈದಾನವನ್ನು ಈ ಶಾಂತಿಯುತ ಪ್ರತಿಭಟನೆಗೆ ಅವರಿಗೆ ಒದಗಿಸಬೇಕು ಮತ್ತು ಅಲ್ಲಿ ಅವರು ಉಳಿದುಕೊಳ್ಳಲು ಹಾಗೂ ಆಹಾರಕ್ಕೆ ಸಕಲ ಏರ್ಪಾಡುಗಳನ್ನು ಮಾಡಬೇಕು ಎಂದು ಈ ಹೇಳಿಕೆಗೆ ಸಹಿ ಹಾಕಿರುವ ನಾವು ಆಗ್ರಹಿಸುತ್ತೇವೆ.

ನಾವು, ಭಾರತದ ಆಹಾರ ಭದ್ರತೆಗೆ ಬೆದರಿಕೆಯೊಡ್ಡುವ, ಕನಿಷ್ಟ ಬೆಂಬಲ ಬೆಲೆಗಳನ್ನು ರದ್ದು ಮಾಡುವ, ಭಾರತೀಯ ಕೃಷಿಯನ್ನು ಮತ್ತು ನಮ್ಮ ರೈತರನ್ನು, ಅನ್ನದಾತರನ್ನು ನಾಶಮಾಡುವ ಈ ಹೊಸ ಕೃಷಿ ಕಾಯ್ದೆಗಳಿಗೆ ನಮ್ಮ ವಿರೋಧವನ್ನು ಪುನರುಚ್ಚರಿಸುತ್ತೇವೆ. ಕೇಂದ್ರ ಸರಕಾರ ಪ್ರಜಾಸತ್ತಾತ್ಮಕ ವಿಧಿ–ವಿಧಾನಗಳನ್ನು ಅನುಸರಿಸಬೇಕು, ಮತ್ತು ಪ್ರತಿಭಟಿಸುತ್ತಿರುವ ರೈತರ ಆತಂಕಗಳನ್ನು ನಿವಾರಿಸಬೇಕು.

ರೈತರ ಬಹುದೊಡ್ಡ ಪ್ರತಿಭಟನೆ–ಎಡಪಕ್ಷಗಳ ಸಂಪೂರ್ಣ ಬೆಂಬಲ ಮತ್ತು ಸೌಹಾರ್ದ

ನವಂಬರ್30: ಲಕ್ಷಾಂತರ ರೈತರು ದಿಲ್ಲಿಯ ಸುತ್ತಮುತ್ತ ನೆರೆದಿದ್ದಾರೆ, ಸಂಸತ್ತಿನಲ್ಲಿ ನಾಚಿಕೆಗೇಡಿ, ಪ್ರಜಾಪ್ರಭುತ್ವ–ವಿರೋಧಿ ರೀತಿಯಲ್ಲಿ ಪಾಸು ಮಾಡಿಸಿಕೊಂಡ ಮೂರು ಕೃಷಿ ಕಾಯ್ದೆಗಳನ್ನು, ಮತ್ತು ವಿದ್ಯುಚ್ಛಕ್ತಿ(ತಿದ್ದುಪಡಿ) ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಅವರು ಆಗ್ರಹಿಸುತ್ತಿದ್ದಾರೆ. ರೈತರ ಈ ಬಹುದೊಡ್ಡ ಪ್ರತಿಭಟನೆಗೆ ಸಂಪೂರ್ಣ ಬೆಂಬಲ ಮತ್ತು ಸೌಹಾರ್ದವನ್ನು ಎಡಪಕ್ಷಗಳು–ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್), ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್–ವ್ಯಕ್ತಪಡಿಸಿವೆ.

ತೀವ್ರ ದಮನವನ್ನು ಎದುರಿಸಿ, ಲಕ್ಷಾಂತರ ರೈತರು ದಿಲ್ಲಿ ತಲುಪಿದ್ದಾರೆ, ಕೊರೆಯುವ ಚಳಿಗಾಳಿಯ ನಡುವೆ ಇದ್ದಾರೆ. ಆದರೆ ಅವರಿಗೆ ಸಂಸತ್ತಿನ ಬಳಿ ಬಂದು ತಮ್ಮ ಬೇಡಿಕೆಗಳನ್ನು ಪ್ರಸ್ತುತ ಪಡಿಸಲು ಬಿಡುತ್ತಿಲ್ಲ.

ಇದರ ವಿರುದ್ಧ ಜಂಟಿ ಪ್ರತಿಭಟನಾ, ಸೌಹಾರ್ದ ಕಾರ್ಯಾಚರಣೆಗಳನ್ನು ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಬಹುವಿಧವಾಗಿ ಸಂಯೋಜಿಸಬೇಕು, ರೈತ ಸಂಘಟನೆಗಳು, ಕೃಷಿಕೂಲಿಕಾರರ ಸಂಘಟನೆಗಳು ಮತ್ತು ಕಾರ್ಮಿಕ ಸಂಘಗಳು ನೀಡಿರುವ ಕರೆಗಳಿಗೆ ಬೆಂಬಲ ನೀಡಬೇಕು ಎಂದು ಎಡಪಕ್ಷಗಳು ತಮ್ಮ ಘಟಕಗಳಿಗೆ ಕರೆ ನೀಡಿವೆ.

ಭಾರತೀಯ ಕೃಷಿಯನ್ನು, ನಮ್ಮ ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳಲಿಕ್ಕಾಗಿ, ರೈತರಿಗೆ ಫಲದಾಯಕ ಪ್ರತಿಫಲಕ್ಕಾಗಿ, ಆಹಾರ ಅಭಾವಗಳನ್ನು ಮತ್ತು ಅಗತ್ಯ ಸರಕುಗಳ ಬೆಲೆಗಳ ಏರಿಕೆಯನ್ನು ತಡೆಯಲಿಕ್ಕಾಗಿ ಪ್ರಧಾನ ಮಂತ್ರಿಗಳು ಮತ್ತು ಕೇಂದ್ರ ಸರಕಾರ ಪ್ರತಿಭಟಿಸುತ್ತಿರುವ ರೈತರ ಆಗ್ರಹಗಳನ್ನು ಒಪ್ಪಿಕೊಳ್ಳಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ.

ರೈತರ ನ್ಯಾಯಬದ್ಧ ಶಾಂತಿಯುತ ಪ್ರತಿಭಟನೆಯ ದಮನವನ್ನು ನಿಲ್ಲಿಸಿ ಪ್ರಧಾನ ಮಂತ್ರಿಗಳಿಗೆ ಮಹಿಳಾ ಸಂಘಟನೆಗಳ ಬಹಿರಂಗ ಪತ್ರ

ಮೂರು ಅಖಿಲ ಭಾರತ ಮಹಿಳಾ ಸಂಘಟನೆಗಳು "ರೈತರ ಹೋರಾಟಗಳ ಅಮಾನುಷ ದಮನವನ್ನು, ಕೊರೆಯುವ ಚಳಿಯಲ್ಲೂ ಅಶ್ರುವಾಯು ಪ್ರಹಾರ, ಜಲಫಿರಂಗಿ ಪ್ರಹಾರಗಳನ್ನು" ನಡೆಸಲಾಗಿದೆ ಎನ್ನುತ್ತ ಅವನ್ನು ಬಲವಾಗಿ ಖಂಡಿಸಿವೆ; .ಬಿಜೆಪಿ–ಆರೆಸ್ಸೆಸ್ ಕೇಂದ್ರ ಸರಕಾರ ಮತ್ತು ಬಿಜೆಪಿಯ ಉತ್ತರಪ್ರದೇಶ ಮತ್ತು ಹರ್ಯಾಣ ರಾಜ್ಯ ಸರಕಾರಗಳು ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ದಿಲ್ಲಿ ತಲುಪ ಬಯಸುತ್ತಿರುವ ಶಾಂತಿಯುತ ರೈತರ ಮೇಲೆ ಅಭೂತಪೂರ್ವ ಬರ್ಬರತೆಯನ್ನು ಹರಿಯು ಬಿಟ್ಟಿವೆ ಎಂದು ಬಲವಾಗಿ ಖಂಡಿಸುತ್ತ ಪ್ರಧಾನ ಮಂತ್ರಿಗಳಿಗೆ ಬಹಿರಂಗ ಪತ್ರ ಬರೆದಿವೆ. ರೈತರ ಪ್ರತಿಭಟನೆ ನ್ಯಾಯಬದ್ಧವಾಗಿದೆ, ಶಾಂತಿಯುತವಾಗಿದೆ, ಅದರ ವಿರುದ್ಧ ದಮನಚಕ್ರವನ್ನು ನಿಲ್ಲಿಸಬೇಕು



ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎ.ಐ.ಡಿ.ಡಬ್ಲ್ಯು.ಎ.), ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ(ಎನ್‌ಎಫ್‌ಐಡಬ್ಲ್ಯು.) ಮತ್ತು ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ(ಎಐಪಿಡಬ್ಲ್ಯುಎ) ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿವೆ.

ಕೃಷಿ ವಲಯದಲ್ಲಿ ಮಹಿಳೆಯರ ಪಾತ್ರವನ್ನು ಒತ್ತಿ ಹೇಳುತ್ತ "ಮಹಿಳೆಯರನ್ನು ರೈತರು ಎಂದು ಗುರುತಿಸದಿದ್ದರೂ, ಕೃಷಿ ಕ್ರಿಯೆಗಳಲ್ಲಿ ಅವರು ಸಮಾನ ಪ್ರಮಾಣದಲ್ಲಿ ತೊಡಗಿದ್ದಾರೆ. ಈ ವಿಷಯದಲ್ಲಿ

ಪುಟ 14 ನೋಡಿ

ರೈತರ ಚಳುವಳಿಗೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಸೌಹಾರ್ದ

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಒಂದು ಉನ್ನತ ನಿಯೋಗ ಡಿಸೆಂಬರ್ 4ರಂದು ದಿಲ್ಲಿಯ ಸಿಂಘು ಗಡಿಯಲ್ಲಿ ಧರಣಿ ಕೂತಿರುವ ರೈತ ಹೋರಾಟಗಾರರನ್ನು ಭೇಟಿಯಾಯಿತು.

ಈ ನಿಯೋಗದಲ್ಲಿ ಹರ್ಯಾಣ ಐಎನ್‌ಟಿಯುಸಿ ಯ ಅಧ್ಯಕ್ಷ ಅಮಿತ್ ಯಾದವ್ ಮತ್ತು ಅವರ ತಂಡದವರು, ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಅಮರಜಿತ್ ಕೌರ್, ಮತ್ತು ರಾಷ್ಟ್ರೀಯ ಕಾರ್ಯದರ್ಶಿಗಳಾದ ವಿ.ಎಸ್.ಗಿರಿ ಮತ್ತು ಎಸ್.ವಿ.ದಾಮ್ಲೆ, ಹೆಚ್‌ಎಂಎಸ್ ಪ್ರಧಾನ ಕಾರ್ಯದರ್ಶಿ ಹರ್‌ಭಜನ್ ಸಿಂಗ್ ಮತ್ತು ಅವರ ತಂಡ, ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಮತ್ತು ಅಧ್ಯಕ್ಷರು ಕೆ.ಹೇಮಲತಾ, ಎಐಯುಟಿಯುಸಿ ಯ ಕಾರ್ಯದರ್ಶಿ ಆರ್. ಕೆ.ಶರ್ಮ, ಎಸ್‌ಇಡಬ್ಲ್ಯುಎ ನ ಕಾರ್ಯದಶಿ ಲತಾಬೇನ್, ಎಐಟಿಯುಸಿಸಿ ಯ ಕಾರ್ಯದರ್ಶಿ ಸಂತೋಷ್ ರಾಯ್, ಮತ್ತು ಯುಟಿಯುಸಿ ಯ ಆರ್.ಎಸ್.ಡಾಗರ್ ಇದ್ದರು.

ಅಮರ್‌ಜಿತ್ ಕೌರ್ ಅವರು ನಿಯೋಗದ ಸದಸ್ಯರನ್ನು ಪರಿಚಯ ಮಾಡಿಕೊಟ್ಟರು. ನಂತರ ನೆರೆದಿದ್ದ ರೈತರನ್ನು ಉದ್ದೇಶಿಸಿ ಮಾತನಾಡಿದರು.

ಮೋದಿ ಸರಕಾರ ಕಾರ್ಮಿಕರು ಮತ್ತು ರೈತರು, ಅಲ್ಲದೆ ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಕಲಾವಿದರು, ಪತ್ರಕರ್ತರು ಮತ್ತು ಅವರ ಧೋರಣೆಗಳನ್ನು ವಿಮರ್ಶೆ ಮಾಡುವ ಎಲ್ಲರ ಮೇಲೂ ಸತತವಾಗಿ ಪ್ರಹಾರ ಮಾಡುತ್ತಿರುವಾಗ ಈ ಧೋರಣೆಗಳಿಗೆ ಸವಾಲು ಹಾಕುವ ಒಂದು ಚಳುವಳಿಯ ಆವಶ್ಯಕತೆ ಬಹಳವಾಗಿತ್ತು. ಅದನ್ನು ಸಂಘಟಿಸುವ ಮೂಲಕ ಈ ರೈತ ಚಳುವಳಿ ಚಾರಿತ್ರಿಕ ಮಹತ್ವವನ್ನು ಗಳಿಸಿದೆ ಎಂದು ಅವರು ಹೇಳಿದರು. ಈ ಚಳುವಳಿ ರೈತರನ್ನು, ಅವರ ಭೂಮಿಯನ್ನು ಮತ್ತು ಬಳಕೆದಾರರನ್ನು ಉಳಿಸುವುದಕ್ಕಾಗಿ. ಇದನ್ನು ಖಲಿಸ್ತಾನಿಗಳು ನಡೆಸುತ್ತಿದ್ದಾರೆ ಎಂದು ಬಿಜೆಪಿಯ ಭಕ್ತವೃಂದ ಚಿತ್ರಿಸುತ್ತಿರುವುದನ್ನು ಅವರು ಖಂಡಿಸಿದರು. ಈ ಮಂದಿ ಮಹಿಳಾ ಚಳುವಳಿಗಾರರನ್ನೂ ಬಿಟ್ಟಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಪಂಜಾಬ್–ಹರ್ಯಾಣದ ರೈತರು ವಹಿಸಿದ ಪಾತ್ರವನ್ನು, ಮಾಡಿದ ತ್ಯಾಗ–ಬಲಿದಾನಗಳನ್ನು ಯಾರೂ ಗೌಣಗೊಳಿಸಲು ಸಾಧ್ಯವಿಲ್ಲ. ಅವರು ಶಾಂತಿಯುತವಾಗಿ ಚಳುವಳಿ ನಡೆಸುತ್ತಿರುವುದು, ಮಾತ್ರವಲ್ಲ, ಒಂದು ದೀರ್ಘ ಹೋರಾಟಕ್ಕೆ ಸಿದ್ಧವಾಗಿ ಬಂದಿರುವುದು ಅವರ ಪ್ರೌಢತೆಯನ್ನು ತೋರಿಸುತ್ತದೆ. ನೂರು ವರ್ಷಗಳ ಹಿಂದೆ ಯಾವುದಕ್ಕಾಗಿ ಅವರು ಹೋರಾಟ ನಡೆಸಿದರೋ ಅದನ್ನು ರಕ್ಷಿಸಿಕೊಳ್ಳುವದಕ್ಕಾಗಿ ಅವರೀಗ ಮತ್ತೆ ಬೀದಿಗಿಳಿದಿದ್ದಾರೆ ಎಂದು ಅಮರ್‌ಜಿತ್ ಕೌರ್ ಹೇಳಿದರು.

ದೇಶಾದ್ಯಂತ ಈ ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ರೈತರ ಬೇಡಿಕೆಗಳು ಗೌರವಪೂರ್ಣವಾಗಿ ಈಡೇರುವ ವರೆಗೂ ಈ ಹೋರಾಟದ ಬೆಂಬಲಕ್ಕೆ ನಿಲ್ಲಬೇಕು ಎಂದು ತಮ್ಮ ಘಟಕಗಳಿಗೆ ಕರೆ ನೀಡಿವೆ.





ಹಿಂದೂ ಮತಗಳ ಕ್ರೋಢೀಕರಣಕ್ಕಾಗಿ ಗೋಮಾಂಸ ನಿಷೇಧದ ಹುನ್ನಾರ

ಸಂಪಾದಕೀಯ

ಚುನಾವಣೆಗಳು, ಉಪ ಚುನಾವಣೆಗಳು ನಡೆಯುತ್ತಿರುವ ಈ ಕಾಲಘಟ್ಟದಲ್ಲಿ ಹಿಂದು ಮತಗಳನ್ನು ಇನ್ನಷ್ಟು ಕ್ರೋಡೀಕರಿಸುವ ಉದ್ದೇಶದಿಂದ ಯಡಿಯೂರಪ್ಪ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ ಲವ್ ಜಿಹಾದ್ ನಿಷೇಧ ಹಾಗೂ ಗೋಮಾಂಸ ನಿಷೇಧದ ಕಾಯ್ದೆಗಳನ್ನು ಅತ್ಯಂತ ತರಾತುರಿಯಿಂದ ಅಂಗೀಕರಿಸಲು ಮುಂದಾಗಿದೆ. ಹಿಂದು ಮತಬ್ಯಾಂಕ್ ಮೇಲೆ ಕಣ್ಣಿಟ್ಟು, ಗೋವಿನ ಮೇಲೆ ಹಿಂದುಗಳ ಮುಗ್ಧ ಭಕ್ತಿಯನ್ನು ಬಿಜೆಪಿಯ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಸಂಚು ಇದಾಗಿದೆ. ಅಂತರ ಧರ್ಮೀಯ ವಿವಾಹ ತಡೆಯುವ ಅದರ ಪ್ರಯತ್ನ ಸಂವಿಧಾನ ವಿರೋಧಿ ಆಗಿರುವುದರಿಂದ ಯಡಿಯೂರಪ್ಪ ಅದನ್ನು ಮುಂದೂಡಬಹುದು. ಆದರೆ ಗೋಮಾಂಸ ನಿಷೇದ ಮಾಡುವುದು ಸುಲಭ ಸಾಧ್ಯವಾಗಲಿದೆ ಎಂದು ಯಡಿಯೂರಪ್ಪ ತಿಳಿದುಕೊಂಡಂತೆ ಕಾಣುತ್ತದೆ.

ಶಾಸನ ಸಭೆಯ ಇದೇ ಚಳಿಗಾಲ ಅಧಿವೇಶನದಲ್ಲಿ ಮಂಡಿಸಲು ಸಿದ್ಧಪಡಿಸಿದ ಕರಡು ಮಸೂದೆ ಗೋವಧೆ ಮತ್ತು ಗೋಮಾಂಸ ಸೇವನೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಉದ್ದೇಶವನ್ನು ಹೊಂದಿದೆ. ಆ ಮೂಲಕ ಮುಗ್ದ ಹಿಂದು ಮತದಾರರಲ್ಲಿ ಹಿಂದುತ್ವ ಅಜೆಂಡಾವನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಬಿಂಬಿಸಿ ಚುನಾವಣೆಗಳಲ್ಲಿ ಹಿಂದುಗಳನ್ನು ಭಾರತೀಯ ಜನತಾ ಪಕ್ಷದ ಹಿಂದೆ ಅಣಿನೆರೆಸುವುದು ಅದರ ಗುರಿಯಾಗಿದೆ ಅಧಿವೇಶನವನ್ನು ಡಿಸೆಂಬರ್ 7 ರಿಂದ ಆರಂಭಿಸಲು ನಿರ್ಧರಿಸಲಾಗಿದೆ.

“ಅದನ್ನು ಹಿಂದುತ್ವ ಅನ್ನಿರಿ, ಅಥವಾ ರಾಷ್ಟ್ರೀಯತೆ. ಅದನ್ನು ಮಾಡಿಯೇ ತೀರುತ್ತೇವೆ. ಅದು 2018 ರ ನಮ್ಮ ಚುನಾವಣಾ ಪ್ರಣಾಳಿಕೆಯ ಭಾಗವಾಗಿತ್ತು. ಆದ್ದರಿಂದ ಅದನ್ನು ಜಾರಿಗೆ ತರಲು ನಾವು ಬದ್ದರು.” ಎಂದು ಇತ್ತೀಚೆಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀಯುತ ಸಿ.ಟಿ. ರವಿ ಹೇಳಿದ್ದಾರೆ. ಅವರು ಗೋವಧೆ ತಡೆ ಕಾಯ್ದೆಯ ಪ್ರಬಲ ಪ್ರತಿಪಾದಕರು.

2010ರಲ್ಲಿ, ಯಡಿಯೂರಪ್ಪ ಮೊದಲ ಬಾರಿಗೆ ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ, ಬಿಜೆಪಿ ಸರ್ಕಾರ, “ಕರ್ನಾಟಕ ಜಾನುವಾರು ಹತ್ಯೆ ನಿಷೇಧ ಮತ್ತು ಅವುಗಳ ರಕ್ಷಣೆ” ಎಂಬ ಮಸೂದೆಯನ್ನು ಮಂಡಿಸಿತು. ಆದರೆ ರಾಷ್ಟ್ರಪತಿಯವರಿಂದ ಅದಕ್ಕೆ ಅನುಮೋದನೆ ದೊರೆಯಲಿಲ್ಲ. ನಂತರ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅದನ್ನು ಬದಿಗಿಟ್ಟು 1964 ರ ಕರ್ನಾಟಕ “ಗೋವಧೆ ತಡೆ ಮತ್ತು ಜಾನುವಾರು ರಕ್ಷಣಾ ಕಾಯ್ದೆ”ಯನ್ನು ಚಾಲನೆಯಲ್ಲಿ ಉಳಿಸಿಕೊಂಡಿತು. ಈಗ ಜಾರಿಯಲ್ಲಿರುವ 1964 ರ ಕಾಯ್ದೆ ಹೋರಿಗಳು, ಎತ್ತುಗಳು, ಎಮ್ಮೆಗಳು ಮತ್ತು ಕೋಣಗಳನ್ನು ಮಾಂಸಕ್ಕಾಗಿ ವಧಿಸಲು ಅನುಮತಿ ನೀಡುತ್ತದೆ. ಆದರೆ ಆ ಜಾನುವಾರುಗಳಿಗೆ 12 ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿರಬೇಕು ಅಥವ ಅವುಗಳು ಸಾಕಾಣಿಕೆಗೆ ಯೋಗ್ಯವಲ್ಲದವು ಅಥವಾ ಹಾಲು ಕೊಡದಿರುವ ಜಾನುವಾರುಗಳಾಗಿರಬೇಕು.

ಬಿಜೆಪಿ ಪ್ರಸ್ತಾಪಿಸಿರುವ ಮಸೂದೆಯು ಯಾವುದೇ ಜಾನುವಾರುಗಳನ್ನು ವಧಿಸಲು ಅವಕಾಶ ನೀಡುವುದಿಲ್ಲ. ಗೋಹತ್ಯೆ ನಿಷೇದ ಎಂದರೆ ಯಾವುದೇ ದನಗಳನ್ನು ವಧಿಸಲು ಮತ್ತು ಅದರ ಮಾಂಸ ಸೇವನೆಗೆ ಅವಕಾಶ ನೀಡುವುದಿಲ್ಲ. ಕಾಯ್ದೆ ಉಲ್ಲಂಘನೆಗೆ ದಂಡ ವಿಧಿಸಲಾಗುವುದು. ಕರ್ನಾಟಕದಲ್ಲಿ ವಿವಿಧ ಹಂತದ ಚುನಾವಣೆಗಳು ನಡೆಯಲಿವೆ. ಮತದಾರರಲ್ಲಿ ಬಹುಸಂಖ್ಯಾತರಾಗಿರುವ ಹಿಂದುಗಳನ್ನು ಆಕರ್ಷಿಸಲು ಇದು ಸಹಕಾರಿಯಾಗಲಿದೆ ಎಂದು ಬಿಜೆಪಿಗರು ತಿಳಿದಂತೆ ಕಾಣುತ್ತದೆ.

ಬಿಜೆಪಿ ಸರ್ಕಾರದ ಈ ನಡೆಯಿಂದಾಗಿ ಮುಸ್ಲಿಂ, ಕ್ರೈಸ್ತ ಮೊದಲಾದ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮತ್ತು ಎಸ್.ಸಿ./ಎಸ್.ಟಿ. ಜನಸಮೂಹಗಳಿಗೆ ಆತಂಕ ಉಂಟಾಗಿದೆ. ತುಲನಾತ್ಮಕವಾಗಿ ಕಡಿಮೆ ಬೆಲೆಗೆ ದೊರಕುತ್ತಿದ್ದ ಮಾಂಸ ಇನ್ನು ಮುಂದೆ ಸಿಗದಂತಾಗಿದೆ. ಅವರ ಮಕ್ಕಳು ಮಹಿಳೆಯರು ಪೌಷ್ಠಿಕ ಆಹಾರದ ಕೊರತೆಯಿಂದ ನಲುಗುವಂತಾಗಲಿದೆ. ಮಾಂಸವನ್ನು ಮಾರುಕಟ್ಟೆಗೆ ಒದಗಿಸುವ ಕಾಯಕದಲ್ಲಿ ತೊಡಗಿರುವ ಲಕ್ಷಾಂತರ ಜನಗಳು ತಮ್ಮ ಉದ್ಯೋಗವನ್ನು ಕಳೆದುಕೊಂಡು ಬೀದಿಪಾಲಾಗುವರು. ದನಕರುಗಳನ್ನು ಸಾಕುತ್ತಿರುವ ರೈತರಿಗೂ ಈ ಕಾಯ್ದೆಯಿಂದ ಅನ್ಯಾಯವಾಗಲಿದೆ. ದನಗಳನ್ನು ಅವುಗಳು ಸಾಯುವವರೆಗೂ ಸಾಕುವುದು ರೈತರಿಗೆ ಹೊರೆಯಾಗಲಿದೆ. ಗೋಮಾಂಸ ಸೇವನೆಯನ್ನು ನಿಷೇಧಿಸುವ ಮೂಲಕ ತನ್ನ ಆಹಾರವನ್ನು ತಾನೇ ನಿರ್ಧರಿಸುವ ಆಹಾರದ ಹಕ್ಕಿನ ಮೇಲೆ ಬಿಜೆಪಿಗರು ಆಕ್ರಮಣ ಮಾಡಲು ಹೊರಟಿದ್ದಾರೆ. ಕೆಲ ಹಿಂದುಗಳ ಭಾವನೆಗಳಿಗೆ ಇದರಿಂದ ನೋವು ಉಂಟಾಗುವುದಿದ್ದರೆ ಪರಸ್ಪರ ಪ್ರೀತಿ ವಿಶ್ವಾಸದಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕಾನೂನಿನ ಮೂಲಕ ಬಲವಂತದಿಂದ ಹೇರುವುದು ಸರಿಯಲ್ಲ. ಮುಸಲ್ಮಾನರಲ್ಲಿ ಬಹಳಷ್ಟು ಜನ, ದಲಿತರಲ್ಲಿ ಬಹಳಷ್ಟು ಜನ ಗೋಮಾಂಸ ಸೇವನೆ ಮಾಡುವುದೇ ಇಲ್ಲ. ಅಕ್ಕಪಕ್ಕದಲ್ಲಿ ಹಿಂದುಗಳ ಮನೆಗಳಿದ್ದರಂತೂ ಅವರು ಗೋಮಾಂಸ ಸೇವಿಸಲು ಮುಜುಗರ ಪಟ್ಟುಕೊಳ್ಳುತ್ತಾರೆ. ಹಿಂದುಗಳು ಹಿಂದುಯೇತರರೊಂದಿಗೆ ಅನ್ಯೋನತೆಯನ್ನು ಬೆಳಸಿಕೊಂಡರೆ, ಅವರನ್ನು ಕಾಡುತ್ತಿರುವ ಪರಕೀಯತೆಯನ್ನು ಹೋಗಲಾಡಿಸಲು ಮುಂದಾದರೆ ಗೋಮಾಂಸ ಸೇವನೆಯನ್ನು ಕಾನೂನಿನ ಮೂಲಕ ನಿಷೇಧಿಸುವ ಅಗತ್ಯವಿರದು. ಈಗ ಬಿಜೆಪಿಗರು ಮಾಡಲು ಹೊರಟಿರುವುದು ಬಹುಸಂಖ್ಯಾತರು ಅಲ್ಪಸಂಖ್ಯಾತರ ಮೇಲೆ ನಡೆಸುವ ದೌರ್ಜನ್ಯವೇ ಆಗಿದೆ. ಜನತೆಯ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಈ ಮಸೂದೆಯನ್ನು ವಿರೋಧಿಸಲೇ ಬೇಕಾಗಿದೆ.

ಜಾತಿ ಸಮುದಾಯಗಳ ಪ್ರಾಧಿಕಾರಗಳು ಶೋಷಿತ ಜನರನ್ನು ವಂಚಿಸುವ ರಾಜಕಾರಣಗಳಾಗಿವೆ–ಸಿಪಿಐ(ಎಂ)

ಜಾತಿ ಸಮುದಾಯಗಳ ಒಲೈಕೆಯ ಮತ್ತು ಮತ ಬ್ಯಾಂಕ್ ರಾಜಕಾರಣದ ಭಾಗವಾಗಿ ಸಮುದಾಯಗಳ ಅಭಿವೃದ್ಧಿ ಪ್ರಾಧಿಕಾರ ಅಥವಾ ನಿಗಮಗಳ ಸ್ಥಾಪನೆ ಮಾಡಲಾಗುತ್ತಿದೆಯೇ ಹೊರತು ಶೋಷಿತ ಜನತೆಯ ನೈಜ ಅಭಿವೃದ್ಧಿಗಾಗಿ ಅಲ್ಲ, ಇದೊಂದು ವಂಚನೆಯ ರಾಜಕಾರಣ ಎಂದು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸವಾದಿ) ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರಕಾರ ಜಾತಿ ಆಧಾರಿತ ಪ್ರಾಧಿಕಾರಗಳನ್ನು ಘೋಷಿಸುತ್ತಿದೆ ಇದರಿಂದ ಹೊಸ ಹೊಸ ಜಾತಿ ಪ್ರಾಧಿಕಾರಗಳ ಘೋಷಣೆಗೆ ಒತ್ತಾಯವು ಬೆಳೆದು ಬರುತ್ತಿದೆ ಇದು ಹೀಗೆ ಮುಂದುವರೆದಲ್ಲಿ ಆಡಳಿತ ವೆಚ್ಚದ ಹೆಚ್ಚಿನ ಭಾರವನ್ನು ಜನತೆ ಹೊರಬೇಕಾಗುತ್ತದೆ ಎಂದು ಸಿಪಿಐಎಂ ಎಚ್ಚರಿಸಿದೆ.

ಈಗಾಗಲೇ ಇರುವ ಅಭಿವೃದ್ಧಿ ಪ್ರಾಧಿಕಾರಗಳು ಮತ್ತು ನಿಗಮಗಳು ಅಗತ್ಯ ಅನುದಾನವಿಲ್ಲದೇ ಬಳಲುತ್ತಿವೆ ಮಾತ್ರವಲ್ಲಾ ಇರುವ ಅನುದಾನವನ್ನು ಲೂಟಿಗೊಳಪಡಿಸುವ ಬಹುತೇಕ ವ್ಯಾಪಕ ಭ್ರಷ್ಟಾಚಾರದ ಕೂಪಗಳಾಗಿವೆ. ಇದಕ್ಕೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ನಿಗಮಗಳು ಹೊರತಾಗಿಲ್ಲ.

ಇವು ಜನತೆಯ ನಡುವೆ ಅವರನ್ನು ಒಡೆದಾಳಲು ಅವರ ನಡುವೆ ಜಾತಿ ಭಾವನೆಯನ್ನು ಗಟ್ಟಿಗೊಳಿಸಲು ಮತ್ತು ಜಾತಿಗಳೊಳಗೆ ವಿಭಜನೆಗಳನ್ನುಂಟು ಮಾಡಿ ಆಳುವ ವರ್ಗಗಳ ಶೋಷಣೆಯನ್ನು ಬಲಗೊಳಿಸಲು ಸಹಕಾರಿಯಾಗುತ್ತವೆ ಎಂದು ಸಿಪಿಐಎಂ ವಿಶ್ಲೇಷಿಸುತ್ತದೆ.

ಉಳುವವನನ್ನು ಮತ್ತು ಉಳುವ ಅನುಭವ ಇರುವವನನ್ನು ಭೂ ಒಡೆಯನನ್ನಾಗಿಸುವ ಭೂ ಸುಧಾರಣೆಯು ಮತ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೈಗಳಲ್ಲಿ ಕೇಂದ್ರೀಕೃತ ಗೊಂಡಿರುವ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವಿಕೇಂದ್ರೀಕರಿಸುವುದು ಸಾರ್ವ ಜನಿಕ ರಂಗದಲ್ಲಿ ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ವ್ಯಾಪಕ ಗೊಳಿಸುವುದು.ಖಾಸಗೀಕರಣದ ನೀತಿಗಳನ್ನು ಕೈಬಿಡುವುದು ಮತ್ತು ಸರಕಾರದ ವಿವಿದ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲ ಉದ್ಯೋಗಗಳನ್ನು ತುಂಬುವುದು, ಭಾಷೆ ಹಾಗೂ ಸಂಸ್ಕೃತಿ ರಕ್ಷಣೆಗೆ ಕ್ರಮ ವಹಿಸುವುದು ಮುಂತಾದ ಕ್ರಮಗಳು ಮಾತ್ರವೇ ಎಲ್ಲ ಶೋಷಿತರ ನೈಜ ಅಭಿವೃದ್ಧಿಗೆ ನೆರವಾಗುವ ಕ್ರಮಗಳಾಗುತ್ತವೆ ಎಂದು ಸಿಪಿಐಎಂ ವಿವರಿಸಿದೆ.

ವಿವಿಧ ಜನ ಸಮುದಾಯಗಳ ಅಭಿವೃದ್ಧಿಯ ಕುರಿತಂತೆ ನಿಜವಾದ ಕಾಳಜಿಯನ್ನು ರಾಜ್ಯ ಸರಕಾರ ಹೊಂದಿದ್ದರೇ, ಜನ ವಿಭಜನೆಗೆ ಕ್ರಮ ವಹಿಸುವ ಸಂಕುಚಿತ ರಾಜಕಾರಣವನ್ನು ಬಿಟ್ಟು,

ಉಳುವವನನ್ನ ಭೂ ಒಡೆಯನನ್ನಾಗಿಸುವ, ಸಾರ್ವ ಜನಿಕ ರಂಗದಲ್ಲಿ ವ್ಯಾಪಕವಾಗಿ ಬಂಡವಾಳ ಹೂಡಿಕೆ ಮಾಡುವ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಹಾಗೂ ಸಂಪನ್ಮೂಲಗಳ ವಿಕೇಂದ್ರೀಕರಣಕ್ಕೆ ಕ್ರಮ ವಹಿಸಲಿ ಎಂದು ಸಿಪಿಐಎಂ ಒತ್ತಾಯಿಸಿದೆ.

ಮರಾಠಾ ಸಮುದಾಯದ ಪ್ರಾಧಿಕಾರದ ರಚನೆಯ ಹಿನ್ನೆಲೆಯು ರಾಜ್ಯದಲ್ಲಿ ಭಾಷಾ ಸಾಮರಸ್ಯ ಹಾಳಾಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಸರಕಾರದ ಮೇಲಿರುವಾಗ, ಅದಕ್ಕೆ ಕುಮ್ಮಕ್ಕು ಕೊಡುವ ರೀತಿಯ ಆಡಳಿತ ಪಕ್ಷದ ನಾಯಕರ, ಮಂತ್ರಿಗಳ ಹೇಳಿಕೆಗಳು ಖಂಡನಾರ್ಹವಾಗಿವೆ.

(03–12–2020)

2020 ರ ರೈತ ವಿರೋಧಿ ಸುಗ್ರೀವಾಜ್ಞೆಗಳನ್ನು ಹಿಂಪಡೆಯಲು – ಕಾಯ್ದೆಗಳನ್ನಾಗಿಸುವ ಪ್ರಯತ್ನಗಳನ್ನು ಕೈ ಬಿಡಲು ಮರಳಿ ಒತ್ತಾಯ

ಗೆ,
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ,
ವಿಧಾನ ಸೌಧ, ಬೆಂಗಳೂರು.

ಒಕ್ಕೂಟ ಸರಕಾರ ದೇಶದ ವ್ಯವಸಾಯವನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿಕೊಡಲು ಕಾರ್ಪೋರೇಟ್ ಪರವಾದ ಮತ್ತು ರೈತ ವಿರೋಧಿಯಾದ ಕೃಷಿ ಕಾಯ್ದೆಗಳನ್ನು ಹಾಗೂ ದೇಶದ ಗ್ರಾಹಕ ವಿರೋಧಿಯಾದ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆಗಳನ್ನು ಸಂಸತ್ತಿನ ವಿಧಿ, ವಿಧಾನಗಳನ್ನು ಗಾಳಿಗೆ ತೂರಿ, ಬಲವಂತವಾಗಿ ಅಂಗೀಕರಿಸಿ, ದೇಶದ ಮೇಲೆ ಹೇರಲು ಹೊರಟಿರುವುದು ತಮಗೆ ತಿಳಿದ ವಿಷಯವಾಗಿದೆ. ವಿರೋಧ ಪಕ್ಷಗಳು ಸಂಸತ್ತಿನ ಒಳಗೆ ಮತ್ತು ಹೊರಗೆ ಹಾಗೂ ದೇಶದಾದ್ಯಂತ ರೈತರು, ಕಾರ್ಮಿಕರು, ನಾಗರೀಕರು ಕಳೆದ ಎರಡು ಮೂರು ತಿಂಗಳಿಂದ ಅದರಲ್ಲೂ ಮುಖ್ಯವಾಗಿ, ಕಳೆದ ಹನ್ನೆರಡು ದಿನಗಳಿಂದ ದೆಹಲಿ ಚಲೋ ಕಾರ್ಯಕ್ರಮದಲ್ಲಿ ಪ್ರತಿರೋಧಿಸುತ್ತಿದ್ದಾರೆ. ಇದರಲ್ಲಿ ದಶ ಲಕ್ಷಾಂತರ ಗ್ರಾಮೀಣ ಜನರು ಒಕ್ಕೂಟವಾದಿ ಸರಕಾರದ ದಮನದ ನಡುವೆಯೂ ಬೀದಿ ಗಿಳಿದಿದ್ದಾರೆ. ಎರಡು ಸುತ್ತಿನ ಮಾತುಕತೆಗಳ ನಂತರವೂ, ಪಟ್ಟು ಬಿಡದೆ ರೈತರು ಚಳುವಳಿಯನ್ನು ಮುನ್ನಡೆಸಿದ್ದಾರೆ.

ದೇಶದ ರೈತರು ನಡೆಸುತ್ತಿರುವ ಈ ಚರಿತ್ರತ್ಮಾಕವಾದ ಸಮರ ಶೀಲ ಚಳುವಳಿಗೆ ಅಮೇರಿಕಾವೂ

ಪುಟ 4 ಕ್ಕೆ

ಬೋಟ್ ದುರಂತ ಗರಿಷ್ಠ ಪರಿಹಾರಕ್ಕೆ ಒತ್ತಾಯ



ಮಂಗಳೂರು ಕಡಲಿನಲ್ಲಿ ನಡೆದ ಮೀನುಗಾರಿಕಾ ದೋಣಿ ದುರಂತದಲ್ಲಿ ಮೃತಪಟ್ಟವರಿಗೆ ಮಂಗಳೂರು ಬಂದರು ಶ್ರಮಿಕರ ಸಂಘದ ನೇತೃತ್ವದಲ್ಲಿ ಡಿಸೆಂಬರ 2 ರಂದು ಸಂತಾಪ ಸಭೆ ಹಳೆ ಬಂದರು ಕಾರ್ಮಿಕರ ಕಟ್ಟೆ ಬಳಿ ನಡೆಯಿತು.

ಹಳೆ ಬಂದರು ಸಗಟು ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ಆರಂಭಗೊಳ್ಳುತ್ತಿದ್ದಂತೆ ಹಮಾಲಿ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಕಾರ್ಮಿಕರ ಕಟ್ಟೆ ಬಳಿ ಜಮಾಯಿಸಿ ಸಗಟು ಮಾರುಕಟ್ಟೆ ಮತ್ತು ದಕ್ಕೆ ಪರಿಸರದಲ್ಲಿ ಮೌನ ಮೆರವಣಿಗೆ ನಡೆಸಿ ನಂತರ ಸಂತಾಪ ಸಭೆ ನಡೆಸಲಾಯಿತು.

ವರದಿ: ವಾ.ಉ.

ಸಭೆಯನ್ನು ಉದ್ದೇಶಿಸಿ ಬಂದರು ಶ್ರಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್ ಮಾತನಾಡಿ, ದೋಣಿ ದುರಂತ ಮೀನುಗಾರರನ್ನು ಮಾತ್ರವಲ್ಲ, ಇಡೀ ಕರಾವಳಿಯ ಜನರನ್ನು ದಿಗ್ಭ್ರಮೆಗೊಳಿಸಿದೆ. ಆಕಸ್ಮಿಕ ಅವಘಡ 6 ಮಂದಿಯನ್ನು ಬಲಿ ಪಡೆದಿದೆ. ಸಮುದ್ರ ಪಾಲಾದ 6 ಮಂದಿ ಮೀನುಗಾರರ ಕುಟುಂಬಗಳಿಗೆ ಸರಕಾರ ಸೂಕ್ತ ಪರಿಹಾರ ನೀಡಬೇಕು ಮತ್ತು ಪ್ರತೀ ಸಂತ್ರಸ್ತ ಕುಟುಂಬಕ್ಕೆ ಸರಕಾರಿ ನೌಕರಿ ಘೋಷಣೆ ಮಾಡಬೇಕು. ಹಾಗೂ ಮೀನುಗಾರಿಕೆಗೆ ತೊಡಗುವ ಮೀನುಗಾರರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಬಂದರು ಶ್ರಮಿಕರ ಸಂಘದ ಅಧ್ಯಕ್ಷ ವಿಲ್ಲಿ ವಿಲ್ಸನ್, ಉಪಾಧ್ಯಕ್ಷ ಹಸನ್ ಮೋನು ಬೆಂಗ್ರೆ, ಕೋಶಾಧಿಕಾರಿ ಹರೀಶ್ ಕೆರೆಬೈಲ್, ಒಣ ಮೀನು ವಿಭಾಗದ ಅಧ್ಯಕ್ಷ ಮೊಹಮ್ಮದ್ ಮೋನು, ಕಾರ್ಯದರ್ಶಿ ಮಯ್ಯದ್ದಿ ಬೆಂಗ್ರೆ ಉಪಸ್ಥಿತರಿದ್ದರು.

ಮೀನುಗಾರರ, ಮೀನು ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಉಡುಪಿಯಲ್ಲಿ ಧರಣಿ:

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘದ ನೇತೃತ್ವದಲ್ಲಿ ಡಿಸೆಂಬರ 1 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಯಿತು.

ಧರಣಿಯನ್ನುದ್ದೇಶಿಸಿ ಮಾತನಾಡಿದ ಮೀನುಗಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಶಂಕರ್, ಮೀನುಗಾರರ ಮತ್ತು ಮೀನು ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ ಕಲ್ಯಾಣ ಮಂಡಳಿ ರಚಿಸಬೇಕು. ಮೀನು ಕಾರ್ಮಿಕರಿಗೆ ಇಲಾಖೆಯಿಂದ ಗುರುತಿನ ಚೀಟಿ, ಪಿಂಚಣಿ, ಅಪಘಾತ ಪರಿಹಾರ ಕೊಡಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಬೀದಿ ಬದಿಯಲ್ಲಿ ಮೀನು ವ್ಯಾಪಾರ ಮಾಡುವ ಮಹಿಳೆಯರಿಗೆ ಶೆಡ್‌ಗಳನ್ನು ನಿರ್ಮಿಸಿ, ಉದ್ಯೋಗ ಭದ್ರತೆ ಜೊತೆಗೆ ಸೈಕಲ್, ಬೈಕ್‌ಗಳಲ್ಲಿ ಮೀನು ಮಾರಾಟ ಮಾಡಲು ಅವಕಾಶ ನೀಡಬೇಕು. ಮೀನು ಮಾರುಕಟ್ಟೆಗಳಲ್ಲಿ ಮೂಲಸೌಲಭ್ಯಗಳನ್ನು ಒದಗಿಸಬೇಕು. ಮಣಿಪಾಲದಲ್ಲಿ ಮೀನು ಮಾರುಕಟ್ಟೆಯನ್ನು ಸರಕಾರಿ ಜಾಗದಲ್ಲಿ ನಿರ್ಮಿಸಬೇಕು ಎಂದು ಅವರು ಒತ್ತಾಯಿಸಿದರು.

ಧರಣಿ ಸತ್ಯಾಗ್ರಹದಲ್ಲಿ ಸಂಘದ ಜಿಲ್ಲಾ ಉಪಾಧ್ಯಕ್ಷ ವೆಂಕಟೇಶ್ ಕೋಣಿ, ಸಿಐಟಿಯು ಮುಖಂಡರಾದ ಸುರೇಶ್ ಕಲ್ಲಾಗರ, ಎಚ್.ನರಸಿಂಹ, ಮಹಾಬಲ ವಡೇರಹೋಬಳಿ ಮಾತನಾಡಿದರು. ಮೀನುಗಾರರ ಮುಖಂಡರಾದ ಮಹೇಶ್ ಪೂಜಾರಿ, ರಿಯಾಜ್ ಬೈಕಾಡಿ, ನಜೀರ್ ಅನ್ವರ್, ಮಹಮ್ಮದ್ ಇಕ್ಬಾಲ್ ಉಪಸ್ಥಿತರಿದ್ದರು.

ಉಡುಪಿ ಜಿಲ್ಲೆಯ ವಿವಿದೆಡೆ ಕಾರ್ಮಿಕರ ಅಖಿಲ ಭಾರತ ಮುಷ್ಕರ:

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ, ರೈತ ವಿರೋಧಿ, ಜನವಿರೋಧಿ ನೀತಿಗಳ ವಿರುದ್ಧ ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆಸಿಟಿಯು) ಕರೆ ನೀಡಿರುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಹಿನ್ನೆಲೆಯಲ್ಲಿ ನವಂಬರ 26 ರಂದು ಉಡುಪಿ ಜಿಲ್ಲೆಯ ವಿವಿದೆಡೆ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಕೇಂದ್ರ ಉಡುಪಿಯಲ್ಲಿ ಜೆಸಿಟಿಯು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಸಿಐಟಿಯು, ಎಲ್‌ಐಸಿ, ಬ್ಯಾಂಕ್ ನೌಕರರು ಮತ್ತು ಇತರ ಸಂಘಟನೆಗಳ ಕಾರ್ಮಿಕರು ಮುಷ್ಕರ ನಡೆಸಿದರು. ಸರ್ವಿಸ್ ಬಸ್ ನಿಲ್ದಾಣದಿಂದ ಅಜ್ಜರಕಾಡು ಹುತಾತ್ಮ ಸ್ಮಾರಕದವರೆಗೆ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರತಿಭಟನಾ ಸಭೆಯನ್ನುದ್ದೇಶಿಸಿ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಭಾಕರ ಬಿ.ಕುಂದರ್, ಜೆಸಿಟಿಯು ಜಿಲ್ಲಾ ಸಂಚಾಲಕ ಕೆ.ಶಂಕರ್, ಐಬಿಇಎ ಯ ಹೆರಾಲ್ಡ್ ಡಿಸೋಜ, ಎಐಬಿಇಎ ಯ ಕೆ.ರಮೇಶ್, ನಾಗೇಶ್ ನಾಯ್ಕ್, ಬಿಇಎಫ್ಐ ಯ ರವೀಂದ್ರ ಯು ಮೊದಲಾದವರು ಭಾಗವಹಿಸಿದ್ದರು.

ಬೈಂದೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ ಅಂಡರ್‌ಪಾಸ್‌ನಲ್ಲಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ನಡೆಸಲಾಯಿತು. ಸಿಐಟಿಯು ಮುಖಂಡರಾದ ರಾಜೀವ ಪಡುಕೋಣೆ, ವೆಂಕಟೇಶ ಕೋಣಿ, ಸುಶೀಲ ನಾಡ ಮಾತನಾಡಿದರು.

ಹಾಲಾಡಿ ಬಿದ್ಕಲ್‌ಕಟ್ಟೆಯಲ್ಲಿ ಕಟ್ಟಡ ಕಾರ್ಮಿಕರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸಿದ್ಧಾಪುರದಲ್ಲಿ ಕಟ್ಟಡ, ಗೇರು ಬೀಜ ಕಾರ್ಖಾನೆಯ ಕಾರ್ಮಿಕರು ಮೆರವಣಿಗೆ ನಡೆಸಿ ಬಸ್ ನಿಲ್ದಾಣ ಬಳಿ ಪ್ರತಿಭಟನೆ ನಡೆಸಿದರು. ಕಾರ್ಮಿಕ ಮುಖಂಡರಾದ ದಾಸ್ ಭಂಡಾರಿ, ಪಿ.ಟಿ.ಅಲೆಸ್ಕ್, ಸಾವಿತ್ರಿ ಭಾಗವಹಿಸಿದ್ದರು. ■

ದಿಲ್ಲಿಯ ರೈತ ಹೋರಾಟ ಬೆಂಬಲಿಸಿ ಉಡುಪಿಯಲ್ಲಿ ಧರಣಿ:

ರೈತ ವಿರೋಧಿ ಕೃಷಿ ಮತ್ತು ಭೂಕಾಯ್ದೆಗಳನ್ನು ವಿರೋಧಿಸಿ ದಿಲ್ಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಮೇಲೆ ಮೋದಿ ಸರಕಾರ ನಡೆಸಿರುವ ದಾಳಿಯನ್ನು ಖಂಡಿಸಿ ಹಾಗೂ ರೈತರ ಹೋರಾಟವನ್ನು ಬೆಂಬಲಿಸಿ ಸಿಐಟಿಯು, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ಡಿಸೆಂಬರ 1 ರಂದು ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಧರಣಿಯನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮೂಲಕ ಪ್ರಧಾನ ಮಂತ್ರಿಗೆ ಮನವಿ ಸಲ್ಲಿಸಿ ರೈತರ ಮೇಲೆ ದಾಖಲಿಸಿರುವ ಕೇಸುಗಳನ್ನು ವಾಪಾಸು ಪಡೆಯಬೇಕು. ಕಾರ್ಪರೇಟ್ ಪರ ನೀತಿ ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಸಿಐಟಿಯು ಮುಖಂಡರಾದ ಕೆ.ಶಂಕರ್, ಎಚ್. ನರಸಿಂಹ, ಶಶಿಧರ ಗೊಲ್ಲ, ಮಹಾಬಲ ವಡೇರಹೋಬಳಿ, ಬಲ್ಕೀಸ್ ಬಾನು, ಕೃಷಿಕೂಲಿಕಾರರ ಸಂಘದ ವೆಂಕಟೇಶ್ ಕೋಣಿ ಉಪಸ್ಥಿತರಿದ್ದರು. ■

2020 ರ ರೈತ ವಿರೋಧಿ ಸುಗ್ರೀವಾಜ್ಞೆಗಳನ್ನು.......... ಪುಟ 3 ರಿಂದ

ಸೇರಿದಂತೆ ಜಗತ್ತಿನಾದ್ಯಂತ ಭಾರೀ ಜನಬೆಂಬಲ ವ್ಯಕ್ತವಾಗಿದೆ. ಪ್ರತಿಭಟನೆಗಳನ್ನು ನಡೆಸಲಾಗುತ್ತಿದೆ. ಕೇಂದ್ರ ಸರಕಾರದ ಈ ನಡೆ ವ್ಯಾಪಕವಾದ ಖಂಡನೆಗೊಳಗಾಗಿದೆ. ಇದೆಲ್ಲವನ್ನು ತಾವು ಗಮನಿಸಿದ್ದೀರೆಂದು ಭಾವಿಸುವೆವು.

ಇನ್ನು ತಮ್ಮ ಸರಕಾರ, ಸದರಿ ಕಾರ್ಪೋರೇಟ್ ಕೃಷಿಗೆ ನೆರವಾಗುವ ದುರುದ್ದೇಶದಿಂದ, ರಾಜ್ಯದ ರೈತರಿಗೆ ಉದ್ಯೋಗ ಭದ್ರತೆ ಒದಗಿಸುತ್ತಿದ್ದ ಭೂ ಸುಧಾರಣಾ ತಿದ್ದುಪಡಿ ಹಾಗೂ ಎಪಿಎಂಸಿ ತಿದ್ದುಪಡಿ ಮತ್ತು ಅಗತ್ಯ ವಸ್ತುಗಳ ತಿದ್ದುಪಡಿ ಸುಗ್ರೀವಾಜ್ಞೆಗಳನ್ನು ಹೊರಡಿಸಿದೆ. ಇದರ ವಿರುದ್ದವು ತಾವು ವಿರೋದ ಪಕ್ಷಗಳಿಂದ ಮತ್ತು ರಾಜ್ಯದ ರೈತರಿಂದ ತೀವ್ರ ಪ್ರತಿರೋಧಗಳನ್ನು ಎದುರಿಸಿದಿರಿ. ಆದಾಗಲೂ ತಾವು ಈ ಪ್ರತಿರೋಧಗಳನ್ನು ಲೆಕ್ಕಿಸದೇ ಕಾರ್ಪೋರೇಟ್ ಕಂಪನಿಗಳಿಗೆ ತಮ್ಮ ಬದ್ಧತೆಯನ್ನು ತೋರಲು ಮುಂದಾದಿರಿ.

ಇಡೀ ರಾಜ್ಯ ಬರಗಾಲ, ಅತೀವೃಷ್ಠಿ ಹಾಗೂ ಕೋವಿಡ್–19 ಮತ್ತು ಆರ್ಥಿಕ ಬಿಕ್ಕಟ್ಟುಗಳನ್ನು ದೊಡ್ಡ ಪ್ರಮಾಣದಲ್ಲಿ ಎದುರಿಸುತ್ತಿರುವಾಗ, ಈ ಕರಿತು ಗಂಭೀರ ಗಮನ ಹರಿಸಿ ಪರಿಹರಿಸುವ ಕ್ರಮಗಳನ್ನು ಕೈಗೊಳ್ಳುವ ಬದಲು, ತಾವು ಕಾರ್ಪೋರೇಟ್ ಕಂಪನಿಗಳ ಲೂಟಿಗೆ ರಾಜ್ಯವನ್ನು ತೆರೆಯಲು ವಿಧಾನ ಸಭಾ ಅಧಿವೇಶನವನ್ನು ನಡೆಸಿದಿರಿ. ಅಲ್ಲಿಯೂ ವಿರೋದ ಪಕ್ಷಗಳಿಂದ ತೀವ್ರ ವಿರೋಧವನ್ನು ಎದುರಿಸಿದರಿ. ನಿಮಗಿರುವ ಬಲವನ್ನುಪಯೋಗಿಸಿ ವಿಧಾನ ಸಭೆಯಲ್ಲಿ ಸುಗ್ರೀವಾಜ್ಞೆಗಳನ್ನು ಮಸೂದೆಗಳನ್ನಾಗಿಸಿ ಪಾಸ್ ಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾದರೂ, ವಿಧಾನ ಪರಿಷತ್ ನಲ್ಲಿ ಮಸೂದೆಗಳು ಬಿದ್ದು ಹೋಗುವ ಭಯದಿಂದ ಅವುಗಳನ್ನು ಮಂಡಿಸಲು ತಮಗೆ ಸಾಧ್ಯವಾಗದೇ ವಿಫಲರಾದಿರಿ.

ಹೊರಗಡೆ ರೈತರು – ಕಾರ್ಮಿಕರು ವರ್ತಕರು, ನಾಗರೀಕರು ಅಧಿವೇಶನ ದುದ್ದಕ್ಕೂ ಪ್ರತಿಭಟನೆಗಳನ್ನು ನಡೆಸಿದರು. ಮಾತ್ರವಲ್ಲಾ, ಸೆಪ್ಟಂಬರ್ 28, 2020 ರಂದು ಕರ್ನಾಟಕ ಬಂದ್ ಯಶಸ್ವಿಯಾಗಿ ಸಂಘಟಿಸಿ ರಾಜ್ಯವನ್ನು ಬಂದ್ ಮಾಡುವ ಮೂಲಕ ವ್ಯಾಪಕ ಪ್ರತಿರೋಧ ವ್ಯಕ್ತ ಪಡಿಸಿದರು. ಅದರಿಂದಲೂ ಪ್ರಧಾನಮಂತ್ರಿಗಳು ಮಾತ್ರವಲ್ಲಾ ತಾವೂ ಕೂಡಾ, ಪಾಠವನ್ನು ಕಲಿಯಲಿಲ್ಲ. ಜನರ ಅಭಿಪ್ರಾಯಗಳನ್ನು ಪರಿಗಣಿಸದೇ ರಾಜ್ಯದ ಹಿತವನ್ನು ಕಾರ್ಪೋರೇಟ್ ಕಂಪನಿಗಳಿಗೆ ಒತ್ತೆ ಇಡುವ ತಮ್ಮ ಬದ್ದತೆ ಮುಂದುವರೆಸಿದಿರಿ! ಸುಗ್ರೀವಾಜ್ಞೆಗಳ ಸಮಯ ಮುಗಿಯಿತೆಂದು, ಈ ನಡುವೆ ನಡೆದ ವಿಧಾನ ಮಂಡಲಗಳ ಅಧಿವೇಶನಗಳಲ್ಲಿ ಮಸೂದೆಗಳನ್ನು ಪಾಸ್ ಮಾಡಿಸಿಕೊಳ್ಳುವಲ್ಲಿ ವಿಫಲವಾಗಿದ್ದರೂ, ಮರು ಸುಗ್ರೀವಾಜ್ಞೆ ಗಳನ್ನು ಹೊರಡಿಸಿದಿರಿ!

ಇದೀಗ ಇಡೀ ರಾಜ್ಯದ ಜನತೆ ಒಂದೆಡೆ ಅತ್ಯಂತ ಸಂಕಷ್ಠದಲ್ಲಿರುವಾಗ ಮತ್ತು ಗ್ರಾಮೀಣ ಜನತೆ ರೈತರು ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ತೊಡಗಿರುವಾಗ, ಮರೆ ಮೋಸದ ರೀತಿಯಲ್ಲಿ, ನೀವು ಪುನಃ ಡಿಸೆಂಬರ್ 07, 2020 ರಿಂದ ವಿಧಾನ ಸಭಾ ಅಧಿವೇಶನವನ್ನು ಕರೆದಿದ್ದೀರಿ? ಮತ ನೀಡಿದ ಜನರ ಸಮಸ್ಯೆಗಳ ಪರಿಹಾರಕ್ಕಿಲ್ಲದ ಬದ್ಧತೆ , ಕಾರ್ಪೋರೇಟ್ ಕಂಪನಿಗಳಿಗೆ ಅದೆಂತಹ ಬದ್ಧತೆ ತಮ್ಮದು!

ಮತ ನೀಡಿದ ರಾಜ್ಯದ ನಾಗರೀಕರು ಮತ್ತು ಅನ್ನದಾತರ ಕುರಿತು ತಮಗೆ ಕಿಂಚಿತ್ತಾದರೂ ಗೌರವವಿದ್ದರೇ, ಜನತೆಯ ಅಭಿಪ್ರಾಯಗಳಿಗೆ ಮನ್ನಣೆ ನೀಡಿ, ಕೂಡಲೇ ಕಾರ್ಪೋರೇಟ್ ಕಂಪನಿಗಳ ಲೂಟಿಗೆ ನೆರವಾಗುವ ತಾವು ಈಚೆಗೆ ಹೊರಡಿಸಿದ ಭೂ ಸುಧಾರಣೆ ಕಾಯ್ದೆಯ ಮತ್ತು ಏಪಿಎಂಸಿ ಕಾಯ್ದೆಯ ತಿದ್ದುಪಡಿ ಸುಗ್ರೀವಾಜ್ಞೆಗಳನ್ನು ವಾಪಾಸು ಪಡೆಯಿರಿ! ಅದೇ ರೀತಿ, ಈ ವಿಧಾನ ಮಂಡಲದ ಅಧಿವೇಶನದಲ್ಲಿ ಅವುಗಳನ್ನು ಕಾಯ್ದೆಗಳನ್ನಾಗಿಸುವ ಪ್ರಯತ್ನಗಳನ್ನು ಕೈ ಬಿಡಿರಿ!!

ಅದೇ ರೀತಿ, ಒಕ್ಕೂಟ ಸರಕಾರ ಅಥವಾ ಕೇಂದ್ರ ಸರಕಾರ ಜಾರಿಗೊಳಿಸಲು ಹೊರಟಿರುವ ಕಾರ್ಪೋರೇಟ್ ಕೃಷಿ ಕಾಯ್ದೆಗಳನ್ನು ಮತ್ತು ಅಗತ್ಯ ವಸ್ತುಗಳ ತಿದ್ದಪಡಿ ಕಾಯ್ದೆಗಳನ್ನು ಹಾಗೂ ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯನ್ನು ವಾಪಾಸು ಪಡೆಯುವಂತೆ ರಾಜ್ಯದ ಜನತೆಯ ಪರವಾಗಿ ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಿ ಕೇಂದ್ರ ಸರಕಾರವನ್ನು ಒತ್ತಾಯಿಸಿ ಪತ್ರ ಬರೆಯಲು ಈ ಮೂಲಕ ಒತ್ತಾಯಿಸುವೆವು.

ಇದು ರಾಜ್ಯ ಹಾಗೂ ದೇಶವನ್ನು ಕಾರ್ಪೋರೇಟ್ ಕಂಪನಿಗಳ ಲೂಟಿಯಿಂದ ಮತ್ತು ಹಿಡಿತದಿಂದ ರಕ್ಷಿಸಲು ಮತ್ತು ಆಹಾರದ ಭದ್ರತೆಗೆ ಹಾಗೂ ದೇಶದ ಸ್ವಾತಂತ್ರ್ಯ, ಸ್ವಾವಲಂಬನೆ ಮತ್ತು ಸಾರ್ವಭೌಮತೆಯ ರಕ್ಷಣೆಯ ದೃಷ್ಟಿಯಿಂದಲೂ, ಇಂತಹ ನಡೆ ಅಗತ್ಯವಾಗಿದ್ದು, ಇದೊಂದು ಚಾರಿತ್ರಿಕ ಕರ್ತವ್ಯವಾಗಿದೆ. ಆದ್ದರಿಂದ ಜನತೆಯ ಜೊತೆ ಹಠವನ್ನು ಬಿಟ್ಟು ಈ ಕುರಿತು ಅಗತ್ಯ ಕ್ರಮ ವಹಿಸಲು ಮರಳಿ ಮನವಿ ಮಾಡಿದೆ.

(04.12.2020)

ಸಿಲಿಕಾನ್ ಸಿಟಿಯ ಕಸ ನಿರ್ವಹಣೆ: ಮಂಡಳಿ ರಚಿಸಿ ಜನರ ಮೇಲೆ ಭಾರ ಹಾಕಲು ಮುಂದಾದ ಬಿಬಿಎಂಪಿ





ಬೆಂಗಳೂರಿನಲ್ಲಿ ಕಸವನ್ನು ನಿರ್ವಹಣೆ ಮಾಡುವುದಕ್ಕಾಗಿ ಬಿಬಿಎಂಪಿ ಪ್ರತ್ಯೇಕ ಮಂಡಳಿ ರಚಿಸಲು ಮುಂದಾಗಿ. ಬಿಬಿಎಂಪಿ ಈ ನಿರ್ಧಾರಕ್ಕೆ ಅನೇಕರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕಸವನ್ನು ನಿರ್ವಹಣೆ ಮಾಡಲು ಪ್ರತ್ಯೇಕ ಮಂಡಳಿಯ ಅಗತ್ಯತೆ ಇದೆಯಾ? ಈ ಮಂಡಳಿಗೆ ವಿರೋಧ ಯಾಕೆ ಬರ್ತಾ ಇದೆ. ಕಸದ ನಿರ್ವಹಣೆಗೆ ಇರುವ ದಾರಿ ಯಾವುದು? ಎಂಬ ಪ್ರಶ್ನೆ ಬಿಬಿಎಂಪಿ ಗೆ ಈಗ ತಲೆ ನೋವಾಗಿದೆ.

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಕಸದ ನಿರ್ವಹಣೆ ಬಿಬಿಎಂಪಿಗೆ ದೊಡ್ಡ ಸವಾಲಾಗಿದ್ದು, ಕಸದ ನಿರ್ವಹಣೆಗಾಗಿ ಪ್ರತ್ಯೇಕ ಮಂಡಳಿಯನ್ನು ರಚಿಸಲು ಮುಂದಾಗಿದೆ. ಇದರ ಬೆನ್ನಲ್ಲೆ ಕಸದ ನಿರ್ವಹಣೆಯ ಶುಲ್ಕವನ್ನು ಹೆಚ್ಚಿಸಲು ಮುಂದಾಗಿದೆ. ಬೆಂಗಳೂರಿನಲ್ಲಿ ಎಲ್ಲಂದರಲ್ಲಿ ಕಸ ಹಾಕುತ್ತಿರುವುದನ್ನು, ಕಸದ ಗುಡ್ಡೆಗಳನ್ನು ನಾವು ನೋಡ್ತಾ ಇರ್ತೆವೆ, ಸಿಲಿಕಾನ್ ಸಿಟಿ ವಿಸ್ತಾರ 800 ಚ.ಕಿ.ಮೀ ವರೆಗೆ ವಿಸ್ತರಣೆಯಾಗಿದ್ದು, ಸುಮಾರು 1.20 ಕೋಟಿ ಜನಸಂಖ್ಯೆ ಹೊಂದಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಗರ ಬೆಳವಣಿಗೆ ಆಗುತ್ತಿರುವುದರಿಂದ ಮೂಲಸೌಕರ್ಯ ಒದಗಿಸುವುದು ಸವಾಲಿನ ಕಾರ್ಯವಾಗಿದೆ. ನಗರದ ತ್ಯಾಜ್ಯ ಉತ್ಪಾದನೆ ಪ್ರಮಾಣ ಹೆಚ್ಚಾಗುತ್ತಿದ್ದು ಬೆಂಗಳೂರು ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಮಾದರಿಯಲ್ಲಿ ಪ್ರತ್ಯೇಕ ಘನತ್ಯಾಜ್ಯ ನಿರ್ವಹಣಾ ಮಂಡಳಿ ಆರಂಭಿಸುವುದು ಅಗತ್ಯವೆನಿಸುತ್ತದೆ. ಪ್ರತಿನಿತ್ಯ ಉತ್ಪಾದನೆಯಾಗುತ್ತಿರುವ ಸುಮಾರು 4,500 ಟನ್ ತ್ಯಾಜ್ಯ ನಿರ್ವಹಣೆ ಹೊರೆಯಾಗಿ ಕಾಡುತ್ತಿದೆ. 10 ಲಕ್ಷಕ್ಕೂ ಅಧಿಕ ತ್ಯಾಜ್ಯ ಉತ್ಪಾದನಾ ಕೇಂದ್ರಗಳಿಂದ ಕಸ ಸಂಗ್ರಹಿಸಲಾಗುತ್ತಿದೆ. ಜತೆಗೆ ರಸ್ತೆಗಳು, ಉದ್ಯಾನಗಳು, ಮಾರುಕಟ್ಟೆಗಳು ಹಾಗೂ ಬ್ಲಾಕ್ ಸ್ಪಾಟ್‌ಗಳಿಂದ ಹೆಚ್ಚುವರಿ ತ್ಯಾಜ್ಯ ಉತ್ಪಾದನೆಯಾಗುತ್ತಿದೆ.

ಇದನ್ನು ನಿರ್ವಹಣೆ ಮಾಡುವುದಕ್ಕಾಗಿ ಒಂದು ಪ್ರತ್ಯೇಕ ಮಂಡಳಿಯನ್ನು ಮಾಡಬೇಕು ಎಂದು ಬಿಬಿಎಂಪಿ ಯೋಜನೆಯನ್ನು ಸಿದ್ದಪಡಿಸಿ ಸರಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಪ್ರತ್ಯೇಕ ಮಂಡಳಿ ರಚನೆಯಾದರೆ ಕಸ ನಿರ್ವಹಣೆಯ ಜವಬ್ದಾರಿ ಆ ಮನಯವರದ್ದೆ ಆಗಿರುತ್ತದೆ, ಅದಕ್ಕಾಗಿ ಅವರು ಹಣವನ್ನು ಕೊಡಬೇಕಾಗುತ್ತದೆ. ಬಿಬಿಎಂಪಿ ಅಥವಾ ಬಿಬಿಎಂಪಿಯ ಚುನಾಯಿತ ಸದಸ್ಯರನ್ನು ಪ್ರಶ್ನಿಸುವ ಹಕ್ಕನ್ನು ಇದು ಕಸಿಯುತ್ತದೆ. ಅಂದ್ರೆ ಕಸ ತೆಗೆಯುವ ಕುರಿತು ನಾವು ಇವರನ್ನು ಸಂಪರ್ಕಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಇದರ ವಿರುದ್ದ ಈಗ ಕೂಗು ಎದ್ದು ಬಂದಿದೆ.

ಇನ್ನೂ ಕಸದ ನಿರ್ವಹಣೆಗಾಗಿ ವಿಧಿಸುವ ಬಳಕೆದಾರರ ಶುಲ್ಕವನ್ನು ಸಂಗ್ರಹಿಸುವುದಕ್ಕಾಗಿ ಧರ ನಿಗದಿ ಮಾಡಲಾಗಿದೆ. ಮನಗೆಳಿಗೆ ಇಂದು ತಿಂಗಳಿಗೆ 200 ರೂ ಹಣ ನಿಗದಿ ಮಾಡಲಾಗಿದೆ. ವಸತಿ ಕಟ್ಟಡಗಳಿಗೆ–1000 ಚದರ ಅಡಿ ವಿಸ್ತೀರ್ಣಕ್ಕೆ ಒಂದು ತಿಂಗಳಿಗೆ 10 ರೂ, 1000 ದಿಂದ 3000 ಚದರ ಅಡಿ ವಿಸ್ತೀರ್ಣಕ್ಕೆ ಒಂದು ತಿಂಗಳಿಗೆ 30 ರೂ, 3000 ಸಾವಿರ ಮೇಲ್ಪಟ್ಟು ಚದರ ಅಡಿ ವೀಸ್ತೀರ್ಣಕ್ಕೆ 50 ರೂ ದರ ನಿಗದಿ ಮಾಡಲಾಗಿದೆ.

ವಾಣಿಜ್ಯ ಕಟ್ಟಡಗಳಿಗೆ ವಾಣಿಜ್ಯ ಕಟ್ಟಡಗಳಿಗೆ : 1000ದ ವರೆಗಿನ ಚದರ ಅಡಿಗೆ ; 50 ರೂ, 1001 ದಿಂದ 5000 ಚದರ ಅಡಿಗೆ 100 ರೂ, 5000 ಮೇಲ್ಪಟ್ಟ ಚದರ ಅಡಿಗೆ 200 ರೂ ಯನ್ನು ನಿಗದಿ ಪಡಿಸಲಾಗಿದೆ.

ಕೈಗಾರಿಕಾ ಕಟ್ಟಡಗಳಿಗೆ: 1000ದವರೆಗೆ ನ ಚದರ ಅಡಿಗೆ; 50 ರೂ, 1001–5000 ಚದರ ಅಡಿಗೆ 200ರೂ 5000 ಮೇಲ್ಪಟ್ಟು; 300 ರೂ ನಿಗದಿ ಮಾಡಲಾಗಿದೆ.

ಹೋಟೆಲ್, ಕಲ್ಯಾಣ ಮಂಟಪ, ಆರೋಗ್ಯಸೇವಾ ಸಂಸ್ಥೆ ಕಟ್ಟಡಗಳಿಗೆ 10,000ದವರೆಗೆ ಚದರ ಅಡಿಗೆ; 300 ರೂ, 10,000–50,000 ಚದರ ಅಡಿಗೆ 500 ರೂ, 50,000 ಮೇಲ್ಪಟ್ಟು; 600 ರೂ ನಿಗದಿ ಮಾಡಲಾಗಿದೆ.

ಕಸ ನಿರ್ವಹಣೆಗೆ ಪ್ರತ್ಯೇಕ ಮಂಡಳಿ ಅಗತ್ಯವಿಲ್ಲ, ಪ್ರಭಾವಿ ಶಾಸಕರು ಸಚಿವರು ಹಣ ನುಂಗೋದಕ್ಕೆ ಈ ಮಂಡಳಿ ಸಹಾಯ ಮಾಡಬಹುದು ಎಂದು ಅಮ್ ಆದ್ಮಿ ಪಕ್ಷದ ಶಾಂತಲಾ ದಾಮ್ಲೆಯವರು ಆರೋಪಿಸಿದ್ದಾರೆ. ಹಾಗಾದ್ರೆ ಈ ಕಸದ ನಿರ್ವಹಣೆಗೆ ಪರಿಹಾರ ಇಲ್ವಾ? ಬಿಬಿಎಂಪಿ ಮಾಡಬೇಕಿಗಿರುವ ಕೆಲಸವಾದ್ರು ಏನು ಎಂಬ ಪ್ರಶ್ನೆ ಈಗ ಸಹಜವಾಗಿ ಉದ್ಭವಿಸುತ್ತೆ. ಕಸದಿಂದ ಮುಕ್ತಿಯಾಗೋದಕ್ಕೆ ಸಾಧ್ಯವೆ ಇಲ್ಲ, ಕಸದಿಂದ ರಸ ಮಾಡಿದ ಮಾದರಿ ಎಲ್ಲಿಯಾದರೂ ಇದೆಯಾ? ಹೌದು ಖಂಡಿತಾ ಇದೆ, ಕೇರಳದಲ್ಲೇ ಗಬ್ಬು ಜಿಲ್ಲೆ ಎಂದು ಖ್ಯಾತವಾಗಿದ್ದ ಕೊಜಿಕ್ಕೋಡ್(ಕಲ್ಲಿಕೋಟೆ) ಅದನ್ನು ಸುಂದರಗೊಳಿಸಿದ ಪರಿ ಮತ್ತು ಕೊಜಿಕೊಡಿನ ಪಕ್ಕದಲ್ಲೇ ಇದ್ದ ವೆಂಗೇರಿ ಗ್ರಾಮವನ್ನು ಸಂಪೂರ್ಣ ಕೊಳೆ ಮುಕ್ತ, ಪ್ಲಾಸ್ಟಿಕ್ ಮುಕ್ತಾ ಮತ್ತು ಸಾವಯವ ಹಳ್ಳಿಯನ್ನಾಗಿ ಪರಿವರ್ತಿಸಿದ ಕಥೆ ನಮ್ಮ ಕಣ್ಮುಂದೆ ಇದೆ.

ಕೇರಳದ ಕೆ.ಎಸ್.ಎಸ್.ಪಿ(ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು) ಏನಿದೆ ಅದು ವೆಂಗೇರಿಯನ್ನು ಶುಚಿಗೊಳಿಸುವ ಜವಬ್ದಾರಿಯನ್ನು ತೆಗೆದುಕೊಂಡು ಕಾರ್ಯಾಚರಣೆಗೆ ಇಳಿಯುತ್ತೆ. ಕೊಜೊಕ್ಕೋಡಿನ ಕೆಲ ಶಾಲೆಗಳಲ್ಲಿ ಮತ್ತು ಬಡಾವಣೆಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯಗಳು ಉಂಟು ಮಾಡುವ ಪರಿಸರಹಾನಿ ಆ ಮೂಲಕ ಹಬ್ಬುವ ಆರೋಗ್ಯದ ಹಾನಿಗಳ ಕುರಿತು ಜಾಗೃತಿ ಮೂಡುಸುವ ವೇದಿಕೆಯಾಗಿ "ನಿರವು" ಹುಟ್ಟಿಕೊಂಡಿತು ಅದು 'ಶೂನ್ಯ ಕಸ'ದ ಯೋಜನೆ ಸಿದ್ಧಪಡಿಸಿ ಕೊಜಿಕ್ಕೋಡಿನ ಸನಿಹದ ವೆಂಗೇರಿ ಗ್ರಾಮವನ್ನು ಮಾದರಿಯಾಗಿ ಆರಿಸಿಕೊಂಡು ಸುಂದರ ಬದುಕಿಗೆ ಜ್ಞಾನ, ಕಲೆ ಮತ್ತು ಸಿಹಿನಗು ಎನ್ನುವ ಘೋಷಣೆ ನೀಡಲಾಗುತ್ತದೆ. ಸಮೀಪವಿರುವ ಕೃಷಿ ವಿಶ್ವ ವಿದ್ಯಾಲಯದ ಎನ್.ಎಸ್.ಎಸ್ ಸ್ವಯಂಸೇವಕರು, ಕೆ.ಎಸ್.ಎಸ್.ಪಿ ಸದಸತ್ವ ಪಡೆದ ವಿದ್ಯಾರ್ಥಿಗಳು ಮತ್ತು ಪ್ರಗತಿಶೀಲ ಪ್ರಾಧ್ಯಾಪಕರು ಮತ್ತು ಸಾರ್ವಜನಿಕರ ಸಹಯೋಗದೊಂದಿಗೆ ಮನೆ ಮನೆಗೆ ತೆರಳಿ ಜಾಗೃತಿಯನ್ನು ಮೂಡಿಸಲಾಗುತ್ತದೆ.

ಈಗಾಗಲೆ ಜನರು ಕಸವನ್ನು ಮನ ಬಂದಂತೆ ಎಸೆಯುತ್ತಿದ್ದ ಜಾಗದಲ್ಲಿಯೇ ತಾತ್ಕಾಲಿಕ ಗುಡಾರವನ್ನು ಹಾಕಿ, ಬ್ಯಾನರ್ ಕಟ್ಟಿ ಕಸ ಸ್ವೀಕರಣಾ ಘಟಕವನ್ನು ಸ್ಥಾಪಿಸಲಾಯಿತು. ಜನರು ತಂದ ಕಸವನ್ನು ಪ್ಲಾಸ್ಟಿಕ್ ಮತ್ತು ಗಾಜುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಭದ್ರವಾಗಿ ಬಂದಿಸಿ ಗುಡಾರದ ಒಂದು ಮೂಲೆಯಲ್ಲಿ ಜೋಡಿಸಿಡಲಾರಂಬಿಸಿದರು, ಕೊಳೆಯಬಹುದಾದ ಕಸವನ್ನು ಅಲ್ಲಿಯೇ ಎರೆಡೆರಡು ಅಡಿ ಅಗಲ ಮತ್ತು ಮೂರು ಅಡಿ ಆಳದ ಸುಮಾರು 50 ಗುಂಡಿಗಳನ್ನು ತೆಗೆದು, ಹೂಳಿ, ಮಣ್ಣು ಮುಚ್ಚುವ ಪ್ರಾರಂಭದ ಕೆಲಸ ಶುರುವಾಯಿತು. ಸುಮಾರು 1 ತಿಂಗಳ ಅವಧಿಯಲ್ಲಿ ಇಡಿ ವೆಂಗೇರಿಯ ಬೀದಿ ಬೀದಿಯ ಕಸ, ಕಸಕೇಂದ್ರಕ್ಕೆ ಬೇರೆ ಬೇರೆಯಾಗೇ ಬರಲು ಶುರುವಾಯಿತು.

ಆ ತಂಡದ ಸದಸ್ಯರು ಕಸವನ್ನು ರಸಮಾಡ ಹೊರಟ ಫಲವಾಗಿ ಸುಮಾರು 15 ಲೋಡು ಪ್ಲಾಸ್ಟಿಕ್ ಸಂಬಂದಿತ ವಸ್ತುಗಳು ಈರೋಡಿನ ರೀ ಸೈಕಲ್ ಕಂಪೆನಿಗೆ ಮಾರಾಟವಾಯಿತು. ಅದರ ಮಾರಾಟದಿಂದ ಸುಮಾರು 50ಸಾವಿರ ರೂ ವೆಂಗೇರಿಯ ನಿರುವ ಸಂಘಟನೆಗೆ ವರಮಾನವಾಗಿ ಬಂತು. ಆ ಹಣದಿಂದ ಅಗತ್ಯ ಮೂಲಭೂತ ಪರಿಕರ ಹಾಗೂ 50ಸಾವಿರ ಮಣ್ಣಿನ ಕುಂಡಗಳನ್ನು ಕೊಂಡು 100 ಮನೆಗೆ ವಿತರಿಸಲಾಯಿತು. ಗುಳಿಯಲ್ಲಿ ಮುಚ್ಚಿಟ್ಟ ಕರಗುವ ತ್ಯಾಜ್ಯ ಆ ವೇಳೆಗೆ ಅದ್ಬುತ ಸಾವಯವ ಗೊಬ್ಬರವಾಗಿತ್ತು ಕೃಷಿ ವಿಜ್ಞಾನ ಕೇಂದ್ರ ಮತ್ತು ವಿಶ್ವ ವಿದ್ಯಾಲಯದ ಸಹಯೋಗ ಮತ್ತು ಮಾರ್ಗದರ್ಶನದೊಂದಿಗೆ ಆ ಗೊಬ್ಬರವನ್ನು ಸರಳವಾಗಿ ಪರಿಷ್ಕರಿಸಿ ಮನೆ ಮನೆಗೆ ಮರು ವಿತರಣೆ ಮಾಡಿ ತರಕಾರಿ ಬೀಜ ಹಾಗೂ ಗಿಡಗಳನ್ನು ಕೊಟ್ಟು ಮನೆಯಂಗಳದಲ್ಲಿ ಕೃಷಿಗೆ ಚಾಲನೆ ನೀಡಲಾಯಿತು. ಮೂರು ತಿಂಗಳಲ್ಲೇ ವೆಂಗೇರಿಯ ಮನೆ–ಮನೆಯ ಕಾಂಪೌಡ್, ಟೆರೇಸ್, ಹಿತ್ತಿಲುಗಳಲ್ಲಿ ಬೆಂಡೆ, ಬದನೆ, ಸುವರ್ಣಗೆಡ್ಡೆ, ಶುಂಟಿ, ಸೋರೇಕಾಯಿ, ಕುಂಬಳ, ಬಾಳೆ, ನಳ–ನಳಿಸುವ ಹೂದೋಟ, ಮನೆಯ ಸೂರುಗಳಲ್ಲಿ ಅಣಬೆಗಳನ್ನು ಬೆಳೆಯತೊಡಗಿದ್ದರ ಮಾದರಿ ನಮ್ಮ ಕಣ್ಮುಂದೆ ಇದೆ.

ದೇಶದ 10 ಮಲೀನ ನಗರಗಳ ಪೈಕಿ ಬೆಂಗಳುರು ಒಂದಾಗಿದೆ. ವಾಯು ಮಾಲಿನ್ಯದಲ್ಲಿ ಬೆಂಗಳುರು ಮೊದಲ ಸ್ಥಾನದಲ್ಲಿದೆ. ಘನತ್ಯಾಜ್ಯ ನಿರ್ವಹಣಗೆ ಬಿಬಿಎಂಪಿ ಸುರಿಯುತ್ತಿರುವ ಹಣ ದೇಶದಲ್ಲಿ ಬೇರೆ ಯಾವ ನಗರಗಳು ಸುರಿಯುತ್ತಿಲ್ಲ. ಸರಳ ಬದುಕಿಗೆ ಮಾರಕವಾಗಿರುವ ಕಸವನ್ನು ನಿರ್ವಹಣೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಬದ್ಧತೆ ಮತ್ತು ಸಮಾಜವಾದಿ ತತ್ವದ ನಿಲುವು ಇದ್ದವರಿಗೆ ಮಾತ್ರ ಸಾಧ್ಯ. ಬಿಬಿಎಂಪಿ ಈಗಲಾದರೂ ಎಚ್ಚುತ್ತುಕೊಳ್ಳಬೇಕಿದೆ ಕಸದ ನಿರ್ವಹಣೆಗಾಗಿ ಶಾಶ್ವತ ಪರಿಹಾರಕ್ಕೆ ಕ್ರೀಯಾಯೋಜನೆ ರೂಪಿಸಬೇಕಿದೆ. ಇತರ ರಾಜ್ಯಗಳ ಮಾದರಿಯನ್ನು ಅನುಸರಿಸಲು ಮುಂದೆ ಬರಬೇಕಿದೆ.



ಬಿಸಿಯೂಟ ಸ್ಥಗಿತಕ್ಕೆ ಪರಿಹಾರ; ಪರಿಷ್ಕೃತ ಪ್ರಸ್ತಾವ ಸಲ್ಲಿಸಲು ಹೈಕೋರ್ಟ್ ಸೂಚನೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಸ್ಥಗಿತಗೊಂಡಿದ್ದ ಕಾರಣಕ್ಕೆ ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳ ಮಕ್ಕಳಿಗೆ ಪರಿಹಾರ ನೀಡುವ ಸಂಬಂಧ ಪರಿಷ್ಕೃತ ಪ್ರಸ್ತಾವ ಸಲ್ಲಿಸುವಂತೆ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೋಮವಾರ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ, ಕೋವಿಡ್–19ಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ವಿಚಾರಣೆ ನಡೆಸಿತು. ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, 'ಮಧ್ಯಾಹ್ನದ ಬಿಸಿಯೂಟ ಯೋಜನೆ ಸ್ಥಗಿತಗೊಂಡಿದ್ದ ಅವಧಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಅಕ್ಕಿ ಅಥವಾ ಗೋಧಿಯ ಜತೆಗೆ ಅಡುಗೆ ತಯಾರಿಯ ವೆಚ್ಚದ ಬಾಬ್ತು, ತೊಗರಿ ಬೇಳೆಯನ್ನೂ ನೀಡಲಾಗುವುದು' ಎಂದು ತಿಳಿಸಿದರು.

'ಐದನೇ ತರಗತಿಯೊಳಗಿನ ಮಕ್ಕಳಿಗೆ ಪ್ರತಿ ತಿಂಗಳಿಗೆ 1.25 ಕೆ.ಜಿ. ತೊಗರಿ ಬೇಳೆ ಮತ್ತು ಆರರಿಂದ ಹತ್ತನೇ ತರಗತಿವರೆಗಿನ ಮಕ್ಕಳಿಗೆ ಪ್ರತಿ ತಿಂಗಳಿಗೆ 1 ಕೆ.ಜಿ. 875 ಗ್ರಾಂ. ತೊಗರಿ ಬೇಳೆ ವಿತರಿಸಲಾಗುವುದು' ಎಂದು ಪ್ರಮಾಣಪತ್ರದಲ್ಲಿ ಮಾಹಿತಿ ನೀಡಿದರು.

'ರಾಜ್ಯ ಸರ್ಕಾರವು ಬಿಸಿಯೂಟ ಸ್ಥಗಿತಗೊಂಡಿದ್ದ ಕಾರಣಕ್ಕಾಗಿ ಪರಿಹಾರ ನೀಡಲು ರೂಪಿಸಿರುವ ಯೋಜನೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆಯ ನಿಯಮಗಳು–2015ರ ನಿಯಮ 3ರ ಉಪ ನಿಯಮ 9 ಅನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಸರ್ಕಾರ ತನ್ನ ನಿರ್ಧಾರವನ್ನು ಪರಿಷ್ಕರಿಸಬೇಕು' ಎಂದು ವಿಭಾಗೀಯ ಪೀಠ ನಿರ್ದೇಶನ ನೀಡಿತು.

ಯೋಜನೆ ಸ್ಥಗಿತಗೊಂಡಿದ್ದ ಅವಧಿಯಲ್ಲಿನ ಅಡುಗೆ ತಯಾರಿ ವೆಚ್ಚಕ್ಕೆ ಸೀಮಿತವಾಗಿ ಪರಿಹಾರ ಒದಗಿಸುವುದರಿಂದ ಆ ಅವಧಿಯಲ್ಲಿ ಉಂಟಾದ ಅಪೌಷ್ಟಿಕತೆಯ ಸಮಸ್ಯೆಗೆ ಉತ್ತರ ದೊರಕುವುದಿಲ್ಲ. ಮಕ್ಕಳಲ್ಲಿನ ಅಪೌಷ್ಟಿಕತೆ ಕುರಿತು ಅಧ್ಯಯನ ನಡೆದಿದೆಯೇ ಎಂಬುದನ್ನು ತಿಳಿಯಲು ನ್ಯಾಯಾಲಯ ಬಯಸುತ್ತದೆ ಎಂದು ಪೀಠ ಹೇಳಿತು.

ಕೋವಿಡ್–19 ಅವಧಿಯಲ್ಲಿ ಯೋಜನೆಯ ಅನುಷ್ಠಾನ ಆಗದೇ ಇರುವುದರಿಂದ ಅಪೌಷ್ಟಿಕತೆ ಪ್ರಮಾಣ ಹೆಚ್ಚಾಗಿರುವ ಸಾಧ್ಯತೆ ಇದೆ ಎಂದು ಅರ್ಜಿದಾರರ ಪರ ವಕೀಲರು ಅತಂಕ ವ್ಯಕ್ತಪಡಿಸಿದರು. ಮಕ್ಕಳಿಗೆ ಹಾಲು ಮತ್ತು ಮೊಟ್ಟೆ ವಿತರಣೆ ಬಿಸಿಯೂಟ ಯೋಜನೆ ವ್ಯಾಪ್ತಿಯಿಂದ ಹೊರಗಿವೆ ಎಂದು ಸರ್ಕಾರ ನ್ಯಾಯಾಲಯಕ್ಕೆ ಉತ್ತರಿಸಿತು. ಅರ್ಜಿಯ ವಿಚಾರಣೆಯನ್ನು ನವೆಂಬರ್ 30ಕ್ಕೆ ಮುಂದೂಡಿ ವಿಭಾಗೀಯ ಪೀಠ ಆದೇಶಿಸಿತು.

ಅತಿಥಿ ಅಂಕಣ



ನಾ. ದಿವಾಕರ

ನೀವು ಯಾರನ್ನು ಪ್ರತಿನಿಧಿಸುತ್ತಿದ್ದೀರಿ? ಈ ಪ್ರಶ್ನೆ ಇಂದೇಕೆ ಉದ್ಭವಿಸುತ್ತಿದೆ? ಜನಪ್ರತಿನಿಧಿಗಳಿಗೊಂದು ಪತ್ರ

ನೀವು ರಾಜ್ಯಪಾಲರ ಮುಂದೆ, ರಾಷ್ಟ್ರಪತಿಗಳ ಮುಂದೆ ಉಚ್ಚರಿಸುವ ಒಂದೊಂದು ಅಕ್ಷರಕ್ಕೂ ಎಷ್ಟು ಮೌಲ್ಯವಿದೆ ಎಂಬ ಪರಿಜ್ಞಾನ ನಿಮಗಿದೆಯೇ ? ಮೌಲ್ಯ ಎಂದ ಕೂಡಲೇ ನಿಮ್ಮ ಮನಸುಗಳು ಮಾರುಕಟ್ಟೆಯತ್ತ ಚಲಿಸುತ್ತವೆ. ಏಕೆಂದರೆ ನಿಮಗೆ ನೈಜ ಅಥವಾ ವಾಸ್ತವಿಕ ಮೌಲ್ಯದ ಅರ್ಥವೇ ಗೊತ್ತಿಲ್ಲ. ನೀವೇ ಮಾರಾಟವಾಗಲು ಸಿದ್ಧರಾಗಿರುತ್ತೀರಿ. ನೀವು ಕೂಡುವ ಕುರ್ಚಿ, ನೀವು ವಾಸಿಸುವ ಮನೆ ಮತ್ತು ನಿಮ್ಮ ಅಂತರಂಗ ಎಲ್ಲವೂ ಮಾರುಕಟ್ಟೆ ಸರಕುಗಳಾಗಿಬಿಟ್ಟಿವೆ. ಇನ್ನು ನಿಮಗೆ ಯಾವುದೇ ಒಂದು ಭೌತ ವಸ್ತುವಿನ ಅಥವಾ ಬೌದ್ಧಿಕ ವಸ್ತುವಿನ ವಾಸ್ತವಿಕ ಮೌಲ್ಯ ಅರ್ಥವಾಗುವುದಾದರೂ ಹೇಗೆ ?

ಇದು ಎಲ್ಲರಿಗೂ ಅನ್ವಯಿಸುವ ಬರಹವಲ್ಲ. ಆತ್ಮಸಾಕ್ಷಿ ಇದ್ದವರಿಗೆ ಅರ್ಥವಾದರೆ ಸಾಕು.

ನೀವು ಯಾರನ್ನು ಪ್ರತಿನಿಧಿಸುತ್ತಿದ್ದೀರಿ? ಈ ಪ್ರಶ್ನೆ ಇಂದೇಕೆ ಉದ್ಭವಿಸುತ್ತಿದೆ? ಹೌದು ಚುನಾವಣೆಯಲ್ಲಿ ಆಯ್ಕೆಯಾಗಿ, ವಿಧಾನಸಭೆಯಲ್ಲೋ, ವಿಧಾನ ಪರಿಷತ್ತಿನಲ್ಲೋ ಅಥವಾ ಸಂಸತ್ತಿನಲ್ಲೋ ಪ್ರಮಾಣವಚನ ಸ್ವೀಕರಿಸಿ ಅಧಿಕಾರದ ಗದ್ದುಗೆ ಏರುವ ಜನಪ್ರತಿನಿಧಿಗಳನ್ನು ಇಂದು ಕೇಳಲೇಬೇಕಾದ ಪ್ರಶ್ನೆ ಇದು. ಹೌದು, ನೀವು ಯಾರನ್ನು ಪ್ರತಿನಿಧಿಸುತ್ತಿದ್ದೀರಿ? ನೀವು ಪ್ರಮಾಣ ವಚನ ಸ್ವೀಕರಿಸುವಾಗ ಏನೆಲ್ಲಾ ಬದ್ಧತೆ ತೋರುವಿರಿ ಅಲ್ಲವೇ? ದೇಶದ ಸಂವಿಧಾನಕ್ಕೆ ಬದ್ಧತೆಯಿಂದ ನಡೆದುಕೊಳ್ಳುವ ನಿಮ್ಮ ಪ್ರಮಾಣಕ್ಕೆ ಏನೆಲ್ಲಾ ಬಳಸುತ್ತೀರಿ. ಸಂವಿಧಾನ, ನಿಮ್ಮ ಆರಾಧ್ಯ ದೈವ, ಸಂವಿಧಾನ ಕರ್ತೃ ಅಂಬೇಡ್ಕರ್, ನಿಮ್ಮ ಮನಸ್ಸಾಕ್ಷಿ ಅಥವಾ ಪ್ರಜ್ಞೆ, ಅಲ್ಲವೇ?

ನಿಜ, ನಿಮಗೆ ರಾಜಕಾರಣ ಎಂದರೆ ಜೀವನೋಪಾಯದ ವೃತ್ತಿ. ಜೀವನೋಪಾಯ ಎಂದರೆ ಎರಡು ಹೊತ್ತಿನ ಕೂಳು, ತಲೆಯ ಮೇಲೊಂದು ಸೂರು, ಉಡಲು ಬಟ್ಟೆ ಎಂದುಕೊಳ್ಳಬೇಡಿ. ಇವೆಲ್ಲವೂ ಹೇರಳವಾಗಿದ್ದರಷ್ಟೇ ನೀವು ರಾಜಕೀಯ ಪ್ರವೇಶಿಸಲು ಸಾಧ್ಯ. ಇದನ್ನೂ ಮೀರಿದ ಜೀವನೋಪಾಯದ ಮಾರ್ಗವನ್ನು ನಿಮಗೆ ಪ್ರಜಾತಂತ್ರ ರಾಜಕಾರಣ ಒದಗಿಸುತ್ತಿದೆ. ಆಧುನಿಕ ಉದ್ಯೋಗ ಮಾರುಕಟ್ಟೆಯಲ್ಲಿ ಹೆಚ್ಚಿನ ವೇತನ ದೊರೆಯುವಲ್ಲಿಗೆ ಕಪ್ಪೆಗಳಂತೆ ಜಿಗಿಯುವ ವೃತ್ತಿನಿರತರಂತೆಯೇ ನೀವು ಹಿತವಲಯಗಳನ್ನೂ ಶ್ರೇಣೀಕರಣಗೊಳಿಸಿಬಿಟ್ಟಿದ್ದೀರಿ. ಬಿದಿರಿನ ಚಾಪೆಯಿಂದ ಹಿಡಿದು ರತ್ನಗಂಬಳಿಯವರೆಗೆ, ಚಾದರದಿಂದ ಹಿಡಿದು ಮೆತ್ತನೆಯ ಸುಪ್ಪತ್ತಿಗೆಯವರೆಗೆ ನಿಮ್ಮ ಹಿತವಲಯ ವಿಸ್ತರಿಸುತ್ತದೆ. ನಿಮ್ಮ ಪುಟ್ಟ ಸಾಮ್ರಾಜ್ಯ ವಿಸ್ತರಣೆಗೆ ಈ ಹಿತವಲಯವೇ ಸೋಪಾನ. ನಂತರ ಕಲ್ಲುಬಂಡೆ, ಕೃಷಿ ಭೂಮಿ, ಮರಳು ಗಣಿ, ಕಲ್ಲು ಗಣಿ, ಸೇತುವೆ, ಮೇಲ್ಸೇತುವೆ, ರಸ್ತೆ ಕಾಮಗಾರಿ, ಅರಣ್ಯ ಸಂಪತ್ತು ಹೀಗೆ ನಿಮ್ಮ ಊಟದ ತಟ್ಟೆಯಲ್ಲಿ ಇರುವುದೆಲ್ಲವೂ ಸ್ವಾಹ ಮಾಡಲೆಂದೇ?

ಅಲ್ಲವೇ ಸ್ವಾಮಿ. ನೀವು ಆಣೆ ಪ್ರಮಾಣ ಮಾಡಿ ಶಾಸಕರೋ, ಸಚಿವರೋ ಆಗುವ ಮುನ್ನ ಒಮ್ಮೆ ಯೋಚಿಸಿ. 2019ರ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ 83 ಕೋಟಿ ಮತದಾರರಿದ್ದರು. ಒಟ್ಟು ಜನಸಂಖ್ಯೆ 130 ಕೋಟಿ. ಈ 83 ಕೋಟಿಯ ಪೈಕಿ 55 ಕೋಟಿ ಮತದಾರರು ಮತ ಚಲಾಯಿಸಿದ್ದಾರೆ. ಇವರಲ್ಲಿ ಅರ್ಧದಷ್ಟು ಅಥವಾ ಶೇ 30ರಷ್ಟು ಜನರು ಒಂದು ಪಕ್ಷಕ್ಕೆ ಬೆಂಬಲ ಸೂಚಿಸಿರುತ್ತಾರೆ. ಸರಾಸರಿ ಶೇ 30 ರಿಂದ 40ರಷ್ಟು ಮತ ಪಡೆದ ಪಕ್ಷಗಳು ಅಧಿಕಾರಕ್ಕೆ ಬರುತ್ತವೆ. ಅಂದರೆ 130 ಕೋಟಿ ಜನಸಂಖ್ಯೆಯಲ್ಲಿ ಅಧಿಕಾರ ಪೀಠದಲ್ಲಿ ಕಾಣುವುದು 25 ಕೋಟಿ ಮಾತ್ರ. ಇನ್ನು ನೂರು ಕೋಟಿ ಜನರ ಅಭಿಪ್ರಾಯ ಏನು? ನಿಗೂಢ. ಆದರೂ ನಿಮ್ಮನ್ನು ಸಮಸ್ತ ಜನಕೋಟಿಯ ಪ್ರತಿನಿಧಿಗಳೆಂದೇ ಗೌರವಿಸಲಾಗುತ್ತದೆ.

ಈ ಪ್ರಜ್ಞೆ ನಿಮ್ಮೊಳಗಿದೆಯೇ ಎಂದು ಒಮ್ಮೆ ಪ್ರಶ್ನಿಸಿಕೊಳ್ಳಿ. ನೀವು ನಿಮ್ಮ ಸುತ್ತಲಿನ ಸಮಸ್ತ ಜನತೆಯನ್ನು ಪ್ರತಿನಿಧಿಸುತ್ತಿದ್ದೀರಾ? ನಿಮಗೆ ಆದ್ಯತೆಗಳಿರುತ್ತವೆ. ಮಾರುಕಟ್ಟೆಯಲ್ಲಿ ಸಹಜ ಅಲ್ಲವೇ? ಅತಿ ಹೆಚ್ಚು ರಿಯಾಯಿತಿ ಇರುವ ವಸ್ತುವನ್ನು ಖರೀದಿಸುವುದು, ಅತಿ ಹೆಚ್ಚು ಲಾಭ ಬರುವ ವಸ್ತುವನ್ನು ಮಾರುವುದು ಮಾರುಕಟ್ಟೆ ನಿಯಮ. ರಾಜಕೀಯ ಮಾರುಕಟ್ಟೆಯಲ್ಲೂ ಇದೇ ನಿಯಮವನ್ನು ಎಷ್ಟು ಬದ್ಧತೆಯಿಂದ ಅನುಸರಿಸುತ್ತೀರಿ. ಧರ್ಮ, ಜಾತಿ, ಉಪಜಾತಿ, ಪಂಗಡ, ಸ್ವಂತದವರು, ಅಕ್ಕ ಪಕ್ಕದವರು, ನಿಷ್ಠರು, ಅಲ್ಪ ನಿಷ್ಠರು, ವಂದಿಮಾಗಧರು, ಭಟ್ಟಂಗಿಗಳು ಹೀಗೆ ಶ್ರೇಣೀಕರಣಗೊಳಿಸುತ್ತಾ ಹೋಗುವ ನೀವು ಯಾವ ಪ್ರವರ್ಗಕ್ಕೂ ಸೇರದವರನ್ನು ತಲುಪುವ ವೇಳೆಗೆ ನಿಮ್ಮೊಳಗಿನ ಸರಕು ಖಾಲಿಯಾಗಿರುತ್ತದೆ.

ಮತ್ತೊಂದು ರೀತಿಯ ಆದ್ಯತಾ ವಲಯ ಮತ್ತು ಶ್ರೇಣೀಕರಣವೂ ಇದೆ. ನಮ್ಮ ನಿಮ್ಮ ಹಿರೀಕರ ಭಾವಚಿತ್ರವನ್ನಾದರೂ ಒಮ್ಮೆ ನೋಡಿ ನೆನಪಾಗಬಹುದು. ಈ ಶ್ರೇಣಿ ಮೇಲ್ಮುಖವಾಗಿ ಚಲಿಸುತ್ತದೆ. ನಿರ್ಗತಿಕರು, ಕಡು ಬಡವರು, ಅವಕಾಶವಂಚಿತರು, ಅಂಚಿನಲ್ಲಿರುವವರು, ನ್ಯಾಯವಂಚಿತರಾಗಿರುವವರು ಹೀಗೆ ಚಲಿಸುವ ಈ ಏಣಿ ಕೊನೆಯಲ್ಲಿ ಟಾಟಾ, ಅಂಬಾನಿಯವರನ್ನು ತಲುಪುತ್ತದೆ. ಈ ಮೇಲ್ಮುಖ ಚಲನೆಯ ಆದ್ಯತೆ ನಿಮಗೆ ಕನಸಿನಲ್ಲೂ ಹೊಳೆಯಲಿಕ್ಕಿಲ್ಲ. ಏಕೆಂದರೆ ನೀವು ಗೆಲ್ಲಲು ಹಂಚಿದ ಹಣ ನಿಮಗೆ ವಾಪಸ್ ಬರಬೇಕೆಂದರೆ ಇವರಾರೂ ನೆರವಾಗುವುದಿಲ್ಲ. ಹಾಗಾಗಿ ನಿಮ್ಮ ಮೊದಲ ಹೆಜ್ಜೆ ಅಂಬಾನಿ–ಅದಾನಿಯ ಅಂಗಳದಲ್ಲಿರುತ್ತದೆ ಕೊನೆಯ ಹೆಜ್ಜೆ ಇಡುವ ಪ್ರಮೇಯವೇ ಬರುವುದಿಲ್ಲ. ಅಲ್ಲಿಯೇ ನಿಮ್ಮ ಕಾಲು ಕಟ್ಟಿಹಾಕಿಬಿಡುತ್ತಾರೆ.

ನೀವು ಯಾವ ಪಕ್ಷದಲ್ಲಾದರೂ ಇರಿ. ರಾಜಕಾರಣ ಸೂಪರ್ ಮಾರ್ಕೆಟ್ ಇದ್ದಂತೆ. ನೀವು ಮಾರಾಟಕ್ಕಿದ್ದೀರಿ, ಯಾರು ಹೆಚ್ಚಿನ ಬೆಲೆ ಕೊಡುತ್ತಾರೋ ಅವರಲ್ಲಿಗೆ ಹೋಗುತ್ತೀರಿ. ಈ ಮೌಲ್ಯದ ಬಗ್ಗೆ ನಿಮ್ಮ ಜ್ಞಾನ, ಪರಿಜ್ಞಾನ ಅಪಾರ. ಒಂದು ವರ್ಷದ ಅಧಿಕಾರ ನಿಮ್ಮ ಹಿತವಲಯದ ಸಾಮ್ರಾಜ್ಯವನ್ನು ಎಷ್ಟು ವಿಸ್ತರಿಸಲು ಸಾಧ್ಯ ಎನ್ನುವುದನ್ನು ಕ್ಷಣಮಾತ್ರದಲ್ಲಿ ಲೆಕ್ಕ ಹಾಕಿಬಿಡುತ್ತೀರಿ. ಇನ್ನೂ ಹೆಚ್ಚು ಬೆಲೆ ಸಿಕ್ಕರೆ ಮತ್ತೊಂದು ಹಿತವಲಯಕ್ಕೆ ಎಗರುತ್ತೀರಿ. ಏಕೆಂದರೆ ಇದು ನಿಮ್ಮ ಜೀವನೋಪಾಯದ ವೃತ್ತಿ. ನಮ್ಮ ಅಧಿಕಾರ ರಾಜಕಾರಣವೂ ನಿಮಗಾಗಿಯೇ ಖಾಲಿ ಕುರ್ಚಿಗಳನ್ನು ತಯಾರಿಸುತ್ತಲೇ ಇರುತ್ತದೆ. ನಿಗಮ, ಮಂಡಲಿ, ಪ್ರಾಧಿಕಾರ, ಅಕಾಡೆಮಿ ಹೀಗೆ. ನೀವು ಹಾಕಿದ ಬಂಡವಾಳಕ್ಕೂ ಮೋಸವಿಲ್ಲ. ನಿಮ್ಮ ಮೇಲೆ ಹೂಡುವ ಬಂಡವಾಳಕ್ಕೂ ನೀವು ಕಪ್ಪ ಕಾಣಿಕೆ ಸಲ್ಲಿಸಿಯೇ ತೀರುತ್ತೀರಿ. ಅಷ್ಟೊಂದು ನಿಷ್ಟೆ, ಬದ್ಧತೆ ಮತ್ತು ಶ್ರದ್ಧೆ.

ಇದೇ ನಿಷ್ಠೆ, ಬದ್ಧತೆ ಮತ್ತು ಶ್ರದ್ಧೆ ಜನಸಾಮಾನ್ಯರ ಬಗ್ಗೆ ಏಕಿಲ್ಲ ? ಏಕೆಂದರೆ ಒಬ್ಬ ಪ್ರಜೆ ನಿಮಗೆ ನೀಡುವ ಒಂದು ಮತದ ಮೌಲ್ಯವೇ ತಿಳಿದಿಲ್ಲ, ಇನ್ನು ಮನುಷ್ಯರ ಮೌಲ್ಯ ಹೇಗೆ ತಿಳಿಯಲು ಸಾಧ್ಯ ? ನಿಮ್ಮ ಸಾಮ್ರಾಜ್ಯ ವಿಸ್ತರಣೆಯ ಹಾದಿಯಲ್ಲಿ ತತ್ವ, ಸಿದ್ಧಾಂತ, ಸಾಮಾಜಿಕ ಮೌಲ್ಯ, ನ್ಯಾಯಪರತೆ ಮತ್ತು ಸಾಂವಿಧಾನಿಕ ಮೌಲ್ಯ ಎಲ್ಲವನ್ನೂ ಸಾಲುಸಾಲಾಗಿ ಸಮಾಧಿ ಮಾಡಿಬಿಟ್ಟಿದ್ದೀರಿ. ಇಂದು ನಿಮ್ಮ ಕೈಯ್ಯಲ್ಲಿರುವ ಬಾವುಟ, ಚಿಹ್ನೆ ನಾಳೆ ಬದಲಾಗಿರುತ್ತದೆ. ನಿಮ್ಮ ಮೂಲ ಚಿಹ್ನೆಗೆ ಮತ ನೀಡಿದ ಮತದಾರ ಬೆಪ್ಪಾಗಿ ನೋಡುತ್ತಿರುತ್ತಾನೆ. ಅಲ್ಲಿಯೂ ಬಾಚಿಕೊಂಡಿರುತ್ತೀರಿ, ಸಾಲದು ಎಂಬ ಕಾರಣಕ್ಕೆ ಇಲ್ಲಿಗೆ ಬಾಚಿಕೊಳ್ಳಲು ಬರುತ್ತೀರಿ. ಇಲ್ಲಿಯೂ ಸಾಧ್ಯವಾಗದಿದ್ದರೆ ನಿಮ್ಮ ಜನಪ್ರೀತಿ ಉಕ್ಕಿ ಹರಿದು ಜನತೆಯ ಆಶೋತ್ತರಗಳನ್ನು ಈಡೇರಿಸಲು ನಿಮ್ಮದೇ ಸ್ವಂತ ಚಿಹ್ನೆ, ಬಾವುಟ, ಬ್ಯಾನರ್ ಸಿದ್ಧಪಡಿಸಲು ಸಜ್ಜಾಗಿಬಿಡುತ್ತೀರಿ. ಇದೂ ನಿಮ್ಮ ಹಿತವಲಯ ಸಾಮ್ರಾಜ್ಯದ ವಿಸ್ತರಣೆಯ ಒಂದು ಭಾಗ ಅಲ್ಲವೇ ?

ಇಷ್ಟಾದರೂ ಭಾರತದ ಮತದಾರರು ನಿಮ್ಮನ್ನು ಸಹಿಸಿಕೊಳ್ಳುತ್ತಲೇ ಬಂದಿದ್ದಾರೆ. ಒಮ್ಮೆ ಎಲ್ಲರನ್ನೂ ನಿಲ್ಲಿಸಿ ಯಾರ್ಯಾರು ಎಲ್ಲೆಲ್ಲಿ ಇದ್ದಿರಿ, ಎಲ್ಲಿಂದ ಬಂದು ಎಲ್ಲಿಗೆ ತಲುಪಿದ್ದೀರಿ ಎಂದು ತೋರಿಸಲು ಪ್ರಯತ್ನಿಸಿದರೆ ಜನರು ಹುಚ್ಚರಾಗಿಬಿಡುತ್ತಾರೆ. ಹತ್ತನೆಯವರನ್ನು ಗಮನಿಸುವ ವೇಳೆಗೆ ಮೊದಲನೆಯವ ಮಗ್ಗಲು ಬದಲಿಸುವ ಸಾಧ್ಯತೆಗಳೇ ಹೆಚ್ಚು. ನಿಮ್ಮ ಈ ಮಾರುಕಟ್ಟೆ ಹುಚ್ಚಾಟವನ್ನೇ ದೇಶಭಕ್ತಿ, ದೇಶಪ್ರೇಮಗಳ ಭಾವನೆಗಳಲ್ಲಿ ತೇಲಿಸಿ, ದೇಶ ಕಟ್ಟಿದ ಮಹನೀಯರ ಹೆಸರಿನಲ್ಲಿ ನಿಮ್ಮದೇ ಆದ ವಾದಗಳನ್ನು ಸೃಷ್ಟಿಸಿಕೊಳ್ಳುತ್ತಾ ನಡೆದುಬಿಡುತ್ತೀರಿ. ಬೇಲಿ ಹಾರಿದ ಮೇಲೂ ಸತ್ಯವಂತರಂತೆ ಕಾರಣಗಳನ್ನು ನೀಡುತ್ತಾ ಸಮರ್ಥಿಸಿಕೊಳ್ಳುವ ನಿಮ್ಮನ್ನು ಜನರು ನಂಬುತ್ತಲೂ ಇದ್ದಾರೆ. ಮತದಾರರನ್ನು ನೋಡಿದರೆ ಅಯ್ಯೋ ಎನಿಸುತ್ತದೆ.


ಹಾಗೆಂದ ಮಾತ್ರಕ್ಕೆ ಮತದಾರರನ್ನು ಅಬ್ಬೇಪಾರಿಗಳೆಂದು ಭಾವಿಸಬೇಡಿ. ಯಾವುದೋ ಒಂದು ನಂಬಿಕೆ, ಇಲ್ಲಿನ ವ್ಯವಸ್ಥೆಯ ಮೇಲಿನ ವಿಶ್ವಾಸ ಮತ್ತು ನೀವುಗಳೇ ವ್ಯವಸ್ಥಿತವಾಗಿ ಸೃಷ್ಟಿಸಿರುವ ಭ್ರಮಾಲೋಕ ಮತದಾರರನ್ನು ಕಟ್ಟಿಹಾಕಿರುತ್ತದೆ. ಒಮ್ಮೆ ಈ ಭ್ರಮೆಯ ಪೊರೆ ಕಳಚಿದರೆ ನೀವು ತರಗೆಲೆಗಳಾಗಿಬಿಡುತ್ತೀರಿ. ನಿಮ್ಮಲ್ಲಿಯ ಹಣಬಲ–ತೋಳ್ಬಲ ಮತ್ತು ಜಾತಿ ಧರ್ಮಗಳ ಬಲದಿಂದ ಮತ್ತೊಮ್ಮೆ ನೀವೇ ಗೆದ್ದುಬರುತ್ತೀರಿ. ಬೇಲಿ ಹಾರುತ್ತೀರಿ. ಗೋಡೆಗಳನ್ನೂ ದಾಟುತ್ತೀರಿ. ನಿಮ್ಮ ಅಡಿಪಾಯ ಸದಾ ಸುಭದ್ರ. ಆದರೆ ಇದು ಶಾಶ್ವತ ಅಲ್ಲ ಎನ್ನುವುದನ್ನು ಗಮನದಲ್ಲಿಡಿ. ಇಷ್ಟು ಹೇಳುವ ಕಾರಣ ಎಂದರೆ :–

ನೀವು ಯಾವುದೇ ಪಕ್ಷದಲ್ಲಿರಿ, ಕಳೆದ ಆರು ತಿಂಗಳ ಅವಧಿಯಲ್ಲಿ ಈ ದೇಶದ ದುಡಿಯುವ ಜನರ ಬದುಕುವ ಹಕ್ಕುಗಳನ್ನೇ ಕಸಿದುಕೊಳ್ಳುವಂತಹ ಕಾನೂನುಗಳು ಜಾರಿಯಾಗುತ್ತಿವೆ. ಒಂದು ವಾರದಿಂದ ನಡೆಯುತ್ತಿರುವ ಘಟನೆಗಳನ್ನು ನೋಡುತ್ತಿರುವಿರಲ್ಲವೇ? ತಮ್ಮ ಹಕ್ಕುಗಳಿಗಾಗಿ, ಕುಸಿದುಹೋಗುತ್ತಿರುವ ತಮ್ಮ ನೆಲೆಯನ್ನು ಉಳಿಸಿಕೊಳ್ಳಲು, ತಮ್ಮ ಭವಿಷ್ಯದ ಬಗ್ಗೆ ಆತಂಕದಿಂದ ನ್ಯಾಯ ಕೇಳಲು ದೇಶದ ಅಧಿಕಾರಪೀಠದತ್ತ ತೆರಳುತ್ತಿರುವ ಸಾವಿರಾರು ಮಂದಿ ಅನ್ನದಾತರನ್ನು, ದುಡಿಯುವ ಕೈಗಳನ್ನು ದಮನಿಸಲು ಅಶ್ರುವಾಯು, ಜಲಫಿರಂಗಿ ಬಳಸಲಾಗುತ್ತಿದೆ. ಅವರನ್ನು ರಸ್ತೆಯಲ್ಲೇ ತಡೆಗಟ್ಟಲಾಗುತ್ತಿದೆ. ತಮ್ಮ ನಾಳಿನ ಅನಿಶ್ಚಿತತೆಯಿಂದ ಕಂಗಾಲಾಗಿರುವ ಈ ದೇಶದ ಶ್ರಮಿಕರ ದನಿಯನ್ನು ಆಲಿಸುವ ವ್ಯವಧಾನವನ್ನೂ ಅಧಿಕಾರ ಕೇಂದ್ರ ಕಳೆದುಕೊಂಡಿದೆ.


ಈ ವಿದ್ಯಮಾನ ಮತ್ತು ಘಟನೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಕಾರ್ಮಿಕ ಹಕ್ಕುಗಳನ್ನು, ರೈತರ ಭೂಮಿಯನ್ನು, ಕೃಷಿಕರ ಫಸಲನ್ನು, ದೇಶದ ಸಂಪನ್ಮೂಲಗಳನ್ನು ಕಂಪನಿ ಒಡೆಯರಿಗೆ ಮಾರಾಟ ಮಾಡಬೇಡಿ ಎಂದು ಹೇಳುವ ಜನರು ನಿಮಗೆ ಶಿಕ್ಷಾರ್ಹ ಅಪರಾಧಿಗಳಂತೆ ಕಂಡುಬಂದರೆ ನಿಮ್ಮ ದೃಷ್ಟಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮಿಗಳು ಹೇಗೆ ಕಾಣಲು ಸಾಧ್ಯ ? ಅವರ ಹೆಸರಿನಲ್ಲೇ ನಿಮ್ಮ ರಾಜಕಾರಣ ನಡೆಯುತ್ತಿದೆಯಲ್ಲವೇ ? ಈ ಕಾರ್ಮಿಕರು, ರೈತರು, ದುಡಿಯುವ ವರ್ಗಗಳು ಪ್ರತಿನಿಧಿಸುವುದು ಈ ದೇಶದ ಜನತೆಯನ್ನು. ಆ ಜನತೆಯ ಪ್ರತಿನಿಧಿಗಳು ನೀವು. ಸಮಸ್ತ ಜನತೆ ನಿಮಗೆ ಮತ ನೀಡುವುದಿಲ್ಲ. ಸಮಸ್ತ ಜನತೆ ಹೋರಾಟಕ್ಕೂ ಇಳಿಯುವುದಿಲ್ಲ. ನೀವು ಪ್ರತಿನಿಧಿಸುವುದು ಈ ಜನತೆಯನ್ನು. ನಂತರ ದೇಶ ನಂತರ ನಿಮ್ಮ ಪಕ್ಷ.

ಆದರೆ ನಿಮಗೆ ಈ ಜನತೆಯ ಬಗ್ಗೆ ಕಾಳಜಿ ಇರಬೇಕಲ್ಲವೇ? ಕನಿಷ್ಠ ಪಕ್ಷ ಪ್ರತಿಭಟನಾಕಾರರನ್ನು ಮಾನವೀಯತೆಯಿಂದ ನೋಡಿ ಎಂದು ಹೇಳುವಷ್ಟು ಆತ್ಮಸಾಕ್ಷಿಯೂ ನಿಮ್ಮಲ್ಲಿ ಉಳಿದಿಲ್ಲವೇ? ಖಂಡಿಸಿದರೆ ಸ್ಥಾನ, ಹುದ್ದೆ, ಪದವಿ ಹೋಗುತ್ತದೆ ಎನ್ನುವ ಭೀತಿಯೇ? ಈಗ ಹೇಳಿ, ನಿಮಗೆ ರೈತ ಕಾರ್ಮಿಕರ ಮೇಲೆ ದೆಹಲಿಯ ಬಳಿ ನಡೆದ ದೌರ್ಜನ್ಯವನ್ನು ಖಂಡಿಸುವಷ್ಟು ಕ್ಷಮತೆ, ವ್ಯವಧಾನ, ಮಾನವೀಯತೆಯೂ ಇಲ್ಲ ಎಂದರೆ ಗಾಂಧಿ–ಅಂಬೇಡ್ಕರ್–ಲೋಹಿಯಾ ಮುಂತಾದ ಚಿಂತಕರ ಹೆಸರನ್ನು ಹೇಳುವ ಅರ್ಹತೆ ನಿಮ್ಮಲ್ಲಿದೆಯೇ? ನೀವು ಮಾರುಕಟ್ಟೆಯ ಸರಕುಗಳಂತೆಯೇ ಇದ್ದುಬಿಡಿ. ಆದರೆ ಯಾವ ಮಹನೀಯರ ಹೆಸರನ್ನು ಬಳಸಬೇಡಿ. ಇಸಂಗಳನ್ನು ಬಳಸಬೇಡಿ.

ನಮಗೆ ಗೊತ್ತಿದೆ ನೀವು ನಿಮ್ಮ ಪ್ರಜ್ಞೆಯನ್ನೇ ಅಧಿಕಾರ ಪೀಠಗಳ ಬಳಿ ಒತ್ತೆ ಇಟ್ಟಿದ್ದೀರಿ.



ಕೃಪೆ: ಪಿ. ಮಹಮ್ಮದ್, ವಾ.ಬಾ.



ಕೃಪೆ: ಮಂಜುಗಂಗೊಳ್ಳಿ



ಆರ್‌ಎಸ್‌ಎಸ್ ನಡೆಯು ಸಮಾಜವನ್ನು ಏಕರೂಪವಾಗಿಸುವುದಾಗಿದೆ. ವೈವಿಧ್ಯಮಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಅಸ್ಮಿತೆಗಳನ್ನೆಲ್ಲ ಹಿಂದುತ್ವದ ಮೂಲಕ ಉಸಿರುಕಟ್ಟಿಸುವ ಪ್ರಯತ್ನವನ್ನು ಅದು ನಡೆಸುತ್ತಿದೆ. ಇದು ಪ್ರಾದೇಶಿಕ ಪಕ್ಷಗಳ ಅಸ್ತಿತ್ವವನ್ನೇ ಅಪಾಯಕ್ಕೊಡ್ಡಲಿದೆ. ಬಿಜೆಪಿ ತನ್ನ ಸಂಪೂರ್ಣ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳಲು ಬಿಜೆಪಿ ಹೊರಟಿದೆ. ಮೋದಿ ಸರ್ಕಾರದೊಂದಿಗೆ ರಾಜಿ ಮಾಡಿಕೊಳ್ಳಲು ಬಯಸುವ ಮತ್ತು ಹಿಂದುತ್ವ ರಾಜಕೀಯವನ್ನು ವಿರೋಧಿಸಲು ನಿರಾಕರಿಸುತ್ತಿರುವ ಈ ಪ್ರಾದೇಶಿಕ ಪಕ್ಷಗಳು, ಬಿಜೆಪಿಯ ಜತೆ ಮೈತ್ರಿ ಮಾಡಿಕೊಂಡಿದ್ದ ಹಾಗೂ ಬಿಜೆಪಿ ಸರ್ಕಾರದ ಭಾಗವಾಗಿದ್ದ ಪ್ರಾದೇಶಿಕ ಪಕ್ಷಗಳ ಗತಿಯಿಂದ ಪಾಠ ಕಲಿಯಬೇಕು. ಅವರಿಗೆ ಆಯ್ಕೆ ಸುಸ್ಪಷ್ಟವಾಗಿದೆ – ಒಂದೇ ಬಿಜೆಪಿ–ಆರ್‌ಎಸ್‌ಎಸ್ ಜೋಡಿಯ ವಿರುದ್ಧ ರಾಜಕೀಯವಾಗಿ ಹಾಗೂ ಸೈದ್ಧಾಂತಿಕವಾಗಿ ಹೋರಾಡಬೇಕು, ಅಥವಾ, ಶರಣಾಗಿ ನಶಿಸಿಹೋಗಬೇಕು. ಪ್ರಜಾಪ್ರಭುತ್ವ ಹಾಗೂ ಒಕ್ಕೂಟ ವ್ಯವಸ್ಥೆಯ ಸಲುವಾಗಿ, ಪ್ರಾದೇಶಿಕ ಪಕ್ಷಗಳು ಅತಿಮುಖ್ಯವಾದ ಆಯ್ಕೆ ಮಾಡಬೇಕಿದೆ.

ಪ್ರಕಾಶ ಕಾರಟ್



ಪ್ರಾದೇಶಿಕ ಪಕ್ಷಗಳ ಮುಂದೆ ಈಗ ಉಳಿವು–ಅಳಿವಿನ ಸವಾಲು

ಇತ್ತೀಚೆಗೆ ತಾನೇ ಕೊನೆಗೊಂಡ ಮಹಾ ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್ (ಜಿಹೆಚ್‌ಎಂಸಿ) ಚುನಾವಣೆಯಲ್ಲಿ ಬಿಜೆಪಿಯು ಅಬ್ಬರದ ಪ್ರಚಾರ ನಡೆಸಿದೆ, ಫಲಿತಾಂಶಗಳಿಗಾಗಿ ನಿರೀಕ್ಷಿಸಲಾಗುತ್ತಿದೆ. ದುಬ್ಬಕ ವಿಧಾನಸಭಾ ಉಪ ಚುನಾವಣೆಯಲ್ಲಿ ಈಗ ತಾನೇ ಪಡೆದ ಗೆಲುವಿನ, ಅದರಲ್ಲಿ ತೆಲಂಗಾಣ ರಾಷ್ಟ್ರ ಸಮಿತಿ(ಟಿಆರ್‌ಎಸ್) ಯನ್ನು ಸೋಲಿಸಿದ ಹುಮ್ಮಸ್ಸಿನಲ್ಲಿ ಅಮಿತ್ ಶಾ ರಿಂದ ಹಿಡಿದು ಆದಿತ್ಯನಾಥ್ ವರೆಗಿನ ರಾಷ್ಟ್ರೀಯ ನಾಯಕತ್ವದ ಮೂಲಕ ಬಿಜೆಪಿಯು ತನ್ನ ವಿಷಪೂರಿತ ಪ್ರಚಾರದ ಆಕ್ರಮಣ ನಡೆಸಿದೆ.

ಬಿಜೆಪಿಯು ತನ್ನೆಲ್ಲಾ ಶಕ್ತಿಯನ್ನು ಬಳಸಿ ಟಿಆರ್‌ಎಸ್ ಹಾಗೂ ಮುಖ್ಯ ಮಂತ್ರಿ ಕೆ.ಚಂದ್ರಶೇಖರ್ ಅವರ ವಿರುದ್ಧ ಪ್ರಚಾರ ನಡೆಸಿತು. ಅವರ ಮೇಲೆ ವಂಶಪಾರಂಪರ್ಯದ, ಭಷ್ಟಾಚಾರದ ಹಾಗೂ ಮುಸ್ಲಿಂ ತುಷ್ಟೀಕರಣದ ಆರೋಪವನ್ನು ಹೊರಿಸಿ, ಪ್ರಾಸ್ತಾವಿಕವಾಗಿ ಹಿಂದಿನ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಎಐಎಂಐಎಂ ಜತೆ ಮೈತ್ರಿ ಮಾಡಿಕೊಂಡಿದ್ದನ್ನು ಬಿಜೆಪಿ ಪ್ರಸ್ತಾಪಿಸಿತು. ಅದರ ಉದ್ದೇಶ ಸ್ಪಷ್ಟವಾಗಿತ್ತು – ಕಾರ್ಪೊರೇಷನ್ ಚುನಾವಣೆಯನ್ನು ಟಿಆರ್‌ಎಸ್ ಹಾಗೂ ಅದರ ಸರ್ವೋಚ್ಚ ನಾಯಕನ ವಿರುದ್ಧ ಗುರಿಯಾಗಿಸುವ ಮೂಲಕ ತನ್ನನ್ನೇ ಪರ್ಯಾಯವೆಂದು ಬಿಂಬಿಸಿಕೊಳ್ಳಲು ಯತ್ನಿಸಿತು. ಈ ಅನಿರೀಕ್ಷಿತ ಆಕ್ರಮಣದಿಂದ ಟಿಆರ್‌ಎಸ್ ಮತ್ತು ಅದರ ನಾಯಕತ್ವಕ್ಕೆ ಆಶ್ಚರ್ಯವಾಗಿದ್ದರೆ, ಅದಕ್ಕೆ ಅವರೇ ಕಾರಣ.

2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ಮೋದಿ ಸರ್ಕಾರವನ್ನು ವಿರೋಧಿಸದಿರುವ ನಿಲುವನ್ನು ಟಿಆರ್‌ಎಸ್ ಅನುಸರಿಸಿಕೊಂಡು ಬಂದಿದೆ. ಸಂಸತ್ತಿನಲ್ಲಿ ಅತ್ಯಂತ ಪ್ರಜಾಪ್ರಭುತ್ವ–ವಿರೋಧಿ ಶಾಸನಗಳನ್ನು ಅದು ಬೆಂಬಲಿಸಿದೆ. ಅಷ್ಟೇ ಅಲ್ಲ, ಪೌರತ್ವ ತಿದ್ದುಪಡಿ ಕಾಯಿದೆಗೆ ವಿರೋಧ ಮಾಡಿದ್ದೊಂದನ್ನು ಬಿಟ್ಟು, ಬಿಜೆಪಿಯ ಹಿಂದುತ್ವ ಕಾರ್ಯಸೂಚಿಯ ವಿಚಾರದಲ್ಲಿ ಅದು ದಿವ್ಯ ಮೌನ ವಹಿಸಿದೆ.

ಇಲ್ಲಿಯ ತನಕವೂ ಟಿಆರ್‌ಎಸ್ ತನ್ನ ಟೀಕೆಗಳ ಸುರಿಮಳೆಯನ್ನು ಅವನತಿಯಲ್ಲಿರುವ ಕಾಂಗ್ರೆಸ್ ವಿರುದ್ಧ ತೀವ್ರವಾಗಿಸುವ ಮೂಲಕ, ಬಿಜೆಪಿಯು ತೆಲಂಗಾಣದಲ್ಲಿ ಮುನ್ನಡೆ ಸಾಧಿಸಲು ಅವಕಾಶ ಮಾಡಿಕೊಟ್ಟಿತು. 2019ರ ಲೋಕಸಭಾ ಚುನಾವಣೆಯ ಫಲಿತಾಂಶವು ಒಂದು ಎಚ್ಚರಿಕೆಯ ಗಂಟೆ ಬಾರಿಸಿದೆ – ಬಿಜೆಪಿಯು ನಾಲ್ಕು ಸ್ಥಾನಗಳನ್ನು ಗಳಿಸಿ, ಸರಿಸುಮಾರು 20% ಮತಗಳನ್ನು ಆ ರಾಜ್ಯದಲ್ಲಿ ಪಡೆದುಕೊಂಡಿದೆ.

ಟಿ.ಆರ್.ಎಸ್ ಎದುರಿಸುತ್ತಿರುವ ಈ ದುಃಸ್ಥಿತಿಯು ಇತರ ಪ್ರಾದೇಶಿಕ ಪಕ್ಷಗಳು ಅನುಭವಿಸಿದ ರೀತಿಯಲ್ಲೇ ಇದೆ. ಎಲ್ಲಾ ಪ್ರಾದೇಶಿಕ ಪಕ್ಷಗಳು – ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲಿ – ಹುಚ್ಚುಚ್ಚಾಗಿ ಎಗರಾಡುತ್ತಿರುವ ಬಿಜೆಪಿಯನ್ನು ಎದುರಿಸುತ್ತಿವೆ, ಅವುಗಳ ಬೆಂಬಲದ ನೆಲೆಯನ್ನು ಅದು ಕೊರೆದುಹಾಕುತ್ತಿದೆ ಅಥವಾ ಅವುಗಳನ್ನು ಹಿಂದುತ್ವ ಶಕ್ತಿಗಳ ಅಧೀನ ಮಿತ್ರರನ್ನಾಗಿಸಿ ಅಮುಖ್ಯರನ್ನಾಗಿ ಮಾಡಿದೆ.

ಬಹುತೇಕ ಪ್ರಾದೇಶಿಕ ಪಕ್ಷಗಳು ತಾವೇ ಹೇಳಿಕೊಂಡಂತೆ ಸ್ವಾಭಾವಿಕವಾಗಿ ಜಾತ್ಯತೀತವಾಗಿರುತ್ತವೆ ಆದರೆ ಅವುಗಳ ಸಮಯಸಾಧಕತನವು, ಕೆಲವು ವೇಳೆ ರಾಜ್ಯ ರಾಜಕೀಯ ತುರ್ತಿನಿಂದಾಗಿ, ಕಳೆದ ಎರಡು ದಶಕಗಳಲ್ಲಿ ಒಂದಲ್ಲಾ ಒಂದು ಸಮಯದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವಂತೆ ಮಾಡಿವೆ. ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಮತ್ತು ಸಮಾಜವಾದಿ ಪಕ್ಷಗಳನ್ನು ಹೊರತುಪಡಿಸಿ, ಈ ಪಕ್ಷಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿವೆ.

ಈ ಪಕ್ಷಗಳಿಗೆ ಏನಾಯಿತು ಎನ್ನುವುದನ್ನು ಅಸ್ಸಾಂ ಗಣ ಪರಿಷತ್ತ್(ಎಜಿಪಿ)ನ ಅವಸ್ಥೆಯು ಸೋದಾಹರಣವಾಗಿ ವಿವರಿಸುತ್ತದೆ. ಎಜಿಪಿಯು 2001ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೊದಲು ಮೈತ್ರಿ ಮಾಡಿಕೊಂಡಿತು. ತದನಂತರ, ಬಿಜೆಪಿಯೊಂದಿಗೆ ಆಗಾಗ ಮಾಡಿಕೊಳ್ಳುತ್ತಿದ್ದ ಸಂಬಂಧಗಳು ಕ್ರಮೇಣವಾಗಿ ಅದರ ನೆಲೆಯನ್ನು ಕೊರೆದವು ಮತ್ತು ಅವನ್ನು ಬಿಜೆಪಿಯತ್ತ ಸರಿಸಿದವು. ಬಿಜೆಪಿ ನೇತೃತ್ವದ ಈಗಿನ ಸರ್ಕಾರದ ಮುಖ್ಯಮಂತ್ರಿ, ಸರ್ಬಾನಂದ ಸೋನೋವಲ್ ಈ ಹಿಂದೆ ಎಜಿಪಿಯ ಮುಖಂಡರಾಗಿದ್ದರು, 2011 ರಲ್ಲಿ ಬಿಜೆಪಿಗೆ ಪಕ್ಷಾಂತರವಾದರು. ಇವತ್ತು ಎಜಿಪಿಯು ತನ್ನದೇ ಮಸುಕಾದ ನೆರಳಿನಂತಾಗಿ, ಬಿಜೆಪಿ ಸರ್ಕಾರದಲ್ಲಿ ಅಂಚಿಗೆ ತಳ್ಳಲ್ಪಟ್ಟ ಪಾಲುದಾರನಾಗಿ ಕುಳಿತುಕೊಂಡಿದೆ.

ಆಂಧ್ರಪ್ರದೇಶದಲ್ಲಿ ತೆಲುಗು ದೇಶಂ ಪಕ್ಷ(ಟಿಡಿಪಿ) ಮತ್ತು ಉತ್ತರಪ್ರದೇಶದಲ್ಲಿ ಬಹುಜನ ಸಮಾಜ ಪಕ್ಷ(ಬಿಎಸ್‌ಪಿ) ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ನಷ್ಟಮಾಡಿಕೊಂಡ ಪಕ್ಷಗಳ ಇನ್ನೆರಡು ಉದಾಹರಣೆಗಳು. ಕಳೆದ ಲೋಕಸಭಾ ಚುನಾವಣೆಗೆ ಮುಂಚೆ ಟಿಡಿಪಿಯು ಬಿಜೆಪಿಯೊಂದಿಗೆ ಸಂಬಂಧ ಕಡಿದುಕೊಂಡಾಗ, ಅದರ ಸಾಕಷ್ಟು ಲೋಕಸಭಾ ಸದಸ್ಯರು ಬಿಜೆಪಿಗೆ ಪಕ್ಷಾಂತರಗೊಂಡಿದ್ದನ್ನು ನೋಡಬೇಕಾಯಿತು. ದಲಿತರ ಹಾಗೂ ಬಹುಜನರ ಒಂದು ಪ್ರತಿಪಾದಕ ಪಕ್ಷವಾಗಿ ಬಿಎಸ್‌ಪಿಯ ಪ್ರತಿಷ್ಠೆಯನ್ನು ಈ ಹಿಂದೆ ಬಿಜೆಪಿಯೊಂದಿಗಿನ ಸಹವಾಸವು ತಿಂದುಹಾಕಿತು.

> 2014ರಲ್ಲಿ ಮೋದಿ ಸರ್ಕಾರ ಬಂದಾಗಿನಿಂದ, ಅದನ್ನು ವಿರೋಧಿಸದಿರುವ ನಿಲುವನ್ನು ಟಿಆರ್‌ಎಸ್ ಅನುಸರಿಸಿಕೊಂಡು ಬಂದಿದೆ. ಸಂಸತ್ತಿನಲ್ಲಿ ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ಶಾಸನಗಳನ್ನು ಅದು ಬೆಂಬಲಿಸಿದೆ. ಬಿಜೆಪಿಯ ಹಿಂದುತ್ವ ಕಾರ್ಯಸೂಚಿಯ ವಿಚಾರದಲ್ಲಿ ಅದು ದಿವ್ಯ ಮೌನ ವಹಿಸಿದೆ. ಈಗ ಬಿಜೆಪಿ ಹೈದರಾಬಾದ್ ಕಾರ್ಪೊರೇಷನ್ ಚುನಾವಣೆಯನ್ನು ಟಿಆರ್‌ಎಸ್ ಹಾಗೂ ಅದರ ಸರ್ವೋಚ್ಚ ನಾಯಕನ ವಿರುದ್ಧ ಗುರಿಯಾಗಿಸುವ ಮೂಲಕ ತನ್ನನ್ನೇ ಪರ್ಯಾಯವೆಂದು ಬಿಂಬಿಸಿಕೊಳ್ಳಲು ಯತ್ನಿಸಿದೆ.. ಈ ಅನಿರೀಕ್ಷಿತ ಆಕ್ರಮಣದಿಂದ ಟಿಆರ್‌ಎಸ್ ಮತ್ತು ಅದರ ನಾಯಕತ್ವಕ್ಕೆ ಆಶ್ಚರ್ಯವಾಗಿದ್ದರೆ, ಅದಕ್ಕೆ ಅವರೇ ಕಾರಣ.

ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಪಕ್ಷವು ವಾಜಪೇಯಿ ಸರ್ಕಾರದಲ್ಲಿ ಪಾಲುದಾರನಾಗಿತ್ತು ಮತ್ತು 1999ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಸಾಧಿಸಿತ್ತು. ಎಡಪಂಥೀಯರ ವಿರುದ್ಧ ಭಯೋತ್ಪಾದನೆ ಹಾಗೂ ದೈಹಿಕ ದಬ್ಬಾಳಿಕೆಗಳನ್ನು ಹರಿಬಿಡುವುದರ ಮೂಲಕ ಬಿಜೆಪಿ ಬೆಳೆಯಲು ಅವಕಾಶ ಕಲ್ಪಿಸಿತು. ಬಂಗಾಳ ರಾಜಕೀಯದಲ್ಲಿ ಕೋಮು ರಕ್ಕಸನನ್ನು ಸಾಕಿ ಸಲಹಿದ ನಂತರ, ಈಗ ಮಮತಾ ಬ್ಯಾನರ್ಜಿ ಬಿಜೆಪಿಯ ಪೌರೋಹಿತ್ಯದ ಪ್ರವಚನಗಳನ್ನು ತಾನೇ ಕೇಳಬೇಕಾದ ಸ್ಥಿತಿ ಒದಗಿ ಬಂದಿದೆ.

ಒರಿಸ್ಸಾದಲ್ಲಿ ನವೀನ್ ಪಾಟ್ನಾಯಕ್ ಅವರ ಬಿಜು ಜನತಾ ದಳ ಸರ್ಕಾರ ಮತ್ತು ಆಂಧ್ರ ಪ್ರದೇಶದಲ್ಲಿ ಜಗನ್ ಮೋಹನ್ ರೆಡ್ಡಿಯವರ ವೈಎಸ್‌ಆರ್‌ಸಿಪಿ ಸರ್ಕಾರ ಕೇಂದ್ರದ ಮೋದಿ ಸರ್ಕಾರದೊಂದಿಗೆ ಸಹಕಾರದ ದಾಖಲೆ ಮಾಡಿವೆ. ಸಂಸತ್ತಿನ ಕಳೆದ ಅಧಿವೇಶನದಲ್ಲಿ ಅಂಗೀಕಾರಗೊಂಡ ಮೂರು ಕೃಷಿ ಮಸೂದೆಗಳನ್ನೂ ಒಳಗೊಂಡಂತೆ ಮೋದಿ ಸರ್ಕಾರವು ತಂದಿರುವ ಎಲ್ಲಾ ಪ್ರಮುಖ ಶಾಸನಗಳನ್ನು ಅವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸಿವೆ.

ಒರಿಸ್ಸಾದಲ್ಲಿ ಬಿಜೆಪಿಯು ಈಗಾಗಲೇ ಬಿಜೆಡಿಗೆ ವಿರುದ್ಧದ ಪ್ರಮುಖ ಪಕ್ಷವಾಗಿ ಹೊರಹೊಮ್ಮಿದೆ ಮತ್ತು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅದನ್ನು ಸೋಲಿಸಲು ಶತಾಯ ಗತಾಯ ಎಲ್ಲಾ ಪ್ರಯತ್ನಗಳನ್ನೂ ಮಾಡಲಿದೆ. ಆಂಧ್ರಪ್ರದೇಶದಲ್ಲಿ, ವೈಎಸ್‌ಆರ್‌ಸಿಪಿ ಮತ್ತು ಟಿಡಿಪಿ ಎರಡೂ ಪಕ್ಷಗಳು ಬಿಜೆಪಿಯ ಅನುಗ್ರಹಕ್ಕಾಗಿ, ಅಂತಹ ನಿರ್ಲಜ್ಜೆಯ ರಾಜಕೀಯಗಳಿಂದ ಅವರು ತೆರಬೇಕಾದ ದುಬಾರಿ ಬೆಲೆಯನ್ನು ಲೆಕ್ಕಿಸದೆ ಪರಸ್ಪರ ಪೈಪೋಟಿ ನಡೆಸಿವೆ.

ಈ ಕೆಲವು ಪಕ್ಷಗಳು ಮತ್ತು ಸರ್ಕಾರಗಳು ಅವರ ನಾಯಕರು ಮತ್ತು ಕುಟುಂಬದವರ ಮೇಲೆ ಕೇಂದ್ರ ಸರ್ಕಾರದ ಸಂಸ್ಥೆಗಳಾದ ಸಿ.ಬಿ.ಐ. ಹಾಗೂ ಇ.ಡಿ. ಹರಿಬಿಡಬಹುದಾದ ದಾಳಿಗಳ ಬಗ್ಗೆ ನಿರಂತರವಾದ ಭಯದಲ್ಲಿವೆ. ಇದು, ಮೋದಿ ಸರ್ಕಾರ ಸರ್ವಾಧಿಕಾರಶಾಹೀ ಕೇಂದ್ರೀಕರಣದ ಧಾವಂತದಿಂದ ರಾಜ್ಯಗಳ ಹಕ್ಕುಗಳು ಹಾಗೂ ಒಕ್ಕೂಟ ವ್ಯವಸ್ಥೆಯ ತತ್ವಗಳ ಬಗ್ಗೆ ದಯ ದಾಕ್ಷಿಣ್ಯವಿಲ್ಲದೆ ಒರಟಾಗಿ ವರ್ತಿಸುತ್ತಿರುವಾಗಲೂ ಮೌನವಾಗಿರುವಂತೆ ಮಾಡಿದೆ.

ಬಿಜೆಪಿಯು ಏಕ–ಪಕ್ಷ ಪ್ರಾಬಲ್ಯದ ಹೊಸ ಯುಗದಿಂದ ಉದ್ಭವಿಸಿದ ಸವಾಲುಗಳ ಕಾರಣ ಈ ಪ್ರಾದೇಶಿಕ ಪಕ್ಷಗಳು ಬಿಕ್ಕಟ್ಟಿನಲ್ಲಿವೆ. ಹಲವಾರು ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್ಸಿನ ವಿರುದ್ಧ ಹೋರಾಡುತ್ತಾ ಬೆಳೆದಿವೆ ಮತ್ತು ಕಾಂಗ್ರೆಸ್ಸನ್ನು ಸೋಲಿಸಿ ಹಾಗೂ ಅದನ್ನು ಕೆಳಗಿಳಿಸಿ ಅಧಿಕಾರಕ್ಕೆ ಬಂದಿವೆ. ಡಿಎಂಕೆ, ಟಿಡಿಪಿ, ಎಜಿಪಿ, ಬಿಜೆಡಿ, ಅಕಾಲಿಗಳು – ಇವೆಲ್ಲವೂ ಈ ವರ್ಗದಲ್ಲಿ ಬರುತ್ತವೆ. ಬಿಜೆಪಿ ಒಂದು ಆಕ್ರಮಣಕಾರಿ ಶಕ್ತಿಯಾಗಿ ಹೊರಹೊಮ್ಮಿದ ನಂತರವೂ, ಈ ಪಕ್ಷಗಳು, ಡಿಎಂಕೆಯನ್ನು ಹೊರತುಪಡಿಸಿ, ಹೊಸ ವಾಸ್ತವಕ್ಕೆ ಅನುಗುಣವಾಗಿ ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಲು ಸಮರ್ಥವಾಗಿಲ್ಲ ಮತ್ತು ಹಳೆಯ ಚೌಕಟ್ಟಿನ ರಾಜಕೀಯದೊಳಗೇ ಮುಂದುವರಿಯುತ್ತಿವೆ. ಇದರ ಪರಿಣಾಮವಾಗಿ, ಈ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ಸಿನ ಅವನತಿಯಾಗಿರುವಾಗ, ಸಂಬಂಧಪಟ್ಟ ಪ್ರಮುಖ ಪ್ರಾದೇಶಿಕ ಪಕ್ಷಗಳಿಂದ ಹೆಚ್ಚಿನ ಪ್ರತಿರೋಧವಿಲ್ಲದೇ ಬಿಜೆಪಿಯು ಆ ಖಾಲಿ ಸ್ಥಾನವನ್ನು ತುಂಬಲು ಸಮರ್ಥವಾಗಿದೆ.

ಹಾಗಂದ ಮಾತ್ರಕ್ಕೆ ಈ ಪ್ರಾದೇಶಿಕ ಪಕ್ಷಗಳು ತಮ್ಮ ಹಳೆಯ ವೈರಿಯಾದ ಕಾಂಗ್ರೆಸ್ಸಿನೊಂದಿಗೆ ಅನಿವಾರ್ಯವಾಗಿ ನಿಂತುಕೊಳ್ಳಬೇಕು ಅಂತಲ್ಲ, ಬದಲಿಗೆ ಬಿಜೆಪಿಯನ್ನು ತಮ್ಮ ಮುಖ್ಯ ಪ್ರತಿರೋಧಿಯನ್ನಾಗಿ ಗುರುತಿಸಿ ಅದರ ವಿರುದ್ಧ ಕಾರ್ಯಾಚರಣೆ ನಡೆಸಬೇಕು.

ಕೇಂದ್ರದಲ್ಲಿರುವ ಸರ್ವಾಧಿಕಾರಶಾಹೀ ಬಿಜೆಪಿ ಸರ್ಕಾರವನ್ನು ವಿರೋಧಿಸದಿರುವ ಅವರ ಮನೋಭಾವದಿಂದಾಗಿ, ಅವರು ತಮ್ಮನ್ನು ತಾವು ತಮ್ಮ ಬಗಲಲ್ಲೇ ಇರುವ ಬಿಜೆಪಿಯ ದಾಳಿಗಳಿಂದ ತಪ್ಪಿಸಿಕೊಳ್ಳಲಾಗುತ್ತಿಲ್ಲ. ಮೋದಿ ಸರ್ಕಾರದೊಂದಿಗೆ ರಾಜಿ ಮಾಡಿಕೊಳ್ಳಲು ಬಯಸುವ ಮತ್ತು ಹಿಂದುತ್ವ ರಾಜಕೀಯವನ್ನು ವಿರೋಧಿಸಲು ನಿರಾಕರಿಸುತ್ತಿರುವ ಈ ಪ್ರಾದೇಶಿಕ ಪಕ್ಷಗಳು, ಬಿಜೆಪಿಯ ಜತೆ ಮೈತ್ರಿ ಮಾಡಿಕೊಂಡಿದ್ದ ಹಾಗೂ ಬಿಜೆಪಿ ಸರ್ಕಾರದ ಭಾಗವಾಗಿದ್ದ ಪ್ರಾದೇಶಿಕ ಪಕ್ಷಗಳಿಂದ ಪಾಠ ಕಲಿಯಬೇಕು ಕೂಡ.

ಅಕಾಲಿ ದಳ ಹಾಗೂ ಶಿವಸೇನಾ ಎನ್‌ಡಿಎಯಲ್ಲಿ ಬಹಳ ಕಾಲದಿಂದ ಮಿತ್ರರಾಗಿದ್ದವರು, ಸರ್ಕಾರದಿಂದ ಹಾಗೂ ಮೈತ್ರಿಕೂಟದಿಂದ ಹೊರ ಬಂದಿದ್ದಾರೆ. ಮತ್ತೊಂದು ಎನ್‌ಡಿಎ ಮಿತ್ರಪಕ್ಷವಾಗಿದ್ದ ಲೋಕ ಜನಶಕ್ತಿ ಪಕ್ಷವನ್ನು ಬಳಸಿಕೊಂಡು ಜೆಡಿಯು ಹಾಗೂ ನಿತೀಶ್ ಕುಮಾರ್ ಅವರನ್ನು ಬಿಹಾರ ಚುನಾವಣೆಯಲ್ಲಿ ಬಿಜೆಪಿ ಮಟ್ಟಹಾಕಿದೆ ಮತ್ತು ನಿತೀಶ್ ಅವರನ್ನು ದುರ್ಬಲಗೊಳಿಸಿದೆ.

ತನ್ನ ಸಂಪೂರ್ಣ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳಲು ಬಿಜೆಪಿ ಹೊರಟಿದೆ, ಅದು ತನ್ನ ಮಿತ್ರಪಕ್ಷಗಳನ್ನೂ ಸಂಪೂರ್ಣವಾಗಿ ತನಗೆ ಅಧೀನವಾಗುವಂತೆ ಮಾಡುತ್ತದೆ. ಆರ್‌ಎಸ್‌ಎಸ್ ನಡೆಯು ಸಮಾಜವನ್ನು ಏಕರೂಪವಾಗಿಸುವುದಾಗಿದೆ. ವೈವಿಧ್ಯಮಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಅಸ್ಮಿತೆಗಳನ್ನೆಲ್ಲ ಹಿಂದುತ್ವದ ಮೂಲಕ ಉಸಿರುಕಟ್ಟಿಸುವ ಪ್ರಯತ್ನವನ್ನು ಅದು ನಡೆಸುತ್ತಿದೆ. ಇದು ಪ್ರಾದೇಶಿಕ ಪಕ್ಷಗಳ ಅಸ್ತಿತ್ವವನ್ನೇ ಅಪಾಯಕ್ಕೊಡ್ಡಲಿದೆ.

ಅವರಿಗೆ ಆಯ್ಕೆ ಸುಸ್ಪಷ್ಟವಾಗಿದೆ – ಒಂದೇ ಬಿಜೆಪಿ–ಆರ್‌ಎಸ್‌ಎಸ್ ಜೋಡಿಯ ವಿರುದ್ಧ ರಾಜಕೀಯವಾಗಿ ಹಾಗೂ ಸೈದ್ಧಾಂತಿಕವಾಗಿ ಹೋರಾಡಬೇಕು, ಅಥವಾ, ಶರಣಾಗಿ ನಶಿಸಿಹೋಗಬೇಕು. ಪ್ರಜಾಪ್ರಭುತ್ವ ಹಾಗೂ ಒಕ್ಕೂಟ ವ್ಯವಸ್ಥೆಯ ಸಲುವಾಗಿ, ಪ್ರಾದೇಶಿಕ ಪಕ್ಷಗಳು ಅತಿಮುಖ್ಯವಾದ ಆಯ್ಕೆ ಮಾಡಬೇಕಿದೆ.

ಅನು: ಟಿ.ಸುರೇಂದ್ರ ರಾವ್







ಇತಿಹಾಸ ಸೃಷ್ಟಿಸಿರುವ ರೈತರ 'ದಿಲ್ಲಿ ಚಲೋ'

ಟಿ. ಯಶವಂತ

ರೈತರ 'ದಿಲ್ಲಿ ಚಲೋ' ಹೋರಾಟ ದಿನೇ ದಿನೇ ತೀವ್ರಗೊಳ್ಳುತ್ತಲೇ ಇದೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಅದು 9 ನೇ ದಿನಕ್ಕೆ ಕಾಲಿಟ್ಟಿದೆ. ದೆಹಲಿ ಸುತ್ತಲೂ ರೈತರ ಜಮಾವಣೆಯಾಗಿದೆ. ಸಿಂಗು ಹಾಗೂ ಟಿಕ್ರಿ ಗಡಿಗಳಲ್ಲೇ ಕನಿಷ್ಠ 50 ಸಾವಿರ ಟ್ರಾಕ್ಟರ್‌ಗಳು ನಿಂತುಕೊಂಡಿವೆ. ಈಗ ಪಂಜಾಬ್ ಮತ್ತು ಹರ್ಯಾಣಾದ ರೈತರು ಮಾತ್ರವಲ್ಲದೆ ಮಧ್ಯ ಪ್ರದೇಶ, ರಾಜಾಸ್ಥಾನ, ಉತ್ತರಾಖಂಡ, ಜಾರ್ಖಂಡ್, ಕರ್ನಾಟಕ, ತೆಲಂಗಾಣ, ಮಹಾರಾಷ್ಟ್ರ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಮುಂತಾದ ರಾಜ್ಯಗಳ ರೈತರೂ ಬಂದು ಸೇರುತ್ತಿದ್ದಾರೆ. ತಮ್ಮ ರಾಜಧಾನಿಗೇ ಪ್ರವೇಶ ನಿರಾಕರಿಸಿದ ಮೋದಿ ಸರಕಾರವನ್ನು ರಾಜಧಾನಿಯ ಗಡಿಗಳಲ್ಲಿ ಸುತ್ತುವರೆದಿದ್ದಾರೆ. ಬೇಷರತ್ತಾಗಿ ಮಾತುಕತೆಗಳನ್ನು ನಡೆಸುವಂತೆ, ರೈತರ ಒಳಿತಿಗಾಗಿ ತಂದಿರುವ ಕಾನೂನುಗಳು ಎಂದು ಪ್ರಧಾನ ಮಂತ್ರಿಗಳು ಈಗಲೂ ಸಮರ್ಥಿಸಿಕೊಳ್ಳುತ್ತಿರುವ ಕಾನೂನುಗಳಲ್ಲಿ ಎಷ್ಟೊಂದು ರೈತ–ವಿರೋಧಿ ಅಂಶಗಳು ತುಂಬಿವೆ ಎಂದು ಅವರ ಮಂತ್ರಿಗಳು ಒಪ್ಪಿಕೊಳ್ಳುವಂತೆ ಮಣಿಸಿದ್ದಾರೆ. ಮಾತುಕತೆಗಳು ಮುಂದುವರೆಯುತ್ತಿವೆ.

ಭಾರತದ ರೈತರ ಈ ಐತಿಹಾಸಿಕ ಹೋರಾಟದ ಒಂದು ನೋಟ ಈ ಲೇಖನದಲ್ಲಿದೆ. ಲೇಖಕರು ಈ ಹೋರಾಟದಲ್ಲಿ ನೇರವಾಗಿ ಭಾಗವಹಿಸಿರುವ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಲ್ಲಿ ಒಬ್ಬರು, 'ದಿಲ್ಲಿ ಚಲೋ'ದಲ್ಲಿ ಕರ್ನಾಟಕದ ಜಾಥಾದ ನೇತೃತ್ವ ವಹಿಸಿದವರು.

ಮೂರು ವರ್ಷಗಳ ಹಿಂದೆ ಮಧ್ಯಪ್ರದೇಶದ ಮಂದ್‌ಸೌರ್ ನಲ್ಲಿ ರೈತರ ಮೇಲೆ ನಡೆದ ಅಮಾನುಷ ಗೋಲಿಬಾರ್ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎ.ಐ.ಕೆ.ಎಸ್.ಸಿ.ಸಿ.)ಕರೆ ನೀಡಿದ್ದ ನವೆಂಬರ್ 26 ರ ಅನಿರ್ದಿಷ್ಟಾವಧಿ 'ದಿಲ್ಲಿ ಚಲೋ' ಅಭೂತಪೂರ್ವ ದಾಖಲೆಯಾಗಿ ಇತಿಹಾಸ ಸೃಷ್ಟಿಸುತ್ತಿದೆ.

ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಧೋರಣೆಗಳ ದುಷ್ಪರಿಣಾಮವಾಗಿ ಇಡೀ ದೇಶದ ಕೃಷಿ ರಂಗ ದೊಡ್ಡ ಬಿಕ್ಕಟ್ಟಿಗೆ ಸಿಲುಕಿದ್ದು ಈ ಬಿಕ್ಕಟ್ಟಿನಿಂದ ರಕ್ಷಣೆ ನೀಡಲು ಕೇಂದ್ರ ಸರ್ಕಾರ ಕನಿಷ್ಠ 21 ದಿನಗಳ ಕಾಲ ಕೃಷಿ ರಂಗ ಹಾಗೂ ರೈತರ ಸಮಸ್ಯೆ ಕುರಿತು ವಿಶೇಷ ಅಧಿವೇಶನ ನಡೆಸಬೇಕು. ಈ ವಿಶೇಷ ಅಧಿವೇಶನದಲ್ಲಿ ರೈತ ಉತ್ಪನ್ನಗಳಿಗೆ ಎಂ ಎಸ್ ಸ್ವಾಮಿನಾಥನ್ ನೇತೃತ್ವದ ರೈತ ಆಯೋಗದ ಶಿಪಾರಸ್ಸಿನಂತೆ ಉತ್ಪಾದನಾ ವೆಚ್ಚ (ಸಿ2)ಕ್ಕೆ ಶೇ 50 ಸೇರಿಸಿ ಕನಿಷ್ಠ ಬೆಂಬಲ ಬೆಲೆಯ ಶಾಸನ ಬದ್ದ ಖರೀದಿಗೆ ಮತ್ತು ಸಾಲಗ್ರಸ್ಥವಾಗಿರುವ ಎಲ್ಲಾ ರೈತಾಪಿ ಜನರನ್ನು ಋಣಮುಕ್ತಗೊಳಿಸಲು, ಪ್ರತಿಯೊಬ್ಬರಿಗೂ ಸಾಂಸ್ಥಿಕ ಸಾಲ ಒದಗಿಸಿ ಖಾಸಗಿ ಲೇವಾದೇವಿ ದಾರರಿಂದ ಮುಕ್ತಗೊಳಿಸಿ ರಾಷ್ಟ್ರೀಯ ಋಣ ಮುಕ್ತ ಆಯೋಗವನ್ನು ಶಾಸನಬದ್ದವಾಗಿ ರಚಿಸಲು ಕಾನೂನು ಕಾನೂನು ಅಂಗೀಕರಿಸಬೇಕೆಂಬ ಬೇಡಿಕೆಗಳನ್ನು ಮುಂದಿಡಲು ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಅಸ್ತಿತ್ವಕ್ಕೆ ಬಂದಿತ್ತು. ಆಗಲೇ ಅಖಿಲ ಭಾರತ ಕಿಸಾನ್ ಸಭಾ ಸೇರಿ ಸುಮಾರು 200 ಕ್ಕೂ ಹೆಚ್ಚು ಸಂಘಟನೆಗಳು ಈ ವಿಶಾಲ ವೇದಿಕೆಯ ಸಹಭಾಗಿಗಳಾಗಿದ್ದವು.

ಸರಿಯಾಗಿ ಎರಡು ವರ್ಷದ ಹಿಂದೆ ಈ ಎರಡೂ ಮಸೂದೆಗಳ ಕರಡನ್ನು ರಚಿಸಿ, ಮಹಾರಾಷ್ಟ್ರದ ರೈತ ನಾಯಕ,ಲೋಕಸಭಾ ಸದಸ್ಯ ರಾಜುಶೆಟ್ಟಿ ಹಾಗೂ ಎಐಕೆಎಸ್ ಜಂಟಿ ಕಾರ್ಯದರ್ಶಿ, ರಾಜ್ಯ ಸಭಾ ಸದಸ್ಯ ಕೆ.ಕೆ ರಾಘೇಶ್ ಮೂಲಕ ಸಂಸತ್ತಿನಲ್ಲಿ ಮಂಡಿಸಲಾಗಿತ್ತು.

ಸಂಸತ್ತು ಈ ಎರಡೂ ಮಸೂದೆಗಳನ್ನು ಅಂಗೀಕರಿಸಲು ಒತ್ತಡ ಹಾಕುವ ಉದ್ದೇಶದಿಂದ ಚಳಿಗಾಲ ಅಧಿವೇಶನ ನಡೆಯುವ ಇದೇ ಸಮಯದಲ್ಲಿ ಸುಮಾರು 30ಕಿ.ಮೀ.ಪಾದಯಾತ್ರೆ ಮೂಲಕ ಸಹಸ್ರಾರು ರೈತರು ದೆಹಲಿಗೆ ಧಾವಿಸಿ ಸಂಸತ್

ಪುಟ 10 ನೋಡಿ

ಮೂರು ಕಾಯ್ದೆಗಳನ್ನು ರದ್ದು ಮಾಡದಿದ್ದರೆ ತೀವ್ರತಮ ರೈತ ಹೋರಾಟ–ಸಂಯುಕ್ತ ಕಿಸಾನ್ ಮೋರ್ಚಾ

ಡಿ.5 ರಂದು ಎಲ್ಲ ಹಳ್ಳಿಗಳಲ್ಲೂ ಮೋದಿ ಸರಕಾರ–ಅಂಬಾನಿ–ಅದಾನಿ ಪ್ರತಿಕೃತಿ ದಹನ



ರೈತರ ಹೋರಾಟದ ತೀವ್ರತೆಯನ್ನು ಕೊನೆಗೂ ಮನಗಂಡ ಮೋದಿ ಸರಕಾರ ಬೇಷರತ್ತಾಗಿ ಡಿಸೆಂಬರ್1 ರಂದೇ ಮಾತುಕತೆಗೆ ಆಹ್ವಾನಿಸಿತು. ಮೊದಲಿಗೆ ಪಂಜಾಬಿನ 32 ಪ್ರತಿನಿಧಿಗಳನ್ನು ಮಾತುಕತೆಗೆ 'ಕರೆಯಲಾಯಿತು. ಪಂಜಾಬಿನ ರೈತರ ಒತ್ತಾಯದಿಂದಾಗಿ ಕೊನೆಗೆ ಎಐಕೆಎಸ್‌ಸಿಸಿಯ ಪರವಾಗಿ ಹನ್ನನ್ ಮೊಲ್ಲ ಸೇರಿದಂತೆ ಮೂವರು ಇತರ ಸಂಘಟನೆಗಳ ಮುಖಂಡರನ್ನೂ ಆಹ್ವಾನಿಸಲಾಯಿತು.

ಹನ್ನನ್ ಮೊಲ್ಲರವರಿಗೆ ಡಿಸೆಂಬರ್ 1 ರ ಮಾತುಕತೆಯಲ್ಲಿ ಭಾಗವಹಿಸಲು ಸರಕಾರದಿಂದ ಪತ್ರ ಬಂದಾಗ, ಇಡೀ ಎ.ಐ.ಕೆ.ಎಸ್.ಸಿ.ಸಿ ಕಾರ್ಯಕಾರಿ ಗುಂಪನ್ನು ಕರೆಯದಿರುವ ಬಗ್ಗೆ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಒಂದು ಪತ್ರವನ್ನು ಹನ್ನನ್ ಮೊಲ್ಲ ಮತ್ತು ಎ.ಐ.ಕೆ.ಎಸ್.ಸಿ.ಸಿ ಪರವಾಗಿ ಭಾರತ ಸರಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಿಗೆ ಸಲ್ಲಿಸಲಾಯಿತು ಎಂದು ಎಐಕೆಎಸ್ ಹೇಳಿದೆ.

ಎ.ಐ.ಕೆ.ಎಸ್.ಸಿ.ಸಿ ಸುಮಾರಾಗಿ ಎಲ್ಲ ಪ್ರಮುಖ ರಾಜ್ಯಗಳ 250ಕ್ಕೂ ಹೆಚ್ಚು ಸಂಘಟನೆಗಳ ಅಖಿಲ ಭಾರತ ವೇದಿಕೆಯಾಗಿದ್ದು ರಾಷ್ಟ್ರೀಯ ಕಾರ್ಯಕಾರಿ ಗುಂಪಿನ ಮೂಲಕ ಸಾಮೂಹಿಕ ನೇತೃತ್ವದಲ್ಲಿದೆ. ಈ ಗುಂಪಿನ ಸದಸ್ಯರೆಲ್ಲರೂ ವಿವಿಧ ಸಂಘಟನೆಗಳ ಹಿರಿಯ ರೈತ ಮುಖಂಡರುಗಳು, ಪ್ರಾದೇಶಿಕ ಮತ್ತು ವಲಯವಾರು ಪ್ರಾತಿನಿಧ್ಯ ಹೊಂದಿರುವವರು. ಈ ಕಾಯ್ದೆಗಳು ಮತ್ತು ಮಸೂದೆ ಅಖಿಲ ಭಾರತ ಪರಿಣಾಮ ಹೊಂದಿರುವುದರಿಂದ ಈ ಬಗ್ಗೆ ಯಾವುದೇ ಅರ್ಥಪೂರ್ಣ ಚರ್ಚೆಯಲ್ಲಿ ಅಖಿಲ ಭಾರತ ಪ್ರಾತಿನಿಧ್ಯ ಅಗತ್ಯವಾಗುತ್ತದೆ, ಆದ್ದರಿಂದ ಪೂರ್ಣ ಕಾರ್ಯಕಾರಿ ಗುಂಪನ್ನು ಕರೆಯಬೇಕಾಗಿದೆ ಎಂದು ಈ ಪತ್ರದಲ್ಲಿ ತಿಳಿಸಲಾಗಿತ್ತು.

ಕೇಂದ್ರ ಸರಕಾರದ ಕೃಷಿ ಮತ್ತು ಇತರ ಮಂತ್ರಿಗಳೊಂದಿಗೆ ಡಿಸೆಂಬರ್ 1ರ ಸಭೆಯ ನಂತರ ಪಂಜಾಬಿನ ರೈತರು ಬಂದು ನೆರೆದಿರುವ ಸಿಂಘು ಗಡಿಯಲ್ಲಿ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ (ಎ.ಐ.ಕೆ. ಎಸ್.ಸಿ.ಸಿ.)ಯ ಕಾರ್ಯಕಾರಿ ಗುಂಪು, ಪಂಜಾಬ್ ರೈತ ಸಂಘಟನೆಗಳ ಸಮನ್ವಯ ಸಮಿತಿ, ಆರ್.ಕೆ.ಎಂ.ಎಸ್ ಮತ್ತು ಭಾರತೀಯ ಕಿಸಾನ್ ಯೂನಿಯನ್‌ನ ಗುಂಪುಗಳ ಜಂಟಿ ಸಭೆ ಡಿಸೆಂಬರ್ 2ರಂದು ನಡೆದು ಸಂಯುಕ್ತ ಕಿಸಾನ್ ಮೋರ್ಚಾದ ಅಡಿಯಲ್ಲಿ ದಿಲ್ಲಿ ಚಲೋ ಹೋರಾಟವನ್ನು ಮತ್ತು ದೇಶವ್ಯಾಪಿ ಚಳುವಳಿಯನ್ನು ತೀವ್ರಗೊಳಿಸಬೇಕು ಎಂದು ನಿರ್ಧರಿಸಲಾಯಿತು ಎಂದು ಎ.ಐ.ಕೆ.ಎಸ್..ಸಿ.ಸಿ ಮರುದಿನ ನೀಡಿದ ಪ್ರಕಟಣೆಯಲ್ಲಿ ಹೇಳಿತು. ಸುಮಾರು 3ಲಕ್ಷ ಜನಗಳು ಈ ಅಭೂತಪೂರ್ವ ರೈತ ಭ್ಂಗಿಲಿನ್‌ಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಅದು ಹೇಳಿದೆ.

ಈ ಚಾರಿತ್ರಿಕ ಹೋರಾಟವನ್ನು ಹತ್ತಿಕ್ಕಲಿಕ್ಕಾಗಿ ಮೋದಿ ಸರಕಾರ ರೈತ ಮುಖಂಡತ್ವವನ್ನು ವಿಭಜಿಸಲು ಮತ್ತು ಜನಗಳನ್ನು ದಾರಿ ತಪ್ಪಿಸಲು ಹಟ ತೊಟ್ಟಂತಿದೆ. ಈ ಸಂದರ್ಭದಲ್ಲಿ ಈ ಸಭೆ ಈ ಕೆಳಗಿನ ನಿರ್ಧಾರಗಳನ್ನು ಮಾಡಿತು:

1. ಮೂರು ಕಾರ್ಪೊರೇಟ್–ಪರ ಕಾಯ್ದೆಗಳನ್ನು ಮತ್ತು ವಿದ್ಯುತ್ ಮಸೂದೆಯನ್ನು ರದ್ದು ಮಾಡಬೇಕು ಎಂಬ ಬೇಡಿಕೆಯ ಮೇಲೆ ಚರ್ಚೆಯ ಪ್ರಶ್ನೆಯೇ ಇಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಲಿಖಿತವಾಗಿ ಸಲ್ಲಿಸುತ್ತದೆ ಮತ್ತು ಇದನ್ನು ಕೂಡಲೇ ಅನುಮೋದಿಸಬೇಕು ಹಾಗೂ ಹೋರಾಟವನ್ನು ಬಗೆಹರಿಸಬೇಕು ಎಂದು ಸರಕಾರಕ್ಕೆ ಪತ್ರವನ್ನು ಸಲ್ಲಿಸುತ್ತದೆ.
2. ಈ ಮೇಲಿನ ಕಾಯ್ದೆಗಳ ವಿವರವಾದ ವಿಮರ್ಶೆಯನ್ನು ಪತ್ರಕ್ಕೆ ಲಗತ್ತಿಸಲಾಗುವುದು. ಆದರೆ, ಇದರ ಮೇಲೆ ಪರಿಚ್ಛೇದವಾರು ಚರ್ಚೆಯನ್ನು ಒಪ್ಪುವುದಿಲ್ಲ.
3. ರೈತ ಕೃಷಿಯ ಕಂಪನೀಕರಣದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ನರೇಂದ್ರ ಮೋದಿ ಸರಕಾರದ ಮತ್ತು ಜತೆಯಲ್ಲಿ ಕಾರ್ಪೊರೇಟ್ ದೈತ್ಯರಾದ ಅಂಬಾನಿ ಮತ್ತು ಅದಾನಿಯ ಪ್ರತಿಕೃತಿಗಳನ್ನು ಡಿಸೆಂಬರ್ 5ರಂದು ರೈತರು ದೇಶಾದ್ಯಂತ ಎಲ್ಲ ಹಳ್ಳಿಗಳಲ್ಲಿ ದಹನ ಮಾಡುವರು. ಈ ಮೂಲಕ ಇದನ್ನು ಕಾರ್ಪೊರೇಟ್–ವಿರೋಧಿ ಆಂದೋಲನವಾಗಿ ಬೆಳೆಸಲಾಗುವುದು.
4. ದೇಶವ್ಯಾಪಿ ಚಳುವಳಿಯನ್ನು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನ, ಮಹಿಳೆಯರು ಮುಂತಾದ ಸಮಾಜದ ಇತರ ವಿಭಾಗಗಳೊಂದಿಗೆ ಕೈಜೋಡಿಸುವ ಮೂಲಕ ತೀವ್ರಗೊಳಿಸುವುದು.

ಡಿಸೆಂಬರ್ 3ರ ಸಭೆಯಲ್ಲಿ ಮೂರು ಕೃಷಿ ಕನೂನುಗಳ ವಿವಿಧ ಅಂಶಗಳ ಬಗ್ಗೆ ವಿವರವಾಗಿ ಚರ್ಚೆ ನಡೆಯಿತು. ರೈತರು ಎತ್ತಿದ ಆಕ್ಷೇಪಗಳನ್ನು ನಿವಾರಿಸಲು ಎಂಟು ತಿದ್ದುಪಡಿಗಳನ್ನು ಮಾಡುವುದಾಗಿ ಸರಕಾರದ ಪರವಾಗಿ ಹೇಳಲಾಯಿತು ಎನ್ನಲಾಗಿದೆ. ಆದರೆ ರೈತ ಪ್ರತಿನಿಧಿಗಳು ಇಂತಹ ಕಾನೂನುಗಳನ್ನು ಸಂಪೂರ್ಣವಾಗಿ ರದ್ದು ಮಾಡಬೇಕು ಎಂಬ ತಮ್ಮ ನಿರ್ಧಾರವನ್ನು ಪುನರುಚ್ಚರಿಸಿದರು ಎನ್ನಲಾಗಿದೆ. ಮತ್ತೆ ಡಿಸೆಂಬರ್ 5 ರಂದು ಮಾತುಕತೆ ಮುಂದುವರೆಯಲಿದೆ.

ಡಿಸೆಂಬರ್ 4 ರಂದು ಸಭೆ ಸೇರಿದ ಸಂಯುಕ್ತ ಕಿಸಾನ್ ಮೋರ್ಚಾ ಮೇಲಿನ ಕಾರ್ಯಕ್ರಮವಲ್ಲದೆ ಡಿಸೆಂಬರ್ 8 ರಂದು ಮೂರು ಕಾಯ್ದೆಗಳ ವಿರುದ್ಧ ಅಖಿಲ ಭಾರತ್ ಹರತಾಳ ನಡೆಸಲು ಕರೆ ನೀಡಿದೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಆಂದೋಲನ

ಕೋವಿಡ್–19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ

ಏಕೆ? ಏನು? ಎಷ್ಟು? ಯಾವಾಗ? ಹೇಗೆ?

– ಡಾ। ಕೆ. ಸುಶೀಲಾ



ಭಾಗ–1 ದೇಹ ರಕ್ಷಣಾ ವ್ಯೂಹ ಮತ್ತು ಲಸಿಕೆಯ ವಿಜ್ಞಾನ

ಕೋವಿಡ್–19 ಲಸಿಕೆ ಮುಂದಿನ ತಿಂಗಳೇ ಲಭ್ಯವಾಗುತ್ತದೆ ಎಂಬುದು ಸುದ್ದಿಯಲ್ಲದೆ. ಕೋವಿಡ್–19 ಕುರಿತು ವಾಸ್ತವಕ್ಕೆ ದೂರವಾದ ಅತಿರಂಜಿತ ನಿಲುವುಗಳನ್ನು ತಾಳಿರುವ ಸರಕಾರ ಮತ್ತು ಮಾಧ್ಯಮಗಳು ಲಸಿಕೆ ಕುರಿತು ಸಹ ಎಲ್ಲ ಸಮಸ್ಯೆಗಳು ಪರಿಹಾರವಾದವು ಎಂಬಂತೆ ವರ್ತಿಸುತ್ತಿವೆ. ಆದರೆ ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತವೇ ಇದೆ. ಈ ಕುರಿತು ವಾಸ್ತವವನ್ನು ವಿಶ್ಲೇಷಿಸುವ ಲೇಖನ ಸರಣಿ ಇದು. ಲಸಿಕೆ ಎಂದರೆ ಏನು? ಅದು ಹೇಗೆ ಕೆಲಸ ಮಾಡುತ್ತದೆ ? ಕೋವಿಡ್ ಲಸಿಕಾ ಕಾರ್ಯಕ್ರಮದ ಸಮಸ್ಯೆಗಳೇನು? ಲಸಿಕೆ ಅಭಿವೃದ್ಧಿಯ ಈಗಿನ ಪರಿಸ್ಥಿತಿ ಏನು? ಭಾರತಕ್ಕೆ ಲಸಿಕೆಯ ಒಟ್ಟು ಅಗತ್ಯ ಎಷ್ಟು? ಲಸಿಕೆಯ ವೆಚ್ಚ ಎಷ್ಟು, ಸಾಗಾಣಿಕೆ ಹೇಗೆ? ಲಸಿಕೆ ಆದ್ಯತೆಯ ಸರಣಿ ಹೇಗಿರಬೇಕು? ಲಸಿಕೆಯನ್ನು ಆದ್ಯತೆಯ ಪ್ರಕಾರ ಹೇಗೆ ತಲುಪಿಸುವುದು? ಲಸಿಕೆ ಕಾರ್ಯಕ್ರಮಕ್ಕೆ ಎಷ್ಟು ಸಿಬ್ಬಂದಿ, ಮೂಲಸೌಕರ್ಯ ಬೇಕು? ಅದನ್ನು ಹೊಂದಿಸುವುದು ಹೇಗೆ? ಈ ಪ್ರಶ್ನೆಗಳಿಗೆ ವಾಸ್ತವ ನೆಲೆಯಲ್ಲಿ ಉತ್ತರ ಕೊಡುವ ಪ್ರಯತ್ನವಿದು. ಹಿಂದಿನ ಹಲವಾರು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನುಭವವಿರುವ, ಆ ದೃಷ್ಟಿಯಿಂದ ಕೋವಿಡ್–19 ಲಸಿಕಾ ಕಾರ್ಯಕ್ರಮದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಡಾ। ಕೆ. ಸುಶೀಲಾ ಅವರು ಇದನ್ನು ಬರೆದಿದ್ದಾರೆ. ಈ ಭಾಗ–1 ರಲ್ಲಿ ದೇಹ ರಕ್ಷಣಾ ವ್ಯವಸ್ಥೆಯ ಕುರಿತು ತಿಳಿಸಿ, ಅದರ ಆಧಾರದ ಮೇಲೆ ಲಸಿಕೆಯ ವಿಜ್ಞಾನವನ್ನು ವಿವರಿಸುತ್ತಾರೆ.

ಬಹಳಷ್ಟು ಕಾಲದಿಂದ ಈ ಪ್ರಪಂಚದಲ್ಲಿ ನೆಲೆಸಿದ್ದ ಕೊರೊನಾ ವೈರಸ್‌ನಿಂದ ಉದ್ಭವಿಸಿದ ಸಾರ್ಸ್–ಕೊವ್–2 ಎನ್ನುವ ಹೊಸತಳಿ ಮನುಷ್ಯರಲ್ಲಿ ಪ್ರಥಮ ಬಾರಿಗೆ ಕೋವಿಡ್–19 ಎನ್ನುವ ಕಾಯಿಲೆಯನ್ನು ಉಂಟು ಮಾಡಿ ಈಗಷ್ಟೆ ಒಂದು ವರ್ಷ ಸಂದಿದೆ. ಅತ್ಯಲ್ಪ ಕಾಲದಲ್ಲೇ, ಯಾವುದೇ ಪಾಸ್‌ಪೋರ್ಟ್, ವೀಸಾಗಳ ಹಂಗಿಲ್ಲದೆ ಪ್ರಪಂಚದ ದೇಶಗಳನ್ನೆಲ್ಲಾ ಪ್ರವೇಶಿಸಿ, ಅತೀ ಶೀಘ್ರವಾಗಿ ಅಲ್ಲಿನ ಜನರಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಸೋಂಕುಂಟು ಮಾಡಿ, ತಳವೂರುವುದರಲ್ಲಿ ಈ ವೈರಸ್ ಸಫಲವಾಗಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಅತೀ ಕನಿಷ್ಟ ಮತ್ತು ಅರಾಜಕತೆ, ಬಡತನ, ಜನಸಾಂದ್ರತೆ ಅತೀ ಗರಿಷ್ಟ ಮಟ್ಟದಲ್ಲಿರುವ ದೇಶಗಳಲ್ಲಿ ಅಪಾರ ಪ್ರಮಾಣದಲ್ಲಿ ಸಾವು–ನೋವನ್ನುಂಟು ಮಾಡಿದೆ.

ಈ ಮಹಾಸೋಂಕಿನಿಂದ ಪಾರಾಗುವ ಬಗೆ ಹೇಗೆ?

1. ಈ ಕಾಯಿಲೆಯನ್ನು ಗುಣಪಡಿಸಲು ಸಮರ್ಥವಾಗಿರುವ ಔಳಧದ ಬಳಕೆಯಿಂದ ಇದು ಸಾಧ್ಯ. ಆದರೆ ಈ ತನಕ ಇಂತಹ ಔಷಧದ ಅವಿಷ್ಕಾರವಾಗಿಲ್ಲ. ಮಾತ್ರವಲ್ಲ ಶೀಘ್ರದಲ್ಲಿ ಅವಿಷ್ಕಾರವಾಗುವ ಲಕ್ಷಣಗಳು ಕಾಣುತ್ತಿಲ್ಲ.
2. ಕಾಯಿಲೆ ಬಾರದಂತೆ ತಡೆಗಟ್ಟುವ ಕ್ರಮಗಳ ಉಪಯೋಗ.

ಮಾಸ್ಕ್ ಧಾರಣೆ, ದೈಹಿಕ ಅಂತರ ಕಾಪಾಡುವಿಕೆ, ಪದೇ ಪದೇ ಸಾಬೂನಿಂದ ಕೈತೊಳೆಯುವುದು ಈ ಮಹಾಸೋಂಕು ಹಬ್ಬುವುದನ್ನು ತಡೆಗಟ್ಟುವಲ್ಲಿ ಅತ್ಯಂತ ಫಲಕಾರಿಯಾದ ವಿಧಾನಗಳು. ಸಲಹೆ ನೀಡುವಾಗ ಅತೀ ಸುಲಭ, ಸರಳ ಎನ್ನಿಸುವ ಇವುಗಳನ್ನು ಕಾರ್ಯರೂಪಕ್ಕೆ ತರುವುದು ಎಷ್ಟು ಕಠಿಣವೆಂದು ಈಗಾಗಲೇ ಸಾಬೀತಾಗಿದೆ.

ಈ ಮಹಾಸೋಂಕಿನಿಂದ ಪಾರಾಗಲು ಉಳಿದ ಮಾರ್ಗವೆಂದರೆ ವೈರಸ್‌ನ ಸೋಂಕು ತಡೆಗಟ್ಟಲು ಪ್ರಬಲವಾದ ಲಸಿಕೆಯ ಬಳಕೆ.

ದೇಹ ರಕ್ಷಣಾವ್ಯೂಹ

ಲಸಿಕೆ (ವ್ಯಾಕ್ಸಿನ್) ಎಂದರೆ ಏನು? ಇದು ಸೋಂಕನ್ನು ತಡೆಗಟ್ಟಲು ಹೇಗೆ ಕಾರ್ಯಪ್ರವೃತ್ತವಾಗುತ್ತದೆ ಎಂದು ತಿಳಿಯಲು ದೇಹಕ್ಕೆ ಪ್ರಕೃತಿ ನೀಡಿದ ಪ್ರಬಲವಾದ, ಅತ್ಯದ್ಭುತವಾಗಿ ಕಾರ್ಯ ನಿರ್ವಹಿಸುವ "ದೇಹ ರಕ್ಷಣಾವ್ಯೂಹ"ದ ಸಂಕ್ಷಿಪ್ತ ಪರಿಚಯ ಸೂಕ್ತ.

ನಮ್ಮ ದೇಹದ ಮೂಳೆಯೊಳಗಿರುವ ಅಸ್ಥಿಮಜ್ಜೆಯಲ್ಲಿ ಉತ್ಪತ್ತಿಯಾಗುವ ವಿವಿಧ ಜಾತಿಯ ರಕ್ತಕಣಗಳಲ್ಲಿ ಒಂದಾದ "ಲಿಂಫ್ ಬಿಳಿ ರಕ್ತ ಕಣಗಳು" ಈ ರಕ್ಷಣೆಯಲ್ಲಿ ದಹಿಸುವ ಪಾತ್ರ ಅತ್ಯಂತ ಮಹತ್ವಪೂರ್ಣವಾದದ್ದು.

ಈ ಪ್ರಪಂಚದಲ್ಲಿರುವ ಎಲ್ಲಾ ಸಜೀವ, ನಿರ್ಜೀವ ಕಣಗಳು ತಮ್ಮ ಜಾತಿಗೆ ವಿಶಿಷ್ಟವಾದ, ನಿಖರವಾದ, ಗುರುತು ಚಿಹ್ನೆಯನ್ನು ಹೊಂದಿರುತ್ತವೆ. ಇದನ್ನು 'ಆ್ಯಂಟಿಜನ್' ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಪ್ರತೀ ಮಾನವ ಶರೀರದ ಎಲ್ಲಾ ಕಣಗಳು ಆ ದೇಹಕ್ಕೆ ವಿಶಿಷ್ಟವಾದ 'ಆ್ಯಂಟಿಜೆನ್'ನ್ನು ಹೊಂದಿರುತ್ತದೆ.

ಯಾವುದೇ ಪರಕಣ ದೇಹವೊಂದನ್ನು ಪ್ರವೇಶಿಸಿದಾಗ ಅದು ಸ್ನೇಹಿತ, ನಿರುಪದ್ರವಿ ಅಥವಾ ವೈರಿ ಕಣವೇ ಎನ್ನುವುದನ್ನು ಅವುಗಳ 'ಆ್ಯಂಟಿಜನ್' ಗುರುತಿಸುವುದರಿಂದಾಗಿ ಪತ್ತೆ ಹಚ್ಚುವ ತರಬೇತಿಯನ್ನು ದೇಹ ತನ್ನಲ್ಲಿ ಉತ್ಪತ್ತಿಯಾಗುವ ಎಲ್ಲಾ ಲಿಂಫ್‌ಕಣಗಳಿಗೂ ನೀಡಿರುತ್ತದೆ. ಶತ್ರುಕಣ ಒಳ ಪ್ರವೇಶಿಸಿದೆ ಎಂದು ತಿಳಿದಾಗ, ವಿಶೇಷ ತರಬೇತಿ ಪಡೆದ 'ಟಿ' ಲಿಂಫ್‌ಕಣಗಳು ಶತ್ರು ಕಣವನ್ನು ಕರಾರುವಾಕ್ಕಾಗಿ ಗುರುತಿಸಿ, ವಿಭಜನೆಗೊಳ್ಳುತ್ತಾ ಹೆಚ್ಚಳಗೊಂಡು ಕಾರ್ಯ ಪ್ರವೃತ್ತವಾಗುತ್ತವೆ. ಈ ವಿಶಿಷ್ಟ 'ಆ್ಯಂಟಿಜನ್'ಗಳಿರುವ ಶತ್ರುಕಣಗಳ ನಾಶಕ್ಕೆ ಸೂಕ್ತವಾದ 'ಆ್ಯಂಟಿಬೋಡಿ' ಗಳನ್ನು ತಯಾರಿಸುವ ವಿಶೇಷ ತರಬೇತಿ ಪಡೆದ 'ಬಿ' ಲಿಂಫ್‌ಕಣಗಳನ್ನು ಹುಡುಕಿ ಕೂಡಲೇ ಕಾರ್ಯಪ್ರವೃತ್ತವಾಗುವಂತೆ ಆದೇಶ ನೀಡುತ್ತವೆ. ಆದೇಶ ಪಡೆದ 'ಬಿ' ಲಿಂಫ್‌ಕಣಗಳ ಗುಂಪು ಶೀಘ್ರವಾಗಿ ವೃದ್ಧಿಗೊಳುತ್ತವೆ. ಹೀಗೆ ವೃದ್ಧಿಗೊಂಡ 'ಟಿ' ಮತ್ತು 'ಬಿ' ಕಣಗಳನ್ನು 'ಎಫೆಕ್ಟರ್' ಕಣಗಳೆಂದು ಕರೆಯುತ್ತಾರೆ. ತಮ್ಮ ಸಂಖ್ಯೆಯಲ್ಲಿ ಅಭಿವೃದ್ಧಿಗೊಳ್ಳುತ್ತಾ ಇವು 'ಆ್ಯಂಟಿಬೊಡಿ'ಗಳ ತಯಾರಿಕೆಯಲ್ಲಿ ತೊಡಗುತ್ತವೆ. ಹಾಗೂ ಶತ್ರು ಕಣಗಳು ನಾಶಗೊಂಡಾಗ ಈ 'ಬಿ' ಮತ್ತು 'ಟಿ' ಎಫೆಕ್ಟರ್ ಕಣದ ಗುಂಪಿನಲ್ಲಿ ಅಲ್ಪ ಪ್ರಮಾಣದ ಕಣಗಳು ಉಳಿದು, ಇತರೆಲ್ಲಾ ಕಣಗಳು ನಾಶಹೊಂದುತ್ತವೆ. ಹೀಗೆ ಉಳಿದ 'ಟಿ' ಮತ್ತು ಬಿ' ಎಫೆಕ್ಟರ್ ಕಣಗಳೇ "ನೆನಪಿನ ಕಣ"ಗಳು. ಮತ್ತು ಈ ಕ್ರಿಯೆಗೆ ದೇಹದ "ಮೊದಲ ಸುತ್ತಿನ ರಕ್ಷಣಾ ಕ್ರಿಯೆ" ಎಂದು ಕರೆಯಲಾಗುತ್ತದೆ. ಆದರೆ ಈ ಕ್ರಿಯೆಗೆ ಬೇಕಾಗುವ ಸಮಯಾವಕಾಶ ಹೆಚ್ಚಾಗಿರುವುದರಿಂದ 'ಆ್ಯಂಟಿಬೋಡಿ'ಯ ಪ್ರಮಾಣ ಗರಿಷ್ಠ ಮುಟ್ಟಲು ಹೆಚ್ಚಿನ ಸಮಯದ ಅವಶ್ಯಕತೆ ಇದೆ. ಆ ಸಾಂದ್ರತೆಯ ಮಟ್ಟ ರಕ್ತದಲ್ಲಿ ಉಳಿಯುವ ಕಾಲಾವಕಾಶ ಕೂಡ ಕಡಿಮೆ ಹಾಗೂ ಈ ಮಟ್ಟ ಕುಸಿಯುವುದೂ ಶೀಘ್ರವಾದರೂ ಹಲವು ಕಾಯಿಲೆಗಳಲ್ಲಿ ಇದು ಸಂಪೂರ್ಣ ಮಾಯವಾಗದು. ಮತ್ತು ಈ ಕ್ರಿಯೆಯ ಗುಣಮಟ್ಟ ವೈರಿಕಣದಲ್ಲಿರುವ ಆ್ಯಂಟಿಜನ್‌ನ ಗುಣಲಕ್ಷಣ ಮತ್ತು ದಾಳಿಗೊಳಗಾದ ದೇಹದ ರಕ್ಷಣ ವ್ಯವಸ್ಥೆಯ ಸಾಮರ್ಥ್ಯವನ್ನು ಹೊಂದಿಕೊಂಡಿದೆ.

ದೇಹದ ಎರಡನೆಯ ಸುತ್ತಿನ ರಕ್ಷಣಾ ಪ್ರಕ್ರಿಯೆ ಹೇಗೆ?

ಮುಂದೊಮ್ಮೆ ಅದೇ ಶತ್ರು ಕಣ ಅದೇ ದೇಹದ ಮೇಲೆ ದಾಳಿ ಮಾಡಿದರೆ ಮೊದಲಿನ ದಾಳಿಯಲ್ಲಿ ಉತ್ಪತ್ತಿಯಾಗಿ ಕಾದಿಟ್ಟ ನೆನಪಿನ 'ಬಿ' ಮತ್ತು 'ಟಿ' ಕಣಗಳು ಈ ದಾಳಿಯನ್ನು ಹಿಮ್ಮೆಟ್ಟಿಸಲು ಕೂಡಲೇ ಕಾರ್ಯಪ್ರವೃತ್ತವಾಗುತ್ತವೆ. ಪ್ರಥಮ ದಾಳಿಯಲ್ಲಿ ಉತ್ಪತ್ತಿಯಾಗಿ ಉಳಿದ 'ಆ್ಯಂಟಿ ಬೋಡಿ'ಗಳು ಈ ಕಾರ್ಯದಲ್ಲಿ ಸಹಾಯಕಾರಿಯಾಗಿರುತ್ತವೆ. ಇಲ್ಲಿ 'ಆ್ಯಂಟಿ ಬೋಡಿ'ಗಳು ಅತೀ ಶೀಘ್ರವಾಗಿ ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಯಾಗಿ, ಶೀಘ್ರದಲ್ಲಿ ಗರಿಷ್ಠಮಟ್ಟ ತಲಪಿ, ಹೆಚ್ಚು ಕಾಲ ಆ ಮಟ್ಟದಲ್ಲಿ ಉಳಿಯುವುದರಿಂದ ದಾಳಿಗೊಳಗಾದ ದೇಹದಲ್ಲಿ ರೋಗವನ್ನುಂಟು ಮಾಡಲು ರೋಗಾಣು ವಿಫಲವಾಗುವುದು. ಹಾಗೂ ಇಲ್ಲಿ 'ನೆನಪಿನ ಕಣಗಳು' ಹೆಚ್ಚು ಸಮರ್ಥವಾಗಿರುವವು.

ಹೀಗೆ 'ಆ್ಯಂಟಿ ಬೋಡಿ'ಗಳನ್ನು ತಯಾರಿಸಿ ದೇಹ ರಕ್ಷಿಸುವ ಪ್ರಕ್ರಿಯೆಗೆ 'ಹ್ಯೂಮರಲ್' ಪ್ರಕ್ರಿಯೆ ಎನ್ನುತ್ತಾರೆ. ಕೆಲವು ವಿಶಿಷ್ಟ ವೈರಿ ಕಣಗಳೊಂದಿಗೆ ನೇರ ಹೋರಾಟಕ್ಕಿಳಿದು ಅವುಗಳನ್ನು ನಾಶಗೊಳಿಸುವ ತರಬೇತಿ ಪಡೆದ 'ಟಿಸಿ' ಹಾಗೂ 'ಎನ್.ಕೆ.' ಕಣಗಳು ಭಾಗವಹಿಸುವ ಪ್ರಕ್ರಿಯೆಗೆ "ಕಣ ರಕ್ಷಣಾ" ಪ್ರಕ್ರಿಯೆ ಎನ್ನುತ್ತಾರೆ. ಈ ಕ್ರಿಯೆಯಲ್ಲಿ ವಿಭಜನೆಗೊಂಡು 'ಎಫೆಕ್ಟರ್' ಕಣಗಳಾಗಿ ಮಾಡಲ್ಪಟ್ಟ ಕಣಗಳಲ್ಲಿ ಕೆಲವು ತಮ್ಮ ಕಾರ್ಯ ಮುಗಿದ ನಂತರ 'ನೆನಪಿನ ಕಣ'ಗಳಾಗಿ ಉಳಿಯುತ್ತವೆ.


ಲಸಿಕೆ ಎಂದರೇನು? ಹೇಗೆ ಕೆಲಸ ಮಾಡುತ್ತದೆ ?

ದೇಹರಕ್ಷಣಾ ವ್ಯೂಹ ಕಾರಾಣಾಂತರದಿಂದ ನಿಶ್ಶಕ್ತವಾಗಿದ್ದರೆ ಅಥವಾ ರೋಗಾಣು ಬಲಿಷ್ಠವಾಗಿದ್ದು, ಅತ್ಯಧಿಕ ಸಂಖ್ಯೆಯಲ್ಲಿ ದೇಹದ ಮೇಲೆ ದಾಳಿ ಇಟ್ಟರೆ, ಅಥವಾ ಅತ್ಯಂತ ಹೊಸದಾಗಿದ್ದರೆ ಆಗ ದೇಹ ರೋಗಾಣುಗಳ ವಿರುದ್ಧದ ಹೋರಾಟದಲ್ಲಿ ಸೋಲಬಹುದು. ಇದು ದೇಹಕ್ಕೆ ಅಪಾರ ಯಾತನೆಯನ್ನುಂಟು ಮಾಡಬಹುದು. ಹಲವು ಬಾರಿ ಸಾವು ಸಂಭವಿಸಬಹುದು. ಇದರಿಂದ ದೇಹವನ್ನು ರಕ್ಷಿಸಲು ಸಾಧ್ಯವೇ ಎನ್ನುವ ಪ್ರಶ್ನೆ ಎದ್ದಿತ್ತು. ಆಗ ವಿಜ್ಞಾನಿಗಳು ಕಂಡುಕೊಂಡ ಉತ್ತರ 'ಲಸಿಕೆ'ಯ ಉಪಯೋಗ.


ಅತ್ಯಂತ ನಿಶ್ಶಕ್ತಗೊಳಿಸಿದ ಹಾಗೂ ಕೊಂದ ರೋಗಾಣುಗಳನ್ನು, ರೋಗಾಣುವಿನ ಜಾತಿಯ ಬೇರೆ ತಳಿಗೆ ಸೇರಿದ ಆದರೆ ರೋಗಾಣುವಿನದ್ದೇ ಆ್ಯಂಟಿಜನ್ ಹೊಂದಿದ ಆದರೆ ಮಾನವರಿಗೆ ನಿರುಪದ್ರವಿಯಾದ ಅಥವಾ ಕನಿಷ್ಠ ಅಪಾಯಕಾರಿಯಾದ ಸೂಕ್ಷ್ಮಾಣುಗಳನ್ನು ಹಾಗೂ ರೋಗಿಯ ಶರೀರದಿಂದ ಪ್ರತ್ಯೇಕಿಸಿ ವಿಷಮುಕ್ತಗೊಳಿಸಿದ ರೋಗಾಣುವಿನ ವಿಷಪೂರಿತ ರಾಸಾಯನಿಕವನ್ನು ಲಸಿಕೆಯ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಈ ನಿರುಪದ್ರವಿ ಲಸಿಕೆಯನ್ನು ನಿರ್ದಿಷ್ಟ ಪ್ರಮಾಣದಲ್ಲಿ, ದೇಹಕ್ಕೆ ನೀಡಿದಾಗ, ದೇಹರಕ್ಷಣಾ ವ್ಯೂಹ ಇವುಗಳ ಆ್ಯಂಟಿಜನ್ ಗುರುತಿಸುವ ಮೂಲಕ ಇವು ಶತ್ರು ಕಣಗಳೆಂದು ತಿಳಿದು, ದೇಹರಕ್ಷಣೆಗಾಗಿ ಹೋರಾಟ ನಡೆಸುವುವು. ಈ ಪ್ರಕ್ರಿಯೆಯಲ್ಲಿ ತಯಾರಾದ "ನೆನಪಿನ ಕಣಗಳು", ಆ್ಯಂಟಿಬೋಡಿಗಳು ಮುಂದೊಮ್ಮೆ ಅದೇ ಆ್ಯಂಟಿಜನ್‌ಗಳನ್ನು ಹೊಂದಿದ ರೋಗಾಣುಗಳಿಂದ ದೇಹ ಪ್ರಬಲ ದಾಳಿಗೊಳಗಾದ

ಪುಟ 10 ನೋಡಿ

ಮಾನವ ದೇಹ ರಕ್ಷಣಾವ್ಯೂಹ




ಸೋಂಕು ರಕ್ಷಣಾ ಕಣಗಳು



ಲಸಿಕೆ ಹೇಗೆ ಕೆಲಸ ಮಾಡುತ್ತದೆ

ದುರ್ಬಲಗೊಳಿಸಿದ ಅಥವ ಸತ್ತ ಬ್ಯಕ್ಟೀರಿಯವನ್ನು ರೋಗಿಯ ದೇಹದೊಳಕ್ಕೆ ಸಾಮಾನ್ಯವಾಗಿ ಇಂಜೆಕ್ಷನ್ ಮೂಲಕ ಸೇರಿಸಲಾಗುವುದು



ಇತಿಹಾಸ ಸೃಷ್ಟಿಸಿರುವ ರೈತರ 'ದಿಲ್ಲಿ ಚಲೋ'

ಪುಟ 8 ರಿಂದ

ಮಾರ್ಗ್‌ದಲ್ಲಿ ಕಿಸಾನ್ ಪಾರ್ಲಿಮೆಂಟ್ ನಡೆಸಿದ್ದರು.

ಕಾರ್ಪೊರೇಟೀಕರಣದ ಸುಗ್ರೀವಾಜ್ಞೆ

ರೈತರ ಒಕ್ಕೊರಲಿನ ಬೇಡಿಕೆಗೂ ಕುರುಡಾದ ನರೇಂದ್ರ ಮೋದಿ ಸರ್ಕಾರ ಮತ್ತಷ್ಟು ವೇಗವಾಗಿ ಜಾಗತೀಕರಣ ಧೋರಣೆಗಳನ್ನು ಜಾರಿಗೊಳಿಸುತ್ತಿದೆ. ಇದರ ಮುಂದುವರೆದ ಭಾಗವಾಗಿ ಇಡೀ ಕೃಷಿ ಕ್ಷೇತ್ರವನ್ನು ಕಾರ್ಪೊರೇಟೀಕರಣಕ್ಕೆ ಒಳಪಡಿಸಲು, ಕೃಷಿಯಿಂದ ಇಡೀ ರೈತಾಪಿ ಸಮುದಾಯವನ್ನು ಒಕ್ಕಲೆಬ್ಬಿಸಲು ಸುಗ್ರಿವಾಜ್ಞೆ ಮೂಲಕ ಜೂನ್ 3, 2020 ರಂದು ಮೂರು ಕಾನೂನುಗಳನ್ನು ಜಾರಿಗೊಳಿಸಿದೆ ಮತ್ತು ವಿದ್ಯುತ್ ವಲಯವನ್ನು ಸಂಪೂರ್ಣ ಖಾಸಗೀಕರಣ ಮಾಡುವ ವಿದ್ಯುತ್ ಮಸೂದೆ 2020 ಅನ್ನು ಜಾರಿ ಮಾಡಲು ತಯಾರಿ ನಡೆಸಿದೆ.

ಇಡೀ ರೈತಾಪಿ ಸಮುದಾಯವನ್ನು ಕರೋನಾ ನೆಪದಲ್ಲಿ ಲಾಕ್‌ಡೌನ್ ನಲ್ಲಿಟ್ಟಿರುವಾಗ ಕಾರ್ಪೊರೇಟ್ ಕಂಪನಿಗಳಿಗೆ,ವಿದೇಶಿ ಬಂಡವಾಳದ ಒಡೆಯರಿಗೆ ದೇಶವನ್ನು ದೋಚಲು ಅಗತ್ಯವಾದ ರಹದಾರಿಯನ್ನು ದೊಡ್ಡದಾಗಿ ತೆರೆಯಲಾಗಿದೆ.

ಸುಗ್ರಿವಾಜ್ಞೆ ಹೊರಡಿಸಿದ ದಿನದಿಂದಲೇ ಇಡೀ ದೇಶದ ರೈತರು ಈ ಕೃಷಿ ಕಾಯ್ದೆಗಳ ವಿರುದ್ಧ ಹಾಗೂ ವಿದ್ಯುತ್ ಮಸೂದೆ 2020 ರ ವಿರುದ್ಧ ಹೋರಾಡುತ್ತಿದ್ದಾರೆ. ಕಳೆದ ಆರು ತಿಂಗಳ ಸತತ ಮತ್ತು ಹಲವು ಹಂತಗಳ ಹೋರಾಟದ ನಂತರ ದೆಹಲಿ ಚಲೋ ಗೆ ಕರೆ ನೀಡಲಾಗಿದೆ ಎಂಬುದು ಗಮನಾರ್ಹ.

ಕರ್ನಾಟಕದಲ್ಲೂ ಕೂಡ ಸೆಪ್ಟೆಂಬರ್ 28 ರಂದು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಸಂಪೂರ್ಣ ಬಂದ್ ಆಚರಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಈಗ 500 ಕ್ಕೂ ಹೆಚ್ಚು ಸಂಘಟನೆಗಳ ವಿಶಾಲ ವೇದಿಕೆಯಾಗಿ ಬೆಳೆದಿರುವ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ನೇತೃತ್ವದ ದೆಹಲಿ ಚಲೋ ನರೇಂದ್ರ ಮೋದಿ ಸರ್ಕಾರವನ್ನು ಕೊರೆಯುವ ಚಳಿಯಲ್ಲೂ ಬೆವರುವಂತೆ ಮಾಡಿದೆ.

ರೈತರು ದೆಹಲಿಗೆ ಬರದಂತೆ ತಡೆ –ಸರ್ಕಾರದ 'ಯುದ್ದ' ಸನ್ನದ್ದತೆ!

ಎಐಕೆಎಸ್ ಸಿಸಿ ಕರೆಯ ಮೇರೆಗೆ ರೈತರು ಧಾವಿಸುತ್ತಿದ್ದಂತೆ ಕೇಂದ್ರದ ಬಿಜೆಪಿ ಸರ್ಕಾರ ತನ್ನ ಫ್ಯಾಸಿಸ್ಟ್ ತೆರನ ಗುಣಕ್ಕೆ ಅನುಗುಣವಾಗಿ ರೈತರನ್ನು ಶತೃಗಳಂತೆ ಕಂಡು ದೆಹಲಿಗೆ ಬರದಂತೆ ತಡೆ ಒಡ್ಡಿದೆ. ದೆಹಲಿ ಗಡಿ ಹಂಚಿಕೊಂಡಿರುವ ಉತ್ತರ ಪ್ರದೇಶ ಹಾಗೂ ಹರ್ಯಾಣ ದ ಬಿಜೆಪಿ ಸರ್ಕಾರ ರೈತರನ್ನು ತಡೆಯುವ ಮೋದಿ ಸರ್ಕಾರದ ಸೂಚನೆ ಪಾಲಿಸುವಲ್ಲಿ ಪರಸ್ಪರ ಪೈಪೋಟಿಗೆ ಬಿದ್ದಿವೆ.

ನವೆಂಬರ್ 22 ರಂದು ಬೆಂಗಳೂರಿನ ಮೇಕ್ರಿ ವೃತ್ತದಿಂದ ಹೊರಟ ಎಐಕೆಎಸ್ ಸಿಸಿ ಕರ್ನಾಟಕ ಜಾಥಾ ರಸ್ತೆ ಮೂಲಕ 26 ರಂದು ದೆಹಲಿ ತಲುಪುವ ಗುರಿ ಹೊಂದಿತ್ತು. ಆದರೆ ದಿನಾಂಕ ನವಂಬರ್25 ರ ರಾತ್ರಿ 8 ಗಂಟೆಯಲ್ಲಿ ಆಗ್ರಾ ಹೆದ್ದಾರಿಯ ಯಾನಾ ಮನಾಯ ಬಳಿ ಇರುವ ಪಾರ್ವತಿ ನದಿ ಸೇತುವೆ ಮೇಲೆ ರಾಜಾಸ್ಥಾನ–ಉತ್ತರಪ್ರದೇಶ ಗಡಿಯಲ್ಲಿ ಯುಪಿ ಪೋಲೀಸರು ತಡೆದು ಅಕ್ರಮ ಬಂಧನಕ್ಕೆ ಒಳಪಡಿಸಿದರು.

ಕರ್ನಾಟಕದ ಜಾಥಾ ಯಾತ್ರಿಗಳ ಜೊತೆ ಮಧ್ಯಪ್ರದೇಶದ ಗುಣದಿಂದ ಮಹಾರಾಷ್ಟ್ರ, ಮಧ್ಯಪ್ರದೇಶದ ಜಾಥಾ ಯಾತ್ರಿಗಳು ಸೇರಿಕೊಂಡು ಒಟ್ಟು 200 ರಷ್ಟಿದ್ದ ಎಲ್ಲರನ್ನೂ ಸೇರಿಕೊಂಡ ಸ್ಥಳದಿಂದ ಎಐಕೆಎಸ್‌ಸಿಸಿ ಅಖಿಲ ಭಾರತ ನಾಯಕರಲ್ಲೊಬ್ಬರಾದ ಮೇಧಾ ಪಾಟ್ಕರ್ ರವರು ಜಾಥಾ ನೇತೃತ್ವ ವಹಿಸಿ ಮುನ್ನೆಡೆಸುತ್ತಿದ್ದರು.



ವಾಪಸ್ಸು ಹೋಗಲು ನಿರಾಕರಿಸಿ ಹೆದ್ದಾರಿಯಲ್ಲೇ ಕುಳಿತುಕೊಳ್ಳಲಾಯಿತು. ಆದರೆ ಪ್ರಯಾಣಿಕರ ಸೋಗಿನಲ್ಲಿ ಬಂದ ಕೆಲವು ಸಂಘ ಪರಿವಾರದ ಪುಂಡರು ಜಾಥಾ ಮುಖಂಡರನ್ನು ಗುರಿ ಮಾಡಿ ಅಶ್ಲೀಲವಾಗಿ ನಿಂದಿಸಿ ಗೂಂಡಾಧಾಳಿ ನಡೆಸುವ ವಿಫಲ ಪ್ರಯತ್ನ ನಡೆಸಿದರು.

ಇವೆಲ್ಲಾ ಬೆಳವಣಿಗೆಗಳನ್ನು ಗಮನಿಸಿ ಉತ್ತರ ಪ್ರದೇಶ ಗಡಿಯಿಂದ ಸ್ವಲ್ಪ ಹಿಂದೆ ಸರಿದು ರಾಜಾಸ್ಥಾನದ ಗಡಿಯಲ್ಲಿ ಕುಳಿತು ಕೊಳ್ಳಲಾಯಿತು. ಇದರಿಂದಾಗಿ ಪ್ರತಿಭಟನಾಕಾರರನ್ನು ದಮನಿಸಲು ಬಂದ ಯುಪಿ ಪೋಲೀಸರು ಅಸಹಾಯಕರಾದರು. ಒಂದು ಕಡೆ ಹೆದ್ದಾರಿ ಬಂದ್ ನಿಂದ ಸಂಚಾರ ತಡೆ ಉಂಟಾದರೆ ಇನ್ನೊಂದು ಕಡೆ ತಾಂತ್ರಿಕವಾಗಿ ತಮ್ಮ ಗಡಿಯಾಚೆ ಇರುವ ;ಆದರೆ ತಮ್ಮ ಎದುರೇ ಕುಳಿತಿರುವ ಪ್ರತಿಭಟನಾಕಾರರನ್ನು ಎದುರಿಸಲು ಸಾಧ್ಯವಾಗದ ಇಕ್ಕಟ್ಟಿನ ಪರಿಸ್ಥಿತಿಗೆ ಸ್ವತಃ ಯುಪಿ ಪೋಲೀಸರು ಒಳಗಾದರು. ಹೆದ್ದಾರಿಯಲ್ಲಿ ತಡೆ ಹಿಡಿಯಲ್ಪಟ್ಟ ಜಾಥಾ ಯಾತ್ರಿಗಳ ನೆರವಿಗೆ ಎಐಕೆಎಸ್ ಉಪಾಧ್ಯಕ್ಷ ಕಾಮ್ರೆಡ್ ಜಸ್ವಿಂದರ್ ಸಿಂಗ್ ನೇತೃತ್ವದಲ್ಲಿ ಸುಮಾರು 200 ಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ರಾಜಾಸ್ಥಾನ ಮುಖ್ಯಮಂತ್ರಿ ಕಛೇರಿ ಸೂಚನೆ ಮೇರೆಗೆ ಸ್ಥಳೀಯ ತಾಲ್ಲೂಕು ಆಡಳಿತ ನೆರವಿಗೆ ಬಂತು.

ಅಂತಿಮವಾಗಿ ಯುಪಿ ಪೋಲೀಸರು ಮಣಿಯಲೇಬೇಕಾಯಿತು. ನವಂಬರ್ 27 ರ ಮಧ್ಯಾಹ್ನ 4 ಗಂಟೆಗೆ ದೆಹಲಿಗೆ ತೆರಳಲು ಅವಕಾಶ ನೀಡಿದರು.

ಲಕ್ಷಾಂತರ ರೈತರ ಜಮಾವಣೆ –ಶತೃ ಸೈನಿಕರಂತೆ ಸರ್ಕಾರದ ವರ್ತನೆ

ದಿಲ್ಲಿ ಚಲೋಗೆ ಭಾರಿ ಸಂಖ್ಯೆಯಲ್ಲಿ ರೈತರು ಬರುತ್ತಿರುವುದನ್ನು ಗಮನಿಸಿದ ಕೇಂದ್ರ ಸರ್ಕಾರ ದೆಹಲಿ ಸಂಪರ್ಕಿಸುವ ಎಲ್ಲಾ ಗಡಿಗಳನ್ನು ಮುಚ್ಚಿದೆ. ಆದರೂ ಲಕ್ಷಾಂತರ ಸಂಖ್ಯೆಯಲ್ಲಿ ಹೆದ್ದಾರಿಗಳಲ್ಲಿ ತಮ್ಮ ಟ್ರಾಕ್ಟರ್ ಗಳ ಸಮೇತ ಸಾಕಷ್ಟು ದಿನಸಿ ಪದಾರ್ಥಗಳೊಂದಿಗೆ ರೈತರು ಜಮಾವಣೆಗೊಂಡಿದ್ದಾರೆ.

ಸಿಂಗು, ಟಿಕ್ರಿ, ಗಾಜಿಪುರ್,ಕುಂಡ್ಲಾ, ಗಾಜಿಯಾಬಾದ್, ಚಿಲ್ಲಾ,ಗಡಿಗಳು ಸೇರಿದಂತೆ ದೆಹಲಿ ಸುತ್ತಲೂ ರೈತರ ಜಮಾವಣೆಯಾಗಿದೆ. ಸಿಂಗು ಹಾಗೂ ಟಿಕ್ರಿ ಗಡಿಗಳಲ್ಲೇ ಕನಿಷ್ಠ 50 ಸಾವಿರ ಟ್ರಾಕ್ಟರ್ ಗಳು ನಿಂತುಕೊಂಡಿವೆ. ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ನಾಯಕತ್ವದ ಪ್ರಕಾರ ದೆಹಲಿಗೆ ಬರಲು ರಸ್ತೆಗಳ ಮೇಲೆ ನಿಂತಿರುವ ಟ್ರಾಕ್ಟರ್ ಗಳ ಸಂಖ್ಯೆ 96 ಸಾವಿರ ಇದೆ. ಈ ಆಧಾರದಲ್ಲಿ ಜಮಾವಣೆಗೊಂಡಿರುವ ಒಟ್ಟು ರೈತರ ಸಂಖ್ಯೆಯನ್ನು ಅಂದಾಜಿಸಬಹುದು.

ದೆಹಲಿಗೆ ಬರುತ್ತಿರುವ ರೈತರನ್ನು ಸ್ವಾಗತಿಸಿ ಅವರ ಬೇಡಿಕೆಗಳನ್ನು ಈಡೇರಿಸುವ ಬದಲು, ಕೇಂದ್ರ ಸರ್ಕಾರ ಅವರನ್ನು ಶತೃ ಸೈನಿಕರೆಂಬಂತೆ ಕಾಣುತ್ತಿದೆ. ಅವರಿಗೆ ಅಡ್ಡವಾಗಿ ಹೆದ್ದಾರಿಗಳನ್ನೇ ಅಗೆದು ಹಾಕಲಾಗಿದೆ. ಭಾರೀ ಟ್ರಕ್ ಗಳನ್ನು ನಿಲ್ಲಿಸಲಾಗಿದೆ. ಕಾಂಕ್ರೀಟ್ ತಡೆಗೋಡೆಗಳನ್ನು ಇಡಲಾಗಿದೆ. ಅಂತರಾಷ್ಟ್ರೀಯ ಗಡಿಗಳನ್ನು ನೆನಪಿಸುವ ಹಾಗೇ ಲೋಹದ ಮುಳ್ಳು ತಂತಿಗಳನ್ನು ಬಿಗಿಯಲಾಗಿದೆ. ರೈತರನ್ನು ಹಿಮ್ಮೆಟ್ಟಿಸಲು ಜಲ ಫಿರಂಗಿ, ಟಿಯರ್ ಗ್ಯಾಸ್ ಸಿಡಿಸಲಾಗಿದೆ. ಇಷ್ಟೆಲ್ಲಾ ದೌರ್ಜನ್ಯಗಳು ನಡೆಯುತ್ತಿದ್ದರೂ, ಕೊರೆಯುವ ಚಳಿ ಇದ್ದರೂ ಛಲ ಬಿಡದೇ ರೈತರು ಹೋರಾಡುತ್ತಿದ್ದಾರೆ.

ಆದರೆ ಕೇಂದ್ರ ಸರ್ಕಾರ ಗೃಹ ಮಂತ್ರಿ ಅಮಿತ್ ಷಾ ರವರನ್ನು ಮುಂದೆ ಬಿಟ್ಟು ಪ್ರತಿಭಟನೆ ದಮನ ಮಾಡಲು ಕಾರ್ಯಚರಣೆಗೆ ಇಳಿದಿದೆ. ಒಂದು ಕಡೆ ಮಾತುಕತೆಗೆ ಆಹ್ವಾನ ನೀಡುವುದು, ಇನ್ನೊಂದು ಕಡೆ ಇವರು ರೈತರೇ ಅಲ್ಲ ಎಂದು ಅಪಪ್ರಚಾರ ಮಾಡುವುದು ನಡೆಯುತ್ತಿದೆ. ಈ ಹೋರಾಟದ ಮುಂಚೂಣಿಯಲ್ಲಿ ಪಂಜಾಬ್, ಹರ್ಯಾಣ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮುಂಚೂಣಿ ಪಾತ್ರ ವಹಿಸುತ್ತಿರುವುದೂ ನಿಜವಾದರೂ ಇಡೀ ದೇಶದ ರೈತರ ಪಾಲ್ಗೊಳ್ಳುವಿಕೆ ಕೂಡ ಗಣನೀಯವಾಗಿದೆ.

ರಾಜಧಾನಿಯ ಸುತ್ತ ರೈತ ಹೋರಾಟಗಾರರು

ಈ ಸಂಚಿಕೆ ಮುದ್ರಣಕ್ಕೆ ಹೋಗುವ ದಿನಕ್ಕೆ 9 ನೇ ದಿನಕ್ಕೆ ಕಾಲಿಟ್ಟಿರುವ ಈ ಹೋರಾಟ ದಿನೇ ದಿನೇ ತೀವ್ರ ಗೊಳ್ಳುತ್ತಲೇ ಇದೆ. ಗಾಜೀಪುರ, ಗಾಜಿಯಾಬಾದ್ ಮುಂತಾದ ಕಡೆ ಉತ್ತರ ಪ್ರದೇಶದ ಮೂಲಕ ಬಂದ ರೈತರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಅದೇ ರೀತಿ ಮಧ್ಯ ಪ್ರದೇಶ, ರಾಜಾಸ್ಥಾನ, ಉತ್ತರಾಖಂಡ, ಜಾರ್ಖಂಡ್, ಕರ್ನಾಟಕ, ತೆಲಂಗಾಣ, ಮಹಾರಾಷ್ಟ್ರ, ಆಂದ್ರಪ್ರದೇಶ, ಪಶ್ಚಿಮ ಬಂಗಾಳ, ಮುಂತಾದ ರಾಜ್ಯಗಳ ರೈತರು ಕೂಡ ಇದ್ದಾರೆ.

ಪ್ರತಿಭಟನೆ ಪ್ರಾರಂಭವಾದ ಎರಡು ದಿನಗಳ ನಂತರ ಪ್ರತಿಭಟನೆಗೆ ಉತ್ತರ ದೆಹಲಿ ಹೊರವಲಯದ ಬುರಾರಿ ಮೈದಾನ(ನಿರಂಕಾರಿ) ದಲ್ಲಿ ಸ್ಥಳ ನಿಗದಿಪಡಿಸಿರುವ ಕೇಂದ್ರ ಸರ್ಕಾರ ವಾಸ್ತವವಾಗಿ ಶಿಸ್ತಿನಿಂದ ಹೋಗಿ ಮೈದಾನದಲ್ಲಿ ಬಂಧಿಯಾಗುವಂತೆ ರೈತರಿಗೆ ಆದೇಶ ನೀಡುತ್ತಿದೆ. ಈ ಮರ್ಮವನ್ನು ಅರಿತೇ ರೈತರು ಇದನ್ನು ಧಿಕ್ಕರಿಸಿ ಎಲ್ಲಿ ಹೇಗೆ ಎಂಬ ಶರತ್ತುಗಳನ್ನು ಹಾಕದೆ ಮಾತನಾಡಿ ಬೇಡಿಕೆ ಈಡೇರಿಸುವಂತೆ ಒತ್ತಾಯಿಸುತ್ತಿದ್ದಾರೆ. ಆರು ತಿಂಗಳಾದರೂ ಸರಿ ಬೇಡಿಕೆ ಈಡೇರುವ ತನಕ ಅನಿರ್ದಿಷ್ಟಾವಧಿ ಹೋರಾಟ ಮುಂದುವರೆಯಲಿದೆ ಎಂದು ಹೇಳುತ್ತಿದ್ದಾರೆ.

ಜೂನ್ 3, 2020 ರಂದು ಸುಗ್ರಿವಾಜ್ಞೆ ಮೂಲಕ ಜಾರಿಗೆ ತಂದು ಆನಂತರ ಅತ್ಯಂತ ಅಪ್ರಜಾಸತ್ತಾತ್ಮಕವಾಗಿ, ಸಂಸದೀಯ ನಿಯಮಗಳನ್ನು ಉಲ್ಲಂಘಿಸಿ ಸಂಸತ್ತಿನಲ್ಲಿ ಅಂಗೀಕರಿಸಿಕೊಂಡಿರುವ 1) ರೈತರ ಉತ್ಪನ್ನಗಳ ಮಾರಾಟ ಹಾಗೂ ವಾಣಿಜ್ಯ (ಉತ್ತೇಜನ ಮತ್ತು ಬೆಂಬಲ) ಕಾಯ್ದೆ 2020 .2) ಬೆಲೆ ಭರವಸೆ ಹಾಗೂ ಕೃಷಿ ಸೇವೆಗಳ ಕುರಿತ ರೈತ (ಸಶಕ್ತೀಕರಣ ಮತ್ತು ರಕ್ಷಣೆ) ಕಾಯ್ದೆ 2020 . 3) ಅಗತ್ಯ ಸರಕುಗಳ ತಿದ್ದುಪಡಿ ಕಾಯ್ದೆ 2020 ಹಾಗೂ ವಿದ್ಯುತ್ ಮಸೂದೆ 2020 ಅನ್ನು ರದ್ದುಗೊಳಿಸುವಂತೆ ರೈತರು ಅಗ್ರಹಿಸಿದ್ದಾರೆ.

ಅಂಬಾನಿ, ಅದಾನಿಯಂತಹ ಕೆಲವೇ ಕೆಲವು ಕಾರ್ಪೊರೇಟ್ ಬಂಡವಾಳಿಗರ ಹಿತ ಹಾಗೂ ವಿದೇಶಿ ಹಣಕಾಸು ಬಂಡವಾಳದ ಹಿತ ಮುಖ್ಯವಾಗಿರುವ ಮೋದಿ ಸರ್ಕಾರ, ರೈತ ಚಳುವಳಿ ದಮನಿಸಲು ಎಲ್ಲಾ ರೀತಿಯ ಪ್ರಯತ್ನ ನಡೆಸುತ್ತಿದೆ.ಇದನ್ನು ವಿಫಲಗೊಳಿಸಿ ಭಾರತವನ್ನು, ಭಾರತದ ಆತ್ಮವನ್ನು, ಕೃಷಿ ಯನ್ನು ಹಾಗೂ ಭಾರತೀಯ ರೈತರನ್ನು ರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿ ಇಡೀ ದೇಶದ ಪ್ರಜಾಸತ್ತಾತ್ಮಕ ಚಳುವಳಿ ಮೇಲೆ ಬಂದಿದೆ. ○

ಇದು ಪಾಕಿಸ್ತಾನ ಗಡಿಯಲ್ಲ, ದಿಲ್ಲಿಗೆ ಬರುವ ರಾಷ್ಟ್ರಿಯ ಹೆದ್ದಾರಿ. ದಿಲ್ಲಿಗೆ ಸ್ವಾಗತ ಎಂಬ ಫಲಕದ ಬಳಿ ರೈತರನ್ನು ತಡೆದು ನಿಲ್ಲಿಸಲು ಉಕ್ಕಿನ ಮುಳ್ಳುಬೇಲಿ, ಬ್ಯಾರಿಕೇಡುಗಳು–ಮೋದಿ ಸರಕಾರದ 'ಯುದ್ಧ ಸನ್ನದ್ಧತೆ'!



ಕೋವಿಡ್–19 ಲಸಿಕೆಯ ಸುತ್ತ......

ಪುಟ 9 ರಿಂದ

ದೇಹವನ್ನು ಕಾಯಿಲೆಯಿಂದ ಕ್ಷಿಪ್ರಗತಿಯಲ್ಲಿ ರಕ್ಷಿಸುವಲ್ಲಿ ಸಫಲವಾಗುವುವು.

ಕೋವಿಡ್–19 ಲಸಿಕಾ ಕಾರ್ಯಕ್ರಮದ ಸಮಸ್ಯೆಗಳು


ಭಾರತದಲ್ಲಿ ಕೋವಿಡ್–19 ತಡೆಗಟ್ಟುವ ಲಸಿಕಾ ಕಾರ್ಯಕ್ರಮ ಹಾಗೂ ಅದರ ಅನುಷ್ಠಾನದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಪ್ರಮುಖವಾಗಿ ಗಮನಿಸಬೇಕಾದ ವಿಷಯಗಳು.

1) ಲಭ್ಯತೆ: ಕೊವಿಡ್–19 ಕಾಯಿಲೆ ತಡೆಗಟ್ಟುವ ಸಾಮರ್ಥ್ಯ ಪ್ರತಿಶತ 50ಕ್ಕೂ ಹೆಚ್ಚಿರುವ ಲಸಿಕೆಯ ಅಗತ್ಯದ ಪ್ರಮಾಣದಲ್ಲಿ ಪೂರೈಕೆ.
2) ಹೀಗೆ ದೊರೆತ ಲಸಿಕೆಯನ್ನು ಹಾಳಾಗದಂತೆ ಕಾಪಾಡುತ್ತಾ ದೇಶದ ವಿವಿಧೆಡೆಗೆ ಸಾಗಿಸುವ ಸೌಲಭ್ಯ.
3) ಲಸಿಕೆ ಹಾಳಾಗದಂತೆ ಕಾದಿಡುವ ಕೇಂದ್ರಗಳ ಸೌಕರ್ಯ.
4)ಲಸಿಕೆ ಜನಸಾಮಾನ್ಯರೆಲ್ಲರಿಗೂ ತಲುಪಿಸುವ ಕಾರ್ಯ.
5) ಈ ಎಲ್ಲಾ ಕಾರ್ಯಕ್ಕೆ ಬೇಕಾದ ತರಬೇತಿ ಪಡೆದ ಸಿಬ್ಬಂದಿಗಳ ಪಡೆ.
6) ಹಾಗೂ ಈ ಎಲ್ಲಾ ಕಾರ್ಯಕ್ಕೆ ಬೇಕಿದ ಸರ್ವಸಲಕರಣೆಗಳು.

ಯಾವುದೇ ರೋಗವನ್ನು ತಡೆಗಟ್ಟುವ ಲಸಿಕೆಯ ಅವಿಷ್ಕಾರವಾದಾಗ ಅದನ್ನು ತಯಾರಿಸಿ, ಅದರ ಅಗತ್ಯವಿರುವ ಜನರಿಗೆ ಒದಗಿಸಲು ಸಾಮಾನ್ಯವಾಗಿ 5 ರಿಂದ 10 ವರ್ಷಗಳ ಕಾಲಾವಕಾಶ ಬೇಕಾಗುತ್ತದೆ. ಏಕೆಂದರೆ ಇದರ ರೋಗ ತಡೆಗಟ್ಟುವ ಸಾಮರ್ಥ್ಯದ ಪ್ರಮಾಣವನ್ನು ಹಲವು ಹಂತಗಳಲ್ಲಿ ಕೂಲಂಕುಷವಾಗಿ ಪರೀಕ್ಷಿಸುವುದು ಅಗತ್ಯ. ಪ್ರತ್ಯಕ್ಷವಾದ ಅಲ್ಪ ಕಾಲದಲ್ಲೇ ಪ್ರಪಂಚವನ್ನೆಲ್ಲಾ ಆವರಿಸಿ, ಜನರಿಗೆ ವೈಯುಕ್ತಿಕ, ಸಾಮಾಜಿಕ, ಆರ್ಥಿಕ ಸಂಕಷ್ಟವನ್ನೊಡ್ಡಿ, ದೇಶ ದೇಶಗಳ ಆರ್ಥಿಕ ಬುನಾದಿಯನ್ನೇ ಅಲುಗಾಡಿಸುತ್ತಿರುವ ಕೋವಿಡ್–19 ತಡೆಗಟ್ಟುವ ಲಸಿಕೆಗಾಗಿ ಅಷ್ಟು ದೀರ್ಘ ಕಾಲ ಕಾಯುವುದು ದುಸ್ತರವಾಗಿತ್ತು. ಹೀಗಾಗಿ ಹತ್ತು ಹಲವು ದೇಶಗಳಲ್ಲಿ ಹಲವಾರು ಔಷಧಿಯ ಕಂಪೆನಿಗಳು, ಈ ಕ್ಷೇತ್ರದಲ್ಲಿ ಪರಿಣತಿ ಇರುವ ವಿಜ್ಞಾನಿಗಳ ಸಹಕಾರದೊಂದಿಗೆ ಹೊಸ ಹೊಸ ತಂತ್ರಜ್ಞಾನವನ್ನು ಉಪಯೋಗಿಸುತ್ತಾ ಸಮರೋಪಾದಿಯಲ್ಲಿ ಲಸಿಕೆಯ ತಯಾರಿಕೆಗೆ ತೊಡಗಿದವು.

(ಮುಂದುವರಿಯುವುದು)

ಕಾರ್ಮಿಕ ವರ್ಗದ ಬೆಳವಣಿಗೆ – ವಿಶಿಷ್ಟತೆಗಳು ಮತ್ತು ಅಡೆತಡೆಗಳು



ಭಾರತದ ಕಾರ್ಮಿಕ ವರ್ಗಕ್ಕೆ ಒಂದು ಹೊಸ ವರ್ಗವಾಗಿ ಎದುರಾದ ಸಮಸ್ಯೆಗಳು ಕ್ರೂರ ವಸಾಹತುಶಾಹಿ ಶೋಷಣೆಗೆ ಸಂಬಂಧಿಸಿದ ಮೂಲ ಪ್ರಕ್ರಿಯೆಯಿಂದ ಹುಟ್ಟಿಕೊಂಡವು. ಊಳಿಗಮಾನ ಪದ್ಧತಿಯ ದೀರ್ಘಕಾಲದ ಮತ್ತು ಹಿಂಸಾತ್ಮಕ ವಿಘಟನೆ ಮತ್ತು 'ಬಂಡವಾಳಶಾಹಿಯ ಕುಂಠಿತ ಬೆಳವಣಿಗೆ, ಹಳೆಯ ಪ್ರಕಾರದ ಉತ್ಪಾದನೆಯ ಕುಸಿತ ಮತ್ತು ಹೊಸದರ ಏರಿಕೆಯ ನಡುವಿನ ವ್ಯಾಪಕ ಅಂತರವು ಹಲವಾರು ಸಮಸ್ಯೆಗಳಿಗೆ ಜನ್ಮ ನೀಡಿತು. ಈ ಸಮಸ್ಯೆಗಳು ಅದರ ವರ್ಗ ಪ್ರಜ್ಞೆಯ ಬೆಳವಣಿಗೆ ಮತ್ತು ಎಲ್ಲಾ ಮಧ್ಯಕಾಲೀನ ಪಳೆಯುಳಿಕೆಗಳಿಂದ ಮುಕ್ತವಾದ ಅತ್ಯಂತ ಆಧುನಿಕ ಮತ್ತು ಕ್ರಾಂತಿಕಾರಿ ವರ್ಗವಾಗಿ ಅದು ಹೊರಹೊಮ್ಮುವ ಪ್ರಕ್ರಿಯೆಯ ಮೇಲೆ ಗಮನಾರ್ಹ ಪರಿಣಾಮ ಬೀರಿದವು.

ಮೂಲ ಲೇಖಕರು: ಸುಕೋಮಲ್ ಸೇನ್ ಸಂಗ್ರಹ–ಅನುವಾದ: ಸಿ.ಆರ್. ಶಾನಭಾಗ

ಯುರೋಪಿನಲ್ಲಿ ಬಂಡವಾಳಶಾಹಿಯ ಪ್ರಗತಿಯೊಂದಿಗೆ, ಕೈಕಸಬುದಾರರು ಮತ್ತು ಕುಶಲಕರ್ಮಿಗಳು ತಮ್ಮ ಸಣ್ಣ ಘಟಕಗಳು ದೊಡ್ಡ ಉತ್ಪಾದನಾ ಉದ್ಯಮಗಳೊಂದಿಗೆ ಸ್ಪರ್ಧಿಸಲು ವಿಫಲವಾದ ಕಾರಣ ಅವರು ತಮ್ಮ ವೃತ್ತಿಗಳನ್ನು ಮುಂದುವರೆಸಲಾಗಲಿಲ್ಲ. ಆದರೆ ಅವರು ದೊಡ್ಡ ಕೈಗಾರಿಕೆಗಳಲ್ಲಿ ಉದ್ಯೋಗವನ್ನು ಕಂಡುಕೊಳ್ಳಲು ಅವಕಾಶವಿತ್ತು. ಆದ್ದರಿಂದ ತಮ್ಮ ದೀರ್ಘಕಾಲದ ಕೌಶಲ್ಯದೊಂದಿಗೆ ಕಾರ್ಮಿಕರಾಗಿ ಕೆಲಸ ಮಾಡಲು ಅವರು ಆಧುನಿಕ ಕೈಗಾರಿಕೆಗಳಿಗೆ ಪ್ರವೇಶಿಸಿದಾಗ, ತ್ವರಿತವಾಗಿ ಅವರು ಬಂಡವಾಳಶಾಹಿ ವ್ಯವಸ್ಥೆಯ ಪ್ರಗತಿಯೊಂದಿಗೆ ನಗರವಾಸಿಗಳ ಗುಣಲಕ್ಷಣಗಳನ್ನು ಸಂಪೂರ್ಣವಾಗಿ ಹೊಂದಿರುವ ಆಧುನಿಕ ಕಾರ್ಮಿಕ ವರ್ಗವಾಗಿ ಸಂಘಟಿತರಾದರು.

ಭಾರತದ ಕಾರ್ಮಿಕರ ಪರಿಸ್ಥಿತಿ ಇದಕ್ಕೆ ತೀರಾ ವಿರುದ್ಧವಾಗಿತ್ತು. ಭಾರತದಲ್ಲಿ ಸಾಂಪ್ರದಾಯಿಕ ಕರಕುಶಲ ವಸ್ತುಗಳು ಮತ್ತು ಗೃಹಕೈಗಾರಿಕೆಯನ್ನು ವಸಾಹತುಶಾಹಿ ಹಿತದೃಷ್ಟಿಯಿಂದ ನಾಶಮಾಡಲಾಯಿತು. ಆದರೆ ಯುರೋಪಿನಂತಲ್ಲದೆ, ಆಧುನಿಕ ಕೈಗಾರಿಕೆಯು ಅದರ ಸ್ಥಾನದಲ್ಲಿ ಬೆಳೆಯಲಿಲ್ಲ, ಹೊರಹಾಕಲ್ಪಟ್ಟ ಕೈಕಸಬುದಾರರು ಮತ್ತು ಕುಶಲಕರ್ಮಿಗಳು ಹಳ್ಳಿಯ ಆರ್ಥಿಕತೆಯ ಮೇಲೆ ಅವಲಂಬಿತರಾಗಲು ಮತ್ತು ಭೂಹೀನ ರೈತರು ಮತ್ತು ಕೃಷಿ ಕಾರ್ಮಿಕರಾಗಿ ತಮ್ಮ ಜೀವನೋಪಾಯವನ್ನು ಗಳಿಸಬೇಕಾಗಿ ಬಂತು. ತರುವಾಯ ರೈಲ್ವೆಗಳ ಪರಿಚಯ ಮತ್ತು ಕೆಲವು ಕೈಗಾರಿಕೆಗಳ ವಿರಳ ಬೆಳವಣಿಗೆಯೊಂದಿಗೆ, ಭಾರತದ ಸಮಾಜದ ಅಪಾರ ಯಾತನೆ ಮತ್ತು ಗ್ರಾಮೀಣ ಜೀವನದಲ್ಲಿ ಬಡತನದ ಮೂಲಕ ಸಾಗುತ್ತಿದ್ದ, ಅತ್ಯಂತ ಕೆಳಮಟ್ಟದ ಜನರ ಒಂದು ವಿಭಾಗದ ಜನ ಈ ಆಧುನಕ ಕೈಗಾರಿಕೆಗಳನ್ನು ಕಾರ್ಮಿಕರಾಗಿ ಪ್ರವೇಶಿಸಿದರು. ಆದರೆ ಇದು ಎರಡು ಅಥವಾ ಮೂರು ತಲೆಮಾರುಗಳ ಅಂತರದಲ್ಲಿ ನಡೆದುದರಿಂದ, ಅವರು ಅದಾಗಲೆ ತಮ್ಮ ದೀರ್ಘಕಾಲದ ತಾಂತ್ರಿಕ ಕೌಶಲ್ಯವನ್ನು ಕಳೆದುಕೊಂಡಿದ್ದರು, ಕೃಷಿ ಜೀವನದೊಂದಿಗೆ ತಮ್ಮ ಸುದೀರ್ಘ ಮತ್ತು ನಿಕಟ ಒಡನಾಟದ ನಂತರ, ತಮ್ಮ ಪರಂಪರೆಯ ಹೊರೆ ಮತ್ತು ಕೃಷಿ ಜೀವನದ ವಿವಿಧ ಮೂಢ ನಂಬಿಕೆಯ ಆಚರಣೆಗಳೊಂದಿಗೆ ಮತ್ತು ರೀತಿ–ರಿವಾಜುಗಳೊಂದಿಗೆ ಆಧುನಕ ಕೈಗಾರಿಕೆಗಳಿಗೆ ಆಧುನಿಕ ಕಾರ್ಮಿಕರಾಗಿ ಪ್ರವೇಶಿಸಿದರು. ಮಧ್ಯಕಾಲೀನ ವಿಚಾರಗಳ ಹಾನಿಕಾರಕ ಪ್ರಭಾವದಿಂದ ಹೊರಬರಲು ಅವರಿಗೆ ಯಾವುದೇ ಅವಕಾಶವಿರಲಿಲ್ಲ. ಆದ್ದರಿಂದ ಅಂಧಶ್ರದ್ಧೆಯ ವಿಚಾರಗಳು ಮತ್ತು ಹಿಂದುಳಿದ ಪ್ರವೃತ್ತಿಗಳೊಂದಿಗೆ ಇನ್ನೂ ಆಳವಾಗಿ ಪ್ರಭಾವಿತವಾಗಿ ಉಳಿದಿದ್ದ ಒಂದು ಕಾರ್ಮಿಕ ವರ್ಗ ಜನಿಸಿತು. ಇದು ಭಾರತದ ಕಾರ್ಮಿಕ ವರ್ಗದ ಸಂಘಟನೆ ಮತ್ತು ಚಳುವಳಿಯ ಮೇಲೆ ತೀವ್ರ ಹಾನಿಕಾರಕ ಮತ್ತು ದೂರಗಾಮಿ ಪರಿಣಾಮವನ್ನು ಬೀರಿತು.

ಭಾರತದ ಕಾರ್ಮಿಕ ವರ್ಗದ ಜನನದೊಂದಿಗಿನ ಈ ವಿಶಿಷ್ಟತೆಗಳು ಅವರ ಆಧುನಿಕ ದೃಷ್ಟಿಕೋನ ಮತ್ತು ರಾಜಕೀಯ ಪ್ರಜ್ಞೆಯ ಬೆಳವಣಿಗೆಗೆ ಸಹಜ ಅಡ್ಡಿಯಾಗಿ ಕೆಲಸ ಮಾಡಿದವು. ವಾಸ್ತವವಾಗಿ, ಈ ವಿಶಿಷ್ಟತೆಗಳು ಭಾರತದ ಕಾರ್ಮಿಕರನ್ನು ಮಾತ್ರ ಬಾಧಿಸಿದ್ದಲ್ಲ, ಇವು ವಸಾಹತುಗಳು ಮತ್ತು ಅರೆ ವಸಾಹತುಗಳ ಕಾರ್ಮಿಕ ವರ್ಗದ ಸಾಮಾನ್ಯ ಗುಣಲಕ್ಷಣಗಳಾಗಿವೆ. ಈ ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡು, ಭಾರತದ ಕಾರ್ಮಿಕ ಚಳವಳಿಯ ಆರಂಭಿಕ ಹಂತದಲ್ಲಿ ಭಾರತದ ಬೂರ್ಜ್ವಾ ವರ್ಗದ ಮಂದಿಗೆ ಭಾರತದ ಸಂಪ್ರದಾಯದ ಹೆಸರಿನಲ್ಲಿ ಸುಧಾರಣಾವಾದೀ ನಿಲುವಿನತ್ತ, ಕ್ರಾಂತಿಕಾರಿ ಹೋರಾಟದಿಂದ ದೂರವಿರಿಸಲು ಅವಕಾಶವಾಯಿತು.

ಭಾರತದ ಕಾರ್ಮಿಕ ವರ್ಗಕ್ಕೆ ಒಂದು ಹೊಸ ವರ್ಗವಾಗಿ ಎದುರಾದ ಸಮಸ್ಯೆಗಳು ಕ್ರೂರ ವಸಾಹತುಶಾಹಿ ಶೋಷಣೆಗೆ ಸಂಬಂಧಿಸಿದ ಮೂಲ ಪ್ರಕ್ರಿಯೆಯಿಂದ ಹುಟ್ಟಿಕೊಂಡವು. ಊಳಿಗಮಾನ ಪದ್ಧತಿಯ ದೀರ್ಘಕಾಲದ ಮತ್ತು ಹಿಂಸಾತ್ಮಕ ವಿಘಟನೆ ಮತ್ತು 'ಬಂಡವಾಳಶಾಹಿಯ ಕುಂಠಿತ ಬೆಳವಣಿಗೆ, ಹಳೆಯ ಪ್ರಕಾರದ ಉತ್ಪಾದನೆಯ ಕುಸಿತ ಮತ್ತು ಹೊಸದರ ಏರಿಕೆಯ ನಡುವಿನ ವ್ಯಾಪಕ ಅಂತರವು ಹಲವಾರು ಸಮಸ್ಯೆಗಳಿಗೆ ಜನ್ಮ ನೀಡಿತು. ಒಂದು ಸಮಸ್ಯೆಯೆಂದರೆ, ದುಡಿಯುವ ಜನಸಮೂಹದ ತೀರಾ ಕಳಪೆ ಜೀವನಮಟ್ಟ ಬ್ರಿಟಿಷರು ನಶಿಸುತ್ತಿದ್ದ ಕುಶಲಕರ್ಮಿಗಳು ಮತ್ತು ಹಳ್ಳಿಗಳಲ್ಲಿನ ಬಡ ವರ್ಗದ ಕಾರ್ಮಿಕರನ್ನು ನೇಮಿಸಿಕೊಂಡಾಗ, ಅವರು ಈ ಗ್ರಾಮೀಣ ಮಾನದಂಡಗಳಿಗೆ ಅನುಗುಣವಾಗಿ ವೇತನವನ್ನು ನಿಗದಿಪಡಿಸಿದರು, ಅದು ಕಾರ್ಮಿಕ ವೆಚ್ಚಕ್ಕಿಂತ ಕಡಿಮೆಯಿತ್ತು.

ಜನಸಮೂಹದ ಅಮಾನವೀಯ ಮಟ್ಟದ ದಾರಿದ್ರ್ಯ ಮತ್ತು ಹಳೆಯ ಆರ್ಥಿಕ ವ್ಯವಸ್ಥೆಯ ನಾಶ ಹಾಗೂ ಅದರ ಸ್ಥಾನದಲ್ಲಿ ವಸಾಹತುಸಾಹಿ ತಂದ ಹೊಸ ವ್ಯವಸ್ಥೆಯ ನಡುವಿನ ಅಗಾಧ ಅಂತರವು ಭಾರತವನ್ನು ಶ್ರಮಶಕ್ತಿಯ ಅಗ್ಗದ ಮೂಲವಾಗಿ ಮಾಡಿತು. ಇದರ ಒಂದು ಪರಿಣಾಮವೆಂದರೆ ವಿವಿಧ ಬ್ರಿಟಿಷ್ ವಸಾಹತುಗಳಲ್ಲಿನ ತೋಟ ಕೈಗಾರಿಕೆಗಳಿಗೆ ಭಾರತದ ಕಾರ್ಮಿಕ ಜನಸಮೂಹದ ದೊಡ್ಡ ಪ್ರಮಾಣದ ವಲಸೆ.

1807ರಲ್ಲಿ ಗುಲಾಮ–ವ್ಯಾಪಾರ ಮತ್ತು 1833 ರಲ್ಲಿ ಗುಲಾಮ ವ್ಯವಸ್ಥೆಯನ್ನು ರದ್ದುಗೊಳಿಸಿದ ನಂತರ, ಬ್ರಿಟಿಷ್ ಗಯಾನಾ, ವೆಸ್ಟ್ ಇಂಡೀಸ್, ಮಾರಿಷಸ್‌ನಂತಹ ವಸಾಹತುಗಳು ಕೆಲಸಗಾರರ ತೀವ್ರ ಕೊರತೆಯನ್ನು ಅನುಭವಿಸಿದವು. ಈ ವಸಾಹತುಗಳ ತೋಟಗಳಲ್ಲಿ ಭಾರತದ ಕಾರ್ಮಿಕರನ್ನು ಕಳಿಸಲು ಪ್ರಯತ್ನಿಸಲಾಯಿತು ಮತ್ತು ದೌರ್ಜನ್ಯಕ್ಕೊಳಗಾದ ಭಾರತದ ಕಾರ್ಮಿಕರ ಗುಂಪುಗಳು ಕ್ರೂರ ವಸಾಹತುಶಾಹಿ ಶೋಷಣೆಗೆ ಬಲಿಪಶು ಆದವು. ಇನ್ನೊಂದೆಡೆಯಲ್ಲಿ ವಸಾಹತುಶಾಹಿ ಶೋಷಣೆಯ ಕೆಟ್ಟ ಸ್ವರೂಪಗಳು ಮತ್ತು ವಿಧಾನಗಳು ತಂದ ಬಂಡವಾಳಶಾಹಿಯ ಅತ್ಯಂತ ತಪ್ಪಾದ ಬೆಳವಣಿಗೆ ಆಂತರಿಕ ವಲಸೆಗೆ ಕಾರಣವಾಯಿತು. ಹೊಸ ಬಂಡವಾಳಶಾಹಿ ಕೈಗಾರಿಕೆಗಳು ಸ್ಥಾಪನೆಗೊಂಡ ಅಥವಾ ಗಣಿಗಾರಿಕೆ ಮತ್ತು ತೋಟಗಳು ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ ಉದ್ಯೋಗಗಳ ಹುಡುಕಾಟದಲ್ಲಿ ಬಡ ಜನಸಮೂಹದ ದೊಡ್ಡ ಗುಂಪುಗಳು ತಮ್ಮ ಹಳ್ಳಿಗಳಿಂದ ದೂರದ ಸ್ಥಳಗಳಿಗೆ ಸ್ಥಳಾಂತರಗೊಂಡವು. ಅವರು ಅಲ್ಲಿ ಶಾಶ್ವತವಾಗಿ ನೆಲೆಸಿದರು. ಭಾಷೆ, ಸಂಸ್ಕೃತಿ, ಧಾರ್ಮಿಕ ನಂಬಿಕೆ ಮತ್ತು ಸಾಮಾಜಿಕ ಪದ್ಧತಿಯ ಅಪಾರ ವೈವಿಧ್ಯತೆಯನ್ನು ಹೊಂದಿರುವ ಭಾರತದಂತಹ ವಿಶಾಲವಾದ ದೇಶದಲ್ಲಿ, ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಈ ಸಾಮೂಹಿಕ ವಲಸೆ ಮತ್ತು ಒಟ್ಟಾರೆಯಾಗಿ ವಿಭಿನ್ನ ಪರಿಸರದಲ್ಲಿ ಶಾಶ್ವತ ನೆಲೆಗೊಂಡಿದ್ದು.. ಭಾರತದ ಕಾರ್ಮಿಕ ವರ್ಗ ಮತ್ತು ಅದರ ಚಳುವಳಿಯ ಸಂರಚನೆಯಲ್ಲಿ ಕೆಲವು ನಿರ್ದಿಷ್ಟ ಸಮಸ್ಯೆಗಳಿಗೆ ಕಾರಣವಾಯಿತು..

ಭಾರತದಲ್ಲಿ ತೋಟ ಕಾರ್ಮಿಕರನ್ನು ನೇಮಕ ಮಾಡುವ ವಿಧಾನ ಮತ್ತು ಅವರ ಸೇವೆಯ ಸ್ಥಿತಿ ವಸಾಹತುಶಾಹಿ ಆಳ್ವಿಕೆಯ ಮತ್ತೊಂದು ಕ್ರೂರ ಅಂಶವನ್ನು ಚಿತ್ರಿಸುತ್ತದೆ. ಈ ಎಲ್ಲಾ ಅಸಹಜತೆಗಳು ಒಂದು ನಿರ್ದಿಷ್ಟ ಮತ್ತು ಸ್ವತಂತ್ರ ವರ್ಗವಾಗಿ ಬಂಡವಾಳಶಾಹಿಯ ಬೆಳವಣಿಗೆಯೊಂದಿಗೆ ಸರಿಸಮನಾದ ವೇಗದೊಂದಿಗೆ ಭಾರತದ ಕಾರ್ಮಿಕ ವರ್ಗದ ಬೆಳವಣಿಗೆಯ ಹಾದಿಯಲ್ಲಿ ಗಂಭೀರ ಸಮಸ್ಯೆಗಳಾಗಿ ಎದ್ದು ನಿಂತವು.

ಕೈಗಾರಿಕೆಗಳ ಆರಂಭಿಕ ಬೆಳವಣಿಗೆಯ ಅವಧಿಯಿಂದ ಪ್ರಾರಂಭವಾದ ಕಾರ್ಮಿಕರ ಕೊರತೆಯು ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ತೀವ್ರವಾಯಿತು ಮತ್ತು ಮೊದಲ ಮಹಾಯುದ್ಧ ಪ್ರಾರಂಭವಾಗುವವರೆಗೂ ಮುಂದುವರೆಯಿತು. ಇದಕ್ಕೆ ಕಾರಣ ಸಂಘಟಿತ ಕಾರ್ಮಿಕ ಮಾರುಕಟ್ಟೆಯ ಅಭಾವ.

ಒಂದೆಡೆ ಕಾರ್ಮಿಕರ ಬೇಡಿಕೆ ಹೆಚ್ಚಾಗುತ್ತಿದ್ದರೂ ಮತ್ತು ಇನ್ನೊಂದೆಡೆ ಗ್ರಾಮೀಣ ಜನತೆಯ ಬಡತನದ ಪರಿಸ್ಥಿತಿ ಕಾರ್ಮಿಕರ ದೊಡ್ಡ ಸಂಭಾವ್ಯ ಮೂಲಗಳನ್ನು ಒದಗಿಸುತ್ತಿದ್ದರೂ, ಕಾರ್ಖಾನೆಗಳಲ್ಲಿನ ಭಯಾನಕ ಕೆಲಸದ ಪರಿಸ್ಥಿತಿಗಳು, ವಸತಿ ಸೌಕರ್ಯಗಳ ತೀವ್ರ ಅಭಾವ ಮತ್ತು ಇತರ ತೊಂದರೆಗಳಿಂದಾಗಿ ಬಡ ಜನರು ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಮುಂದೆ ಬರದಂತೆ ಮಾಡಿದ್ದವು, ಅವರು ಜೀವನೋಪಾಯದ ಇತರ ಮೂಲಗಳನ್ನು ಹುಡುಕಿ ಹೋಗುತ್ತಿದ್ದರು. ಸಾಮಾನ್ಯವಾಗಿ ನಿರೀಕ್ಷಿಸುವಂತೆ, ಜೀವನೋಪಾಯದ ಹುಡುಕಾಟದಲ್ಲಿದ್ದ ಬಡ ಜನಸಮೂಹ ವಲಸೆ ಕೆಲಸದ ಅವಕಾಶಗಳು ಬಹಳವಿದ್ದ ಕೈಗಾರಿಕಾ ಕೇಂದ್ರಗಳ ಕಡೆಗೇ ನಿರ್ದೇಶಿತವಾಗಲಿಲ್ಲ.

ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಕಂಡುಬರದಿದ್ದ ಶ್ರಮಜೀವಿಗಳ ಶೋಷಣೆ ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಉಲ್ಬಣಗೊಳಿಸಿದ ವಿಭಿನ್ನವಾದ ವಿಧಾನಗಳು ಇಲ್ಲಿ ಕಾಣ ಬಂದವು. ಸಾಮಾನ್ಯವಾಗಿ ಕಾರ್ಮಿಕರು ಮತ್ತು ಮಾಲಿಕರ ನಡುವೆ ಮಧ್ಯವರ್ತಿಗಳು ಇದ್ದರು, ಅವರು ನೇಮಕಾತಿಯನ್ನು ಮಾಡುತ್ತಿದ್ದರು ಮತ್ತು ಸ್ವಲ್ಪ ಮಟ್ಟಿಗೆ ಕಾರ್ಮಿಕರಿಗೆ ಸಂಬಳ ನೀಡುತ್ತಿದ್ದರು. ದೇಶದ ಭಾಷೆ ಮತ್ತು ಉಪಭಾಷೆಗಳ ವೈವಿಧ್ಯತೆಗೆ ಅನುಗುಣವಾಗಿ ಅವರನ್ನು ಜಾಬರ್, ಸರ್ದಾರ್, ಮಿಸ್ತ್ರಿ, ಮುಕದ್ದಮ್, ಚೌಧರಿ, ಇತ್ಯಾದಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು. ಕಾರ್ಮಿಕ ಮಾರುಕಟ್ಟೆ ಬೆಳೆಯದಿರುವುದು ಮತ್ತು ಅರ್ಥವ್ಯವಸ್ಥೆಯ ಅಸ್ತವ್ಯಸ್ತ ಸ್ಥಿತಿ ಅಂತಹ ಮಧ್ಯವರ್ತಿಗಳ ಅಸ್ತಿತ್ವಕ್ಕೆ ಹೆಚ್ಚಾಗಿ ಕಾರಣವಾಗಿತ್ತು.

ಇದಲ್ಲದೆ, ರಾಷ್ಟ್ರೀಯ, ಧಾರ್ಮಿಕ ಮತ್ತು ಜಾತಿ ವೈವಿಧ್ಯತೆಗಳು ಹೊಸದಾಗಿ ಬೆಳೆದಿದ್ದ ಕಾರ್ಮಿಕ ವರ್ಗದಲ್ಲೂ ಭಿನ್ನತೆಗಳನ್ನು ಉಂಟು ಮಾಡಿತ್ತು. ಇದರ ಜೊತೆಗೆ ದೇಶದಲ್ಲಿ ಬಂಡವಾಳಶಾಹಿಯ ಅಸಮ ಅಭಿವೃದ್ಧಿಯಿಂದಾಗಿ ದೇಶಾದ್ಯಂತ ಕಾರ್ಮಿಕರ ವಿತರಣೆಯೂ ವೈವಿಧ್ಯಮಯವಾಗಿತ್ತು. ಕಲ್ಕತ್ತಾ, ಬಾಂಬೆ, ಅಹಮದಾಬಾದ್, ಕಾನ್ಪುರ್, ಮದ್ರಾಸ್ ಮತ್ತು ಇತರ ಕೆಲವು ಪ್ರಮುಖ ಕೇಂದ್ರಗಳ ಸುತ್ತಮುತ್ತ ಭಾರತದ ಶ್ರಮಜೀವಿಗಳು ಕೇಂದ್ರೀಕೃತವಾಗಿದ್ದರು. ದೇಶದ ಉಳಿದ ವಿಸ್ತಾರವಾದ ಭಾಗ ಆಧುನಿಕ ಕೈಗಾರಿಕೆಗಳ ವ್ಯಾಪ್ತಿಯ ಹೊರಗಿತ್ತು.

ಈ ಎಲ್ಲಾ ಅಂಶಗಳು ಏಕರೂಪದ ವರ್ಗವಾಗಿ ಭಾರತದ ಕಾರ್ಮಿಕ ವರ್ಗ ತನ್ನನ್ನು ಬಲಪಡಿಸಿಕೊಳ್ಳುವ ಹಾದಿಯಲ್ಲಿ ಸಮಸ್ಯೆಗಳನ್ನು ಸೃಷ್ಟಿಸಿದವು. ಈ ಸಮಸ್ಯೆಗಳು ಅದರ ವರ್ಗ ಪ್ರಜ್ಞೆಯ ಬೆಳವಣಿಗೆ ಮತ್ತು ಎಲ್ಲಾ ಮಧ್ಯಕಾಲೀನ ಪಳೆಯುಳಿಕೆಗಳಿಂದ ಮುಕ್ತವಾದ ಅತ್ಯಂತ ಆಧುನಿಕ ಮತ್ತು ಕ್ರಾಂತಿಕಾರಿ ವರ್ಗವಾಗಿ ಅದು ಹೊರಹೊಮ್ಮುವ ಪ್ರಕ್ರಿಯೆಯ ಮೇಲೆ ಗಮನಾರ್ಹ ಪರಿಣಾಮ ಬೀರಿದವು.

1807ರಲ್ಲಿ ಗುಲಾಮ–ವ್ಯಾಪಾರ ಮತ್ತು 1833 ರಲ್ಲಿ ಗುಲಾಮ ವ್ಯವಸ್ಥೆಯನ್ನು ರದ್ದುಗೊಳಿಸಿದ ನಂತರ, ಬ್ರಿಟಿಷ್ ಗಯಾನಾ, ವೆಸ್ಟ್ ಇಂಡೀಸ್, ಮಾರಿಷಸ್‌ನಂತಹ ವಸಾಹತುಗಳು ಕೆಲಸಗಾರರ ತೀವ್ರ ಕೊರತೆಯನ್ನು ಅನುಭವಿಸಿದವು. ಈ ವಸಾಹತುಗಳ ತೋಟಗಳಲ್ಲಿ ಭಾರತದ ಕಾರ್ಮಿಕರನ್ನು ಕಳಿಸಲು ಪ್ರಯತ್ನಿಸಲಾಯಿತು ಮತ್ತು ದೌರ್ಜನ್ಯಕ್ಕೊಳಗಾದ ಭಾರತದ ಕಾರ್ಮಿಕರ ಗುಂಪುಗಳು ಕ್ರೂರ ವಸಾಹತುಶಾಹಿ ಶೋಷಣೆಗೆ ಬಲಿಪಶು ಆದವು.
–ಟ್ರಿನಿಡಾಡ್‌ಗೆ ಕಳಿಸಲ್ಪಟ್ಟ ಭಾರತದ ಬಡಜನರ ಒಂದು ತಂಡ.



ಆರ್ಥಿಕ ಚೇತರಿಕೆಯ ಹುಸಿ ನಿರೀಕ್ಷೆ–10ಶೇ.ಕ್ಕಿಂತಲೂ ಹೆಚ್ಚು ಜಿಡಿಪಿ ಕುಸಿತ ಸಂಭವ

ನ್ಯೂಇಂಡಿಯಾ ನ್ಯೂಸ್

2020–21ರ ಹಣಕಾಸು ವರ್ಷದ 2ನೇ ತ್ರೈಮಾಸಿಕದ ಅಂಕಿ–ಅಂಶಗಳನ್ನು ಸಿ.ಎಸ್.ಒ.(ಕೇಂದ್ರೀಯ ಸಾಂಖ್ಯಿಕ ಸಂಘಟನೆ) ಈಗ ಪ್ರಕಟಿಸಿದೆ. ಮೊದಲ ತ್ರೈಮಾಸಿಕದ ಅಂಕಿ–ಅಂಶಗಳು 24ಶೇ.ದಷ್ಟು ಭಾರೀ ಇಳಿಕೆಯನ್ನು ತೋರಿಸಿದ ಮೇಲೆ ಖಿನ್ನರಾಗಲೇ ಬೇಕಾಗಿ ಬಂದ ಸರಕಾರ ಮತ್ತು ಮಾಧ್ಯಮಗಳ ಕೆಲ ವಿಭಾಗಗಳು ದೇಶದ ಅರ್ಥವ್ಯವಸ್ಥೆಯ ಕಷ್ಟಕಾಲ ಕಳೆಯುತ್ತಿದೆ ಎಂಬುದರ ಬಗ್ಗೆ "ಸಕಾರಾತ್ಮಕ ಕಂಪನ"ಗಳನ್ನು ಈ ಎರಡನೇ ತ್ರೈಮಾಸಿಕದ ಅಂಕಿ–ಅಂಶಗಳು ಸೂಸಿವೆ ಎಂದು ಹೇಳುತ್ತಿದ್ದಾರೆ. ಜಿಡಿಪಿ ನಷ್ಟ ಗಮನಾರ್ಹವಾಗಿ ಇಳಿದಿದೆ, ತಯಾರಿಕೆ ಮತ್ತು ನಿರ್ಮಾಣ ವಲಯಗಳ ನಷ್ಟ 91ಶೇ.ದಷ್ಟು ಇಳಿದಿದೆ, ಸೇವಾ ವಲಯ ತನ್ನ ನಷ್ಟವನ್ನು 43ಶೇ.ದಷ್ಟು ಇಳಿಸಿಕೊಂಡಿದೆ, ವ್ಯಾಪಾರ ಉಪವಿಭಾಗದಲ್ಲಿ ನಷ್ಟ 80ಶೇ.ದಷ್ಟು ದೊಡ್ಡ ಪ್ರಮಾಣದಲ್ಲಿ ಕಡಿಮೆಯಾಗಿದೆ. ತಯಾರಿಕಾ ವಲಯದ ನೇತೃತ್ವದಲ್ಲಿ ಚೇತರಿಕೆ ಆರಂಭವಾಗಿದೆ, ಪರಿಸ್ಥಿತಿ ಕೆಲವರು ನಿರೀಕ್ಷಿಸಿದಷ್ಟು ಮಂಕಾಗಿಲ್ಲ ಎಂದು ಸಂತಸ ವ್ಯಕ್ತಪಡಿಸುತ್ತಿದ್ದಾರೆ, ಜಗತ್ತಿನ 49 ದೇಶಗಳಲ್ಲಿ ಈ ತ್ರೈಮಾಸಿಕದಲ್ಲಿ ಜಿಡಿಪಿ ಇಳಿಕೆ ಸರಾಸರಿ 12.4ಶೇ. ಇದ್ದರೆ ಭಾರತದಲ್ಲಿ ಇದು 7.5ಶೇ. ಮಾತ್ರ ಎಂಬ ಸಂಗತಿಯತ್ತ ಅವರು ಬೊಟ್ಟುಮಾಡುತ್ತಾರೆ.

ಆದರೆ ಇಂತಹ ಆಶಾವಾದಕ್ಕೆ ಕಾರಣಗಳಿಲ್ಲ ಎನ್ನುತ್ತಾರೆ ಬಹಳಷ್ಟು ಅರ್ಥಶಾಸ್ತ್ರಜ್ಞರು. ಮೊದಲನೆಯದಾಗಿ, ಈ 49 ದೇಶಗಳಲ್ಲಿ ಮೊದಲ ತ್ರೈಮಾಸಿಕದ ಜಿಡಿಪಿ ಇಳಿಕೆ ಸರಾಸರಿ 5.6ಶೇ. ಇದ್ದಾಗ ಭಾರತದ ಜಿಡಿಪಿ ಇಳಿಕೆ 24ಶೇ. ದಷ್ಟಿತ್ತು ಎಂಬುದನ್ನು ಮರೆಯುವಂತಿಲ್ಲ. ಎರಡನೆಯದಾಗಿ, ತ್ರೈಮಾಸಿಕದ ಅಂಕಿ–ಅಂಶಗಳು ಅನೌಪಚಾರಿಕ ವಲಯದ ದತ್ತಾಂಶವನ್ನು ಹೆಚ್ಚಾಗಿಯೇ ಅಂದಾಜು ಮಾಡುತ್ತವೆ, ಮೂರನೆಯದಾಗಿ, ತಯಾರಿಕಾ ವಲಯದಲ್ಲಿ ತುಸು ಹೆಚ್ಚಳವಾಗಿದ್ದರೆ ಅದಕ್ಕೆ ಹಬ್ಬಗಳ ಸೀಝನ್ ಕಾರಣ. ಇದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯನ್ನು ಹೆಚ್ಚಿಸುವ ಇತರ ಕ್ರಮಗಳನ್ನು ಸರಕಾರ ಕೈಗೊಳ್ಳದಿದ್ದರೆ ಹೀಗೆಯೇ ಮುಂದುವರೆಯುವುದಿಲ್ಲ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.

ಅಲ್ಲದೆ ಮೊದಲ ಎರಡು ತ್ರೈಮಾಸಿಕಗಳನ್ನು ಸೇರಿಸಿದ ಮೊದಲ ಅರ್ಧವಾರ್ಷಿಕದ ಅಂಕಿ–ಅಂಶಗಳು ಅರ್ಥವ್ಯವಸ್ಥೆ ಹಿಂದಿನ ವರ್ಷಕ್ಕೆ ಹೋಲಿಸಿದರೆ 15ಶೇ.ದಷ್ಟು ಕುಸಿದಿರುವುದನ್ನು ತೋರಿಸುತ್ತವೆ. ತಯಾರಿಕಾ ವಲಯದಲ್ಲಿಯೂ 19ಶೇ. ಇಳಿಕೆಯಾಗಿದೆ, ನಿರ್ಮಾಣ ವಲಯದಲ್ಲಿ 30ಶೇ. ಇಳಿಕೆಯಾಗಿದೆ, ವ್ಯಾಪಾರ, ಹೊಟೆಲ್, ಸಾರಿಗೆ, ಸಂವಹನ ವಲಯಗಳಲ್ಲಿ 32ಶೇ. ಇಳಿಕೆಯಾಗಿದೆ. ಕೃಷಿ ವಲಯದಲ್ಲಿ ಮಾತ್ರ ಬೆಳವಣಿಗೆ ದರ ತುಸು ಹೆಚ್ಚಾಗಿದೆ, 3.2ಶೇ.ದಿಂದ 3.4ಶೇ. ಆಗಿದೆ.

ಭಾರತ ಸರಕಾರದ ನಿವೃತ್ತ ಮುಖ್ಯ ಸಂಖ್ಯಾಶಾಸ್ತ್ರಜ್ಞ ಮತ್ತು ಅರ್ಥಶಾಸ್ತ್ರಜ್ಞ ಪ್ರೊಣಬ್ ಸೆನ್. ತಯಾರಿಕಾ ವಲಯ 2ನೇ ತ್ರೈಮಾಸಿಕದಲ್ಲಿ 0.6ಶೇ.ದಷ್ಟು ಬೆಳೆದಿದೆ ಎಂಬುದನ್ನು ಗಂಭೀರವಾಗಿ ಪ್ರಶ್ನಿಸಿದ್ದಾರೆ. ಪೂರ್ಣ ತಥ್ಯಗಳು ಹೊರಬಂದಾಗ ಬಹುಶಃ ಈ ವಲಯ ಬೆಳೆದಿಲ್ಲ, ಸಂಕುಚನಗೊಂಡಿದೆ ಎಂದು ಕಂಡು ಬರಬಹುದು, ಮೂರನೇ ತ್ರೈಮಾಸಿಕದಲ್ಲಿ ಅದು ನಕಾರಾತ್ಮಕ ಬೆಳವಣಿಗೆ ತೋರಿಸಬಹುದು ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿದ್ದಾರೆ (ದಿ ವೈರ್, ಡಿ.1) .

ಮೂರನೇ ತ್ರೈಮಾಸಿಕದಲ್ಲಿ ಜಿಡಿಪಿ ಕುಸಿತ 2ನೇ ತ್ರೈಮಾಸಿಕಕ್ಕಿಂತ ಹೆಚ್ಚೇ ಇರಬಹುದು, ನಾಲ್ಕನೇ ತ್ರೈಮಾಸಿಕದಲ್ಲಿ ಕೂಡ ನಕಾರಾತ್ಮಕವಾಗಿರಬಹುದು ಎನ್ನುವ ಅವರು ಇಡೀ ವರ್ಷಕ್ಕೆ ಜಿಡಿಪಿ ಕುಸಿತ 10ಶೇ.ಕ್ಕಿಂತ ಹೆಚ್ಚಿರುತ್ತದೆ ಎಂದಿದ್ದಾ.ರೆ

ಇನ್ನೂ ಹೆಚ್ಚು ಆತಂಕಕಾರಿಯೆಂದರೆ ಮುಂದಿನ 4–5 ವರ್ಷಗಳ ಕಾಲ ಜಿಡಿಪಿ ಬೆಳವಣಿಗೆ ದರ 5ಶೇ.ದ ಸುತ್ತಮುತ್ತಲೇ ಗಿರಕಿ ಹೊಡೆಯುತ್ತದೆ ಭಾರತ ಹಣಕಾಸು ಬಿಕ್ಕಟ್ಟು ಎದುರಿಸುತ್ತಿದೆ. ಆದರೆ ಸರಕಾರ ಇದನ್ನು ಸರಿಯಾಗಿ ಗುರುತಿಸುತ್ತಿಲ್ಲ, ಸ್ಪಂದನೆಯಂತೂ ಇಲ್ಲವೇ ಇಲ್ಲ ಎಂದು ಆತಂಕ ವ್ಯಕ್ತಪಡಿಸುವ ಪ್ರೊಣಬ್ ಸೆನ್ ಭಾರತ ಮುಂದಿನ ವರ್ಷ ಒಂದು ಹೂಡಿಕೆ ಬಿಕ್ಕಟ್ಟನ್ನು ಕೂಡ ಎದುರಿಸ ಬೇಕಾಗಿ ಬರಬಹುದು ಎಂದೂ ಎಚ್ಚರಿಸಿದ್ದಾರೆ.



ಜಿಡಿಪಿ(–)7.5%–ಉದ್ಯೋಗ– ಅರ್ಥವ್ಯವಸ್ಥೆ ಮತ್ತು ನವಿಲಾಟ
ವ್ಯಂಗ್ಯಚಿತ್ರ: ಮೈಕ ಅಜೀಜ್

ದೊಡ್ಡ ಕಾರ್ಪೊರೇಟ್ ಸುಸ್ತಿದಾರರಿಂದ ಕೇವಲ 7% ಬಾಕಿ ವಸೂಲಿ 8 ವರ್ಷಗಳಲ್ಲಿ 2.6 ಲಕ್ಷ ಕೋಟಿ ರೂ. ಬಾಕಿ ಮನ್ನಾ?

ಬ್ಯಾಂಕುಗಳು ಮಾಡುವ ಸುಸ್ತಿಸಾಲಗಳು, ಅಂದರೆ ವಸೂಲಾಗದ ಸಾಲಗಳ ರೈಟ್–ಆಫ್ ಎಂದರೆ ಸಾಲ ಮನ್ನಾ ಅಲ್ಲ, ಅವನ್ನು ಲೆಕ್ಕಪತ್ರಗಳಿಂದ ಹೊರಗಿಡಲಾಗಿದೆಯಷ್ಟೇ, ಅವುಗಳ ವಸೂಲಿ ಪ್ರಯತ್ನ ಮುಂದುವರೆಯುತ್ತದೆ ಎಂದು ಸರಕಾರ ಮತ್ತು ಅವರ ಸಮರ್ಥಕರು ಹೇಳುತ್ತಿರುತ್ತಾರೆ. ಇದು ನಿಜವೇ ಎಂದು ಹುಡುಕಾಟ ನಡೆಸಿರುವ ಪುಣೆಯ ಮಾಹಿತಿ ಹಕ್ಕು ಕಾರ್ಯಕರ್ತ ವಿವೇಕ್ ವೇಳಂಕರ್ 12 ರಾಷ್ಟ್ರೀಕೃತ ಬ್ಯಾಂಕುಗಳ ಸುಸ್ತಿಸಾಲಗಳ ಬಗ್ಗೆ ವಿವಿಧ ಮೂಲಗಳಿಂದ ಕಲೆ ಹಾಕಿರುವ ಅಂಕಿ–ಅಂಶಗಳು ಹೀಗಿವೆ:

ಕಳೆದ 8 ವರ್ಷಗಳಲ್ಲಿ ರೈಟ್–ಆಫ್ ಮಾಡಿದ ಮೊತ್ತ
ರೂ. 6,32,3777 ಕೋಟಿ

ಕಳೆದ 4 ವರ್ಷಗಳಲ್ಲಿ ರೈಟ್–ಆಫ್ ಮಾಡಿದ ಮೊತ್ತ
ರೂ. 4,95,190 ಕೋಟಿ

ಕಳೆದ 8ವರ್ಷಗಳಲ್ಲಿ ವಸೂಲಾದ ಬಾಕಿಗಳ ಮೊತ್ತ
ರೂ. 1,08, 544 ಕೋಟಿ, ಅಂದರೆ 17%.

ಕಳೆದ 4 ವರ್ಷಗಳಲ್ಲಿ ವಸೂಲಾದ ಬಾಕಿಗಳ ಮೊತ್ತ
ರೂ. 79,150 ಕೋಟಿ, ಅಂದರೆ 16%.

ಕಳೆದ 8 ವರ್ಷಗಳಲ್ಲಿ ದೊಡ್ಡ ಸುಸ್ತಿದಾರರ ಬಾಕಿ ಮೊತ್ತ
ರೂ. 2,78,517 ಕೋಟಿ

ವಸೂಲಾದ ಮೊತ್ತ **ರೂ. 19,207 ಕೋಟಿ, ಅಂದರೆ 7%**

ದೊಡ್ಡ ಸುಸ್ತಿದಾರರು ಅಂದರೆ 100ಕೋಟಿ ರೂ.ಗಿಂತ ಹೆಚ್ಚಿನ ಸಾಲಗಳನ್ನು ತೀರಿಸದ ದೊಡ್ಡ ಕಂಪನಿಗಳು.


ಅಂದರೆ, ಕಳೆದ 8 ವರ್ಷಗಳಲ್ಲಿ ವಸೂಲಿ ಮಾಡಿರುವುದು 17ಶೇ. ಇದರಲ್ಲಿ ದೊಡ್ಡ ಸುಸ್ತಿದಾರ ಕಂಪನಿಗಳ ಬಾಕಿಯ ವಸೂಲಿ ಕೇವಲ 7%. ಸುಮಾರು 2.6ಲಕ್ಷ ಕೋಟಿ ರೂ.ಗಳಷ್ಟು ಸಾಲಮನ್ನಾ ಎಂದೇ ತಿಳಿಯಬೇಕೇ?

ವೇಳಂಕರ್ ಈ ಮಾ ಹಿತಿಗಳನ್ನು ಆರ್.ಟಿ.ಐ. ಅಡಿಯಲ್ಲಿ ಪಡೆಯಲು ಪ್ರಯತ್ನಿಸಿದರು. ಆದರೆ 2–3 ಬ್ಯಾಂಕುಗಳನ್ನು ಬಿಟ್ಟು ಉಳಿದವು ಇವನ್ನು ಕೊಡಲು ನಿರಾಕರಿಸಿದವು. ಕೆಲವು ತಮ್ಮ ವೆಬ್‌ಸೈಟುಗಳಲ್ಲಿರುವ ವಾರ್ಷಿಕ ವರದಿಗಳಿಂದ ಬೇಕಾದರೆ ಪಡೆಯಿರಿ ಎಂದವು ಎನ್ನುತ್ತಾರೆ ವೇಳಂಕರ್.

ಇದರ ಒಟ್ಟು ಅರ್ಥವೆಂದರೆ, ಮೊದಲನೆಯದಾಗಿ, ಬ್ಯಾಂಕುಗಳು ಸುಸ್ತಿಸಾಲಗಳ ವಸೂಲಿಗಿಂತ ಅವುಗಳನ್ನು ತಮ್ಮ ಲೆಕ್ಕಪತ್ರಗಳಿಂದ ಹೊರಗಿಡುವುದಕ್ಕೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತವೆ, ಎರಡನೆಯದಾಗಿ, ವಸೂಲಿಯಲ್ಲೂ ಸಣ್ಣ ಸಾಲಗಾರರಿಂದ ಬಾಕಿ ವಸೂಲಿಗೇ ಮುತುವರ್ಜಿ ವಹಿಸುತ್ತವೆ, ದೊಡ್ಡ ಸಾಲಗಾರರ ಬಾಕಿ ವಸೂಲಿಗಳ ಬಗ್ಗೆ ಮುತುವರ್ಜಿ ವಹಿಸುವುದಿಲ್ಲ, ಅಥವ ಅವರ ನಡುವೆ ಏನಾದರೂ 'ವ್ಯವಹಾರ' ಇರಬಹುದೇನೋ ಎನ್ನುತ್ತಾರೆ ವೇಳಂಕರ್ (ಮನಿ ಲೈಫ್, ನವಂಬರ್ 30)

ಈ ರೀತಿ ಬ್ಯಾಂಕುಗಳು ವಸೂಲಾಗುವುದಿಲ್ಲ ಎಂದು ನಿರ್ಧರಿಸುವ ಸಾಲಗಳನ್ನು ತಮ್ಮ ಲೆಕ್ಕಪತ್ರಗಳಿಂದ ಹೊರಗಿಡುವ ಪದ್ಧತಿಯನ್ನು ಪರಿಣಿತರು ವಿರೋಧಿಸಿದ್ದಾರೆ.ಆದರೆ ಬ್ಯಾಂಕುಗಳು ಅದೇ ದಾರಿಯಲ್ಲಿ ಸಾಗಿವೆ. ಇದರ ಪ್ರಮುಖ ಫಲಾನುಭವಿಗಳೆಂದರೆ ಅತಿ ದೊಡ್ಡ ಕಾರ್ಪೊರೇಟ್ ಸುಸ್ತಿದಾರರು. ಎಂದೂ ಅವರು ಹೇಳುತ್ತಾರೆ.

20,000 ಕೋಟಿ ರೂ.ಗಳ ಸೆಂಟ್ರಲ್ ವಿಸ್ತಾ ಯೋಜನೆಯ ಭಾಗವಾದ 861.90 ಕೋಟಿ ರೂ. ವೆಚ್ಚದ ಹೊಸ ಸಂಸತ್ ಭವನದ ಶಂಕುಸ್ಥಾಪನೆಯನ್ನು ಪ್ರಧಾನ ಮಂತ್ರಿಗಳು ಡಿ.10ರಂದು ಮಾಡುತ್ತಾರಂತೆ. ಇದಕ್ಕಾಗಿ ಸಂಸತ್ ಭವನದ ಎದುರು ಇರುವ ಗಾಂಧೀಜಿ ಪ್ರತಿಮೆಯನ್ನು ತಾತ್ಕಾಲಿಕವಾಗಿ ಸ್ಥಳಾಂತರ ಮಾಡಲಾಗುತ್ತಿದೆ –ಸುದ್ದಿ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್/ಫೇಸ್‌ಬುಕ್



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ/ ಫೇಸ್‌ಬುಕ್

ಬಿಜೆಪಿ ಐಟಿ ಸೆಲ್ ಮುಖ್ಯಸ್ಥನಿಗೆ ಟ್ವಿಟರ್‌ನಿಂದ ಅಸತ್ಯ 'ಪ್ರಶಸ್ತಿ'!

ತನ್ನ ಜಾಲತಾಣದಲ್ಲಿ ಸುಳ್ಳು ಮಾಹಿತಿ ಹರಿದಾಡುವುದನ್ನು ತಡೆಯಲು ಪ್ರಬಲ ವ್ಯವಸ್ಥೆ ರೂಪಿಸುತ್ತಿರುವ ಟ್ವಿಟರ್, **ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರ ಒಂದು ಟ್ವೀಟ್‌ಗೆ 'ಕೈಚಳಕದ ಮಾಧ್ಯಮ' (ಮೆನುಪಿಲೇಟೆಡ್ ಮೀಡಿಯ)** ಎಂಬ ಬಾವುಟ ಹಚ್ಚಿದೆ.

ಪ್ರತಿಭಟನೆ ನಡೆಸು ತ್ತಿರುವ ಪಂಜಾಬ್ ರೈತರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದ ದೃಶ್ಯವೊಂದನ್ನು ರಾಹುಲ್ ಗಾಂಧಿ ಲಗತ್ತಿಸಿ ಟ್ವೀಟ್ ಮಾಡಿದ್ದರು. ಇದನ್ನು ಉಲ್ಲೇಖಿಸಿ ಅಮಿತ್ ಮಾಳವೀಯ 'ರಾಹುಲ್ ಗಾಂಧಿ ವಿಶ್ವಾಸಾರ್ಹವಲ್ಲದ ವಿಪಕ್ಷ ನಾಯಕ' ಎಂದು ಟ್ವೀಟ್ ಮಾಡಿದ್ದರು. ಪಂಜಾಬ್ ರೈತನ ಮೇಲೆ ಪೊಲೀಸರು ಲಾಠಿ ಹೊಡೆದಿಲ್ಲ. ವಯಸ್ಸಾಗಿರುವ ಅವರನ್ನು ಹಾಗೆಯೇ ಬಿಟ್ಟು ಕಳುಹಿಸಿದರು ಎಂದು ವಾದಿಸಿ ವಿಡಿಯೋ ತುಣಕೊಂದನ್ನು ಹಾಕಿದ್ದರು. ಆದರೆ, ಅದು ಎಡಿಟ್ ಆಗಿದ್ದು, ಪೂರ್ಣ ದೃಶ್ಯ ಇರಲಿಲ್ಲ. ಬಳಿಕ ಸೋಷಿಯಲ್ ಮೀಡಿಯಾದಲ್ಲಿ ಆ ದೃಶ್ಯದ ಪೂರ್ಣ ಚಿತ್ರಣ ಬಂದಿತು. ಅದರಲ್ಲಿ ಪೊಲೀಸರು ಆ ವೃದ್ಧನ ಮೇಲೆ ಲಾಠಿ ಹೊಡೆದಿರುವುದು ಸ್ಪಷ್ಟವಾಗಿ ತೋರಿದೆ. ಈ ಹಿನ್ನೆಲೆಯಲ್ಲಿ, ಅವರಿಗೆ ಟ್ವಿಟರ್ ಈ ಮೆನುಪಿಲೇಟೆಡ್ ಮೀಡಿಯ 'ಪ್ರಶಸ್ತಿ'ಯನ್ನು ದಯಪಾಲಿಸಿದೆ!

ಟ್ವಟರ್ ಸುದ್ದಿಗಳನ್ನು ವಿಕೃತಗೊಳಿಸಿ ಪಸರಿಸುವುದನ್ನು ತಡೆಯಲು ನಿಯಮಗಗಳನ್ನು ರೂಪಿಸಿದ ಮೇಲೆ ಈ 'ಪ್ರಶಸ್ತಿ' ಪಡೆದ ಮೊದಲ ರಾಜಕಾರಣಿ ಈಗ ಮಾಜಿಯಗುತ್ತಿರುವ ಅಮೆರಿಕಾದ ಅಧ್ಯಕ್ಷ ಟ್ರಂಪ್ ಅಂತೆ. ಈಗ ಬಿಜೆಪಿ ಐಟಿ ಮುಖ್ಯಸ್ಥ ಆ 'ಗಣ್ಯ'ರ ಸಾಲಿಗೆ ಸೇರಿದ್ದಾರೆ, ಅವರು ಈ 'ಪ್ರಶಸ್ತಿ' ಪಡೆದ ಮೊದಲ ಭಾರತೀಯ ರಾಜಕಾರಣಿ ಎಂಬ ಹೆಗ್ಗಳಿಕೆಯೂ ಇದೆ!



ಆ ದೃಶ್ಯದಲ್ಲಿ ಇದ್ದ ಹಿರಿ ವಯಸ್ಸಿನ ರೈತ ಸುಖದೇವ್ ಸಿಂಗ್ ಎಂದು ಗುರುತಿಸಲಾಗಿದೆ. ಸದ್ಯ ಹರಿಯಾಣ–ದೆಹಲಿ ಗಡಿಭಾಗದಲ್ಲಿರುವ ಅವರನ್ನು ಕೆಲ ಮಾಧ್ಯಮ ಪ್ರತಿನಿಧಿಗಳು ಸಂಪರ್ಕಿಸಿ ವಿಚಾರಿಸಿವೆ. ಅವರ ಅಂಗೈ, ಬೆನ್ನು ಮತ್ತು ತೋಳಿಗೆ ಪೆಟ್ಟು ಬಿದ್ದಿದೆ. ನನಗೆ ಪೆಟ್ಟು ಬಿದ್ದಿಲ್ಲ ಅಂತಾರೆ. ಇಲ್ಲಿ ನೋಡಿ ಗಾಯಗಳಾಗಿರುವುದು ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ನವಂಬರ್ 26 ರ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ
ವಿಚಾರಹೀನತೆಯ ಪ್ರವಚನದ ವಿರುದ್ಧ ಒಂದು ಪ್ರಹಾರ





ವಿಚಾರಹೀನತೆಯನ್ನು ವ್ಯವಸ್ಥಿತವಾಗಿ ಬೋಧಿಸುವ ಮೂಲಕ ದೇಶದಲ್ಲಿ ಸಾರ್ವಜನಿಕ ಚರ್ಚೆಗಳ ದಿಕ್ಕನ್ನು ಬದಲಾಯಿಸಿ ಅಧಿಕಾರ ಹಿಡಿಯುವಲ್ಲಿ ಹಿಂದುತ್ವ ಶಕ್ತಿಗಳು ಯಶಸ್ವಿಯಾಗಿವೆ. ಇಂತಹ ವಿಚಾರಹೀನತೆಯ ಕಥನ ಮುಂದಿನ ದಾರಿಗಾಣದ ಸ್ಥಿತಿಯಲ್ಲಿರುವ ನವ ಉದಾರ ಬಂಡವಾಳಶಾಹಿಗೂ ಪ್ರಯೋಜನಕರವಾಗಿರುವುದರಿಂದ ಅವರ ಹಣದ ಕೊಪ್ಪರಿಗೆಯ ಬೆಂಬಲವೂ ಹಿಂದುತ್ವ ಶಕ್ತಿಗಳಿಗೆ ದೊರೆತಿದೆ. ಆದರೆ ಜನರ ದೈನಂದಿನ ಜೀವನದ ನಿಜ ಸಮಸ್ಯೆಗಳನ್ನು ಪಕ್ಕಕ್ಕೆ ಸರಿಸಲು ಅವು ಎಷ್ಟೇ ಹೆಣಗಾಡಿದರೂ, ಆ ಸಮಸ್ಯೆಗಳ ಚರ್ಚೆಯು ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಲೇ ಇರುತ್ತದೆ. ಇದು ಹಿಂದುತ್ವ ಶಕ್ತಿಗಳು ಗದ್ದಿಯಲ್ಲಿ ಕೂತಿರುವುದು ಒಂದು ತಾತ್ಕಾಲಿಕ ವಿದ್ಯಮಾನ ಎಂಬುದನ್ನು ತೋರಿಸುತ್ತದೆ. ಇತ್ತೀಚೆಗೆ ಬಿಹಾರದ ಚುನಾವಣಾ ಫಲಿತಾಂಶ ಈ ವಿಚಾರಹೀನತೆಯ ಪ್ರವಚನವನ್ನು ಪಲ್ಲಟಗೊಳಿಸಿದೆ. ನವಂಬರ್ 26ರ ಮುಷ್ಕರವು ಈ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ದಿದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ನವೆಂಬರ್ 26ರ ಮುಷ್ಕರವು ಒಂದು ಗಮನಾರ್ಹ ವಿದ್ಯಮಾನವೇ. ಏಕೆಂದರೆ, ಈ ಮುಷ್ಕರವು ದೇಶದ ಕಾರ್ಮಿಕರು ಮತ್ತು ರೈತರ ಮೇಲೆ ಮೋದಿ ಸರ್ಕಾರವು ನಡೆಸುತ್ತಿರುವ ನಿರ್ಲಜ್ಜ ಮತ್ತು ಅಭೂತಪೂರ್ವ ದಾಳಿಗಳ ವಿರುದ್ಧದ ಪ್ರತಿಭಟನೆ ಮಾತ್ರವಲ್ಲ, ಮೋದಿ ಸರ್ಕಾರದ ಈ ದಾಳಿಗಳು ಸಾಮ್ರಾಜ್ಯಶಾಹಿ ಕಾರ್ಯಸೂಚಿಯನ್ನು ಮುಂದೊಯ್ಯುತ್ತವೆ ಎನ್ನುವ ಕಾರಣದ ಜೊತೆಗೆ ಒಂದು ಆಳವಾದ ಮತ್ತು ಕಡಿಮೆ ಚರ್ಚಿತವಾದ ಮತ್ತು ಮಹತ್ವದ ಒಂದು ಕಾರಣವನ್ನು ಈ ಕೆಳಗಿನ ವಿವರಗಳಲ್ಲಿ ಕಾಣಬಹುದು.

ದೇಶದಲ್ಲಿ ಸಾರ್ವಜನಿಕ ಚರ್ಚೆಗಳ (public discourse) ದಿಕ್ಕನ್ನು ಬದಲಾಯಿಸುವ ಮೂಲಕ ಅಧಿಕಾರ ಹಿಡಿಯುವಲ್ಲಿ ಹಿಂದುತ್ವ ಶಕ್ತಿಗಳು ಯಶಸ್ವಿಯಾಗಿವೆ. ಚಂಪಾರಣ್ ಪ್ರದೇಶದ ರೈತರ ಸ್ಥಿತಿ–ಗತಿಗಳ ಬಗ್ಗೆ ವಿಚಾರಿಸಲು 1917ರಲ್ಲಿ ಗಾಂಧೀಜಿ ಅಲ್ಲಿಗೆ ಭೇಟಿ ನೀಡಿದಾಗಿನಿಂದ ಹಿಡಿದು ಒಂದು ಶತಮಾನಕ್ಕೂ ಹೆಚ್ಚು ಕಾಲ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಂಡಿದ್ದ ಕಥನವನ್ನು ಅವರು ಪಲ್ಲಟಿಸಿದ್ದಾರೆ. ಜನರ ಐಹಿಕ ಜೀವನದ ಅಥವಾ ಅವರ ವ್ಯಾವಹಾರಿಕ ಬದುಕಿನ ಸುತ್ತ ಮುತ್ತವೇ ತಿರುಗುತ್ತಿದ್ದ ಈ ಕಥನವು, ಇಡೀ ವಸಾಹತುಶಾಹಿ–ವಿರೋಧಿ ಹೋರಾಟವನ್ನು ಮತ್ತು ನಂತರದ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯವನ್ನು, ಹಿಂದುತ್ವ ಶಕ್ತಿಗಳು ಅಧಿಕಾರಕ್ಕೆ ಬರುವವರೆಗೂ, ಆವರಿಸಿಕೊಂಡಿತ್ತು. ಜನರ ಪ್ರಾಪಂಚಿಕ ಬದುಕನ್ನು ಉತ್ತಮಗೊಳಿಸುವ ಪಾತ್ರವನ್ನು ಪ್ರಭುತ್ವವೇ ನಿರ್ವಹಿಸಬೇಕು ಎಂದು ಭಾವಿಸಲಾಗಿತ್ತು. ಬದುಕನ್ನು ಉತ್ತಮಗೊಳಿಸುವ ಬಗ್ಗೆ ರಾಜಕೀಯ ಅಧಿಕಾರವನ್ನು ಹಿಡಿಯಲು ಸೆಣಸುತ್ತಿದ್ದ ಬೇರೆ ಬೇರೆ ರಾಜಕೀಯ ಪಕ್ಷಗಳು ಬೇರೆ ಬೇರೆ ಮಾರ್ಗೋಪಾಯಗಳನ್ನು ಸೂಚಿಸುತ್ತಿದ್ದವು. ಈ ವಿಷಯವನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, ಬಡತನ, ನಿರುದ್ಯೋಗ, ಬೆಳವಣಿಗೆ, ಅಭಿವೃದ್ಧಿ, ಆರೋಗ್ಯ–ಆರೈಕೆ, ಶಿಕ್ಷಣ ಮತ್ತು ಇತರ ಅನೇಕ ವಿಷಯಗಳಿಗೆ ಸಂಬಂಧಿಸಿದ ಈ ಕಥನವನ್ನು ಒಪ್ಪಿಕೊಂಡಿದ್ದ ಬೇರೆ ಬೇರೆ ರಾಜಕೀಯ ಪಕ್ಷಗಳು ಬೇರೆ ಬೇರೆ ನಿಲುವುಗಳನ್ನು ಹೊಂದಿದ್ದರೂ ಸಹ, ಅವರ ಚರ್ಚೆ–ನಿಲುವುಗಳು ಈ ಕಥನದ ಒಟ್ಟಾರೆ ವ್ಯಾಪ್ತಿಗೆ ಸೀಮಿತವಾಗಿದ್ದವು.

ಈ ಸಂಕಥನವನ್ನು, ಜನರ ಹಕ್ಕುಗಳನ್ನು ಕಸಿದ ಮತ್ತು ತನ್ನ ನಿರಂಕುಶ ಆಡಳಿತವನ್ನು ದೇಶದ ಮೇಲೆ ಹೇರಿದ ಇಂದಿರಾ ಗಾಂಧಿಯವರ ಕುಖ್ಯಾತ ತುರ್ತುಪರಿಸ್ಥಿತಿ ಕೂಡ, ಬದಲಿಸಲು ಮುಂದಾಗಲಿಲ್ಲ. ಬದಲಿಗೆ, ಈ ಕಥನದ ವ್ಯಾಪ್ತಿಯೊಳಗೇ, ತನ್ನ 20 ಅಂಶಗಳ ಕಾರ್ಯಕ್ರಮವು ಜನರ ಲೌಕಿಕ ಜೀವನವನ್ನು ಸುಧಾರಿಸುವ ಸಂಜೀವಿನಿಯಾಗಬಲ್ಲದು ಎಂಬುದಾಗಿ ಹೇಳುವ ಮೂಲಕ ತುರ್ತುಪರಿಸ್ಥಿತಿಯನ್ನು ಜನರಿಗೆ ಹಿಡಿಸುವಂತೆ ಮಾಡಲು ಇಂದಿರಾ ಗಾಂಧಿ ಪ್ರಯತ್ನಿಸಿದರು. ಆದರೆ, ಈ ಕಥನವನ್ನು ಯಾವುದೇ ರೀತಿಯಲ್ಲಿ ಶ್ರೀಮಂತಗೊಳಿಸುವುದು ಬಿಜೆಪಿಗೆ ಸಾಧ್ಯವಾಗಿಲ್ಲ. ಆರ್ಥಿಕ ವಿಷಯಗಳ ಬಗ್ಗೆ ಬಿಜೆಪಿಗೆ ತನ್ನದೇ ಆದ ವಿಚಾರಗಳಿಲ್ಲ. ಹಾಗಾಗಿ, ಅದು ಕಣ್ಣುಮುಚ್ಚಿಕೊಂಡು ತನ್ನ ಕಾರ್ಪೊರೇಟ್ ಪ್ರಾಯೋಜಕರಿಗೆ ಮತ್ತು ಬ್ರೆಟನ್ ವುಡ್ಸ್ ಸಂಸ್ಥೆಗಳು (ಐಎಂಎಫ್, ವಿಶ್ವ ಬ್ಯಾಂಕ್) ಹೊರಡಿಸುವ ಕರಪತ್ರಗಳಿಗೆ ಬದ್ಧವಾಗಿ ನಡೆಯುತ್ತದೆ.

ವಾಸ್ತವವಾಗಿ, ಈ ಸಂಕಥನವನ್ನು ಬದಲಾಯಿಸಿ ಅದರ ಜಾಗದಲ್ಲಿ ಒಂದು ಪರ್ಯಾಯ ಕಥನವನ್ನು ಕಟ್ಟುವ ಮತ್ತು ದೇವಸ್ಥಾನಗಳ ನಿರ್ಮಾಣ, ಮಸೀದಿಗಳ ಧ್ವಂಸ, ಭಯೋತ್ಪಾದಕ ಪಿತೂರಿಗಳಲ್ಲಿ ಅಲ್ಪ–ಸಂಖ್ಯಾತರು ಇದ್ದಾರೆಂದು ಕಾಣುವ, ದ್ವೇಷವನ್ನು ಎಲ್ಲೆಡೆ ಹರಡುವ ಮತ್ತು ವಿಚಾರಹೀನತೆಯನ್ನು ವ್ಯವಸ್ಥಿತವಾಗಿ ಬೋಧಿಸುವ ಮೂಲಕ ಜನರನ್ನು ವಿಭಜಿಸುವ ಅಜೆಂಡಾವನ್ನು ಬಿಜೆಪಿಯು ಹೊಂದಿದೆ. ಹಾಗಾಗಿ, ಬಿಜೆಪಿಯ ಪ್ರವಚನಗಳಲ್ಲಿ ವಿಚಾರಹೀನತೆ ತುಂಬಿರಬೇಕಾಗುತ್ತದೆ. ಅದು ಹುಟ್ಟಿಹಾಕುವ ದ್ವೇಷವನ್ನು ನಿರಂತರವಾಗಿ ಸಮರ್ಥಿಸಿಕೊಳ್ಳಲು, ಸಾಕ್ಷಿ ಪುರಾವೆಗಳನ್ನು ಎಳ್ಳಷ್ಟೂ ಲೆಕ್ಕಿಸದೆ ಇತಿಹಾಸ ಮತ್ತು ಪುರಾಣಗಳ ನಡುವಿನ ವ್ಯತ್ಯಾಸವನ್ನು ಅಳಿಸಿಹಾಕಬೇಕಾಗುತ್ತದೆ.

ನವ ಉದಾರ ಬಂಡವಾಳಶಾಹಿಯು ದಾರಿ ಕಾಣದ ಹಂತವನ್ನು ತಲುಪಿರುವ ಪ್ರಸಕ್ತ ಸನ್ನಿವೇಶದಲ್ಲಿ, ವಿಚಾರಹೀನತೆಯನ್ನು ವ್ಯವಸ್ಥಿತವಾಗಿ ಬೋಧಿಸುವ ಮತ್ತು ಜನರನ್ನು ವಿಭಜಿಸುವ ಪರ್ಯಾಯ ಕಥನವನ್ನು ಬೆಂಬಲಿಸುವುದು ಕಾರ್ಪೊರೇಟ್‌ಗಳಿಗೆ ಲಾಭದಾಯಕವಾಗಿದೆ. ಏಕೆಂದರೆ, ನವ ಉದಾರ ಬಂಡವಾಳಶಾಹಿ ಆರ್ಥಿಕ ನೀತಿಗಳಿಗೆ ಕಳೆದ ನಲವತ್ತು ವರ್ಷಗಳಿಂದ ಸಮರ್ಥನೆ ಸಿಕ್ಕಿತ್ತು. ಈ ವಿಶ್ವಾಸಾರ್ಹತೆ ಈಗ ಇಲ್ಲವಾಗಿದೆ. ಏಕೆಂದರೆ, ಆರ್ಥಿಕ ಬೆಳವಣಿಗೆಯು ಉನ್ನತವಾಗಿದ್ದರೆ ಅದರ ಪ್ರಯೋಜನ ತಳದಲ್ಲಿದ್ದವರಿಗೂ ಹನಿ ಹನಿಯಾಗಿ ಜಿನುಗುತ್ತದೆ ಎಂದು ಆರಂಭದಿಂದಲೂ ಹೇಳಲಾಗಿತ್ತು. ಆದರೆ, ಬೆಳವಣಿಗೆಯು ಮೇಲ್ನೋಟದಲ್ಲಿ ಆಕರ್ಷಕವಾಗಿದೆ ಎಂದು ಹೇಳುತ್ತಿದ್ದ ಅವಧಿಯಲ್ಲೂ ಅದರ ಪ್ರಯೋಜನ ತಳಭಾಗದಲ್ಲಿದ್ದವರಿಗೆ ಜಿನುಗಲೇ ಇಲ್ಲ ಎಂಬ ಕಾರಣದಿಂದ ಮಾತ್ರ ಅದು ವಿಶ್ವಾಸಾರ್ಹತೆ ಕಳೆದುಕೊಂಡಿಲ್ಲ; ಹೇಳಲಿಕ್ಕಾದರೂ ಅಷ್ಟೊ ಇಷ್ಟೊ ಇದ್ದ ಬೆಳವಣಿಗೆಯೂ ಈಗ ಹೇಳ ಹೆಸರಿಲ್ಲದಂತಾಗಿ ನಿರುದ್ಯೋಗವು ತೀವ್ರವಾಗಿ ಏರುತ್ತಿದೆ. ಹಾಗಾಗಿ, ಈ ಹೊಸ ಸನ್ನಿವೇಶದಲ್ಲಿ ಸಂಕಥನದ ಈ ಬದಲಾವಣೆಯು ಕಾರ್ಪೊರೇಟ್‌ಗಳಿಗೆ ಹೇಳಿ ಮಾಡಿಸಿದಂತೆ ಹೊಂದುತ್ತದೆ. ಈ ಕಾರಣದಿಂದಲೇ ಕಾರ್ಪೊರೇಟ್‌ಗಳು ಕೊಪ್ಪರಿಗೆ ಹಣ ಸುರಿದು ಬಿಜೆಪಿಯನ್ನು ಅಧಿಕಾರಕ್ಕೆ ತಂದಿವೆ.

ಬಿಜೆಪಿಯು ಅಧಿಕಾರದಲ್ಲಿ ಉಳಿಯಲು ಈ ವಿಚಾರಹೀನತೆಯ ಕಥನವು ಹಳಸದಂತೆ ನೋಡಿಕೊಳ್ಳುವುದು ಮತ್ತು ಅದೇ ಸಮಯದಲ್ಲಿ ಬಹಳ ಕಾಲ ಪ್ರಾಮುಖ್ಯತೆ ಪಡೆದಿದ್ದ ಪರ್ಯಾಯ ಕಥನವು, ಅಂದರೆ, ಜನರ ಲೌಕಿಕ ಬದುಕಿಗೆ ಸಂಬಂಧಿಸಿದ ಬಡತನ, ನಿರುದ್ಯೋಗ, ಆರ್ಥಿಕ ಅಭಿವೃದ್ಧಿ, ಆರೋಗ್ಯ–ಆರೈಕೆ, ಶಿಕ್ಷಣ ಮುಂತಾದ ವಿಷಯಗಳ ಸುತ್ತ ತಿರುಗುತ್ತಿದ್ದ ಚರ್ಚೆಗಳು ಮತ್ತು ವರ್ಗ ಹೋರಾಟಗಳು ಮತ್ತೆ ರಂಗಸ್ಥಳದ ಮಧ್ಯಕ್ಕೆ ಬಾರದಂತೆ ತಡೆಗಟ್ಟುವುದು ನಿರ್ಣಾಯಕವಾಗುತ್ತದೆ. ಹಾಗಾದರೆ ಅಧಿಕಾರದ ತನ್ನ ಕತೆ ಮುಗಿದಂತೆಯೇ ಎಂಬುದು ಬಿಜೆಪಿಗೆ ಗೊತ್ತಿದೆ. ಆದರೆ, ನವ ಉದಾರ ಬಂಡವಾಳಶಾಹಿಯ ಬಿಕ್ಕಟ್ಟಿನಿಂದಾಗಿ ಜನರ ಸಂಕಷ್ಟಗಳು ಉಲ್ಬಣಗೊಂಡ ಪರಿಸ್ಥಿತಿಯಲ್ಲಿ ಎರಗಿದ ಕೊರೊನಾ ಸಾಂಕ್ರಾಮಿಕವು ದೇಶವನ್ನು ತತ್ತರಿಸುವಂತೆ ಮಾಡಿರುವ ಸಂದರ್ಭದಲ್ಲಿ, ಆ ಪರ್ಯಾಯ ಕಥನವನ್ನು ಇನ್ನು ಮುಂದೆ ಪಕ್ಕಕ್ಕೆ ಸರಿಸುವಂತಿಲ್ಲ.


ಈ ಪರ್ಯಾಯ ಕಥನವು 2019ರ ಲೋಕ ಸಭಾ ಚುನಾವಣೆಯ ಮುನ್ನಾ ದಿನಗಳಲ್ಲಿ ಪುನಃ ಮೈ ಕೊಡವಿ ಮೇಲೆದ್ದಿತ್ತು. ಮಹಾರಾಷ್ಟ್ರದ ರೈತರು 2018ರಲ್ಲಿ ನಡೆಸಿದ ಪಾದಯಾತ್ರೆ ಮತ್ತು 2019ರಲ್ಲಿ ದೆಹಲಿಯಲ್ಲಿ ನೆಡೆದ ರೈತರ ಅಭೂತಪೂರ್ವ ರ್‍ಯಾಲಿ ಈ ವಿದ್ಯಮಾನವನ್ನು ಸಾರಿದ್ದವು. ಆದರೆ, ಉಗ್ರರು ಪುಲ್ವಾಮಾದಲ್ಲಿ ನಮ್ಮ ಸೈನಿಕರ ಮೇಲೆ ನಡೆಸಿದ ಬಾಂಬ್ ದಾಳಿ, ಮತ್ತು ಅದಕ್ಕೆ ಪ್ರತೀಕಾರವಾಗಿ ನಮ್ಮ ವಾಯು ಪಡೆಯು ಪಾಕಿಸ್ತಾನದ ಬಾಲಾಕೋಟ್ ಮೇಲೆ ನಡೆಸಿದ ದಾಳಿಗಳ ನಂತರ ಪ್ರತಿಪಾದಿಸಿದ ಹಿಂದುತ್ವದ ಕಥನ ಮತ್ತು ಅದರ ಪ್ರಚಾರವು ಬೀರಿದ ಪರಿಣಾಮವಾಗಿ ಮೋದಿ ಸರ್ಕಾರವು ಎರಡನೇ ಅವಧಿಗೆ ಅಧಿಕಾರ ಪಡೆಯುವಲ್ಲಿ ಯಶಸ್ವಿಯಾಯಿತು.

ಮೋದಿ ಸರ್ಕಾರದ ಈ ಎರಡನೆಯ ಅವಧಿಯು, ಪ್ರಜಾಪ್ರಭುತ್ವದ ಹಕ್ಕುಗಳ ದಮನ, ವ್ಯಕ್ತಿ ಸ್ವಾತಂತ್ರ್ಯದ ಹರಣ, ಸಂವಿಧಾನದ 370ನೇ ವಿಧಿಯ ರದ್ದತಿ, ರಾಜ್ಯಗಳಿಗೆ ನೀಡಬೇಕಿದ್ದ ಜಿಎಸ್‌ಟಿ ಪರಿಹಾರದ ನಿರಾಕರಣೆ, ತಾರತಮ್ಯದಿಂದ ಕೂಡಿದ ಪೌರತ್ವ ತಿದ್ದುಪಡಿ ಕಾಯ್ದೆಯ ಜಾರಿ, ಮೂರು ರೈತ–ವಿರೋಧಿ ಕೃಷಿ ಕಾಯ್ದೆಗಳು ಮತ್ತು ಸುಮಾರು ಒಂದು ಶತಕದ ಹಿಂದೆಯೇ ಗಳಿಸಿದ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವ ಕಾರ್ಮಿಕ ಕಾಯ್ದೆಗಳ ಬದಲಾವಣೆಗಳ ಮೂಲಕ, ಜನರ ಬದುಕಿನ ಮೇಲೆ ಕ್ರೂರ ದಾಳಿಗಳು ಈ ಸರ್ಕಾರದ ಮೊದಲನೆಯ ಅವಧಿಗಿಂತಲೂ ಹೆಚ್ಚು ವ್ಯವಸ್ಥಿತವಾಗಿ ನಡೆಯುತ್ತಿರುವುದನ್ನು ಕಾಣುತ್ತಿದೆ. ಈ ವರ್ಷದ ಮಾರ್ಚ್ ತಿಂಗಳಲ್ಲಿ, ಕೇವಲ ನಾಲ್ಕು ತಾಸುಗಳ ನೋಟಿಸ್ ನೀಡಿ ಏಕಾಏಕಿಯಾಗಿ ಘೋಷಿಸಿದ ಲಾಕ್‌ಡೌನ್‌ನ ಹೊಡೆತದಿಂದ ಇದ್ದಕ್ಕಿಂದಂತೆ ಅನ್ನ– ನೀರು– ಸೂರು–ಬಟ್ಟೆ ಬರೆ ಎಲ್ಲವನ್ನೂ ಕಳೆದುಕೊಂಡು ಹತಾಶರಾಗಿ ಬೀದಿಗೆ ಬಿದ್ದ ವಲಸಿಗ ಕಾರ್ಮಿಕರಿಗೆ ಮೋದಿ ಸರ್ಕಾರವು ಒದಗಿಸಿದ ನೆರವನ್ನು ವಿಶ್ವದ ಇತರ ಪ್ರಮುಖ ದೇಶಗಳು ತಮ್ಮ ಜನರಿಗೆ ಒದಗಿಸಿದ ನೆರವಿಗೆ ಹೋಲಿಸಿದರೆ, ತೀರಾ ಕ್ಷುಲ್ಲಕ ಎನ್ನುವಷ್ಟು ಕಡಿಮೆ ಇತ್ತು. ಮೋದಿ ಸರ್ಕಾರವು ಅದೆಷ್ಟು ನಿರ್ದಯ ಮತ್ತು ಅಮಾನವೀಯ ಎಂಬುದಕ್ಕೆ ಇದು ಸಾಕ್ಷಿಯಾಗುತ್ತದೆ. ವಾಸ್ತವವಾಗಿ, ಈ ಸರ್ಕಾರವು ಈ ಕೊರೊನಾ ಸಾಂಕ್ರಾಮಿಕದ ಸಂದರ್ಭವನ್ನು, ಪೌರತ್ವ ತಿದ್ದುಪಡಿ ಕಾಯಿದೆಯ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸಿದ ಎಲ್ಲರನ್ನು ಬಂಧಿಸಲು ಮತ್ತು ಬೆದರಿಕೆಯ ಮೂಲಕ ಅವರನ್ನು ತನ್ನ ಅಂಕೆಯಲ್ಲಿ ಇಟ್ಟುಕೊಳ್ಳಲು ಬಳಸಿಕೊಂಡಿದೆ. ಕೊರೊನಾದ ಕಾರಣದಿಂದಾಗಿ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧದ ಪ್ರತಿಭಟನೆಯು ಸ್ಥಗಿತಗೊಂಡಿದೆ.

ಹಿಂದುತ್ವವನ್ನು ಇನ್ನೂ ಹೆಚ್ಚು ಬಲಯುತವಾಗಿ ಮುನ್ನೆಲೆಗೆ ತರುವ ಮೂಲಕ ಸರ್ಕಾರವು ಈ ಎಲ್ಲ ಕ್ರಮಗಳನ್ನೂ ಸಮರ್ಥಿಸಿಕೊಳ್ಳುತ್ತದೆ. ವಿಚಾರಹೀನತೆಯ ಪ್ರವಚನ, ತರ್ಕರಹಿತ ವಾದ, ಪಿತೂರಿಗಳಿಂದ ಕೂಡಿದ ಕಥನಗಳ ನಿರೂಪಣೆ, ದೇಶದ್ರೋಹದ ಕಥನಗಳಿಂದ ತುಂಬಿದ ಮಾತುಗಳು, ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬೇರೆಯವರನ್ನು ಹದ್ದುಬಸ್ತಿನಲ್ಲಿಡಲು ಸ್ವಯಂಪ್ರೇರಿತರಾಗಿ ಕಾನೂನನ್ನು ಕೈಗೆತ್ತಿಕೊಳ್ಳುವಂತೆ ಜನರನ್ನು ಉತ್ತೇಜಿಸುವ ಕಾವಲುಕೋರತನದ ಕೆಲಸ ಇವುಗಳ ಮೂಲಕ ಹಿಂದುತ್ವವು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತಿದೆ. ಇಲ್ಲೊಂದು ವಿಷವರ್ತುಲವಿದೆ. ಉಲ್ಬಣಗೊಂಡ ಬಿಕ್ಕಟ್ಟು ತಂದೊಡ್ಡಿದ ಸಂಕಷ್ಟಗಳನ್ನು ಹಿಮ್ಮೆಟ್ಟಿಸಲು ಸರ್ಕಾರವು ಎಷ್ಟು ಮಟ್ಟಿಗೆ ಅಸಮರ್ಥವಾಗುತ್ತದೆಯೊ, ಜನರು ತಮ್ಮ ಲೌಕಿಕ ಸಮಸ್ಯೆಗಳ ಗೊಡವೆಗೆ ಹೋಗದಂತೆ ಅವರ ಗಮನವನ್ನು ಅಷ್ಟು ಮಟ್ಟಿನ ಅವಸರದಲ್ಲಿ ಬೇರೆಡೆಗೆ ತಿರುಗಿಸಬೇಕಾಗುತ್ತದೆ. ಅದಕ್ಕಾಗಿ, ಹಿಂದುತ್ವವನ್ನು ಒತ್ತಿ ಒತ್ತಿ ಪ್ರತಿಪಾದಿಸಬೇಕಾಗುತ್ತದೆ. ಅಂದರೆ, ಹಿಂದುತ್ವದ ಕಥನವನ್ನು ಇನ್ನೂ ಹೆಚ್ಚು ಹೆಚ್ಚು ವಿಲಕ್ಷಣವಾದ ಮತ್ತು ಅದ್ಭುತವಾದ ಕಥೆಗಳ ಮೂಲಕ ಹೆಣೆದು ಅದಕ್ಕೆ ಒಗ್ಗರಣೆಯನ್ನೂ ಕೊಡಬೇಕಾಗುತ್ತದೆ. ಜನರನ್ನು ದಿಕ್ಕು ತಪ್ಪಿಸಲು ಇನ್ನೂ ಹೆಚ್ಚು ನಿಗೂಢ ಕಂತೆ ಪುರಾಣಗಳನ್ನು ಹುಟ್ಟುಹಾಕಬೇಕಾಗುತ್ತದೆ.

ಜನರಿಗೆ ಒಂದಿಷ್ಟೂ ಉಪಯೋಗವಿಲ್ಲದ, ಆದರೆ ಅವರ ಗಮನವನ್ನು ಬೇರೆಡೆಗೆ ಸೆಳೆಯುವಂತಹ ನಯನ ಮನೋಹರ ಯಾ ಅದ್ಭುತ ಕೆಲಸಗಳನ್ನು ಮೋದಿ ಸರ್ಕಾರವು ಮಾಡುತ್ತಲೇ ಇರಬೇಕಾಗುತ್ತದೆ ಎಂಬುದಾಗಿ ಅಮರ್ತ್ಯ ಸೇನ್ ಅವರು ಹೇಳಿದ್ದರು. ಆದರೆ, ಅದು ಏನನ್ನು ಮಾಡುತ್ತದೆಯೊ ಅದಕ್ಕಿಂತ ಹೆಚ್ಚಾಗಿ, ಕರ್ಣಾನಂದಕರ ಕಥೆಗಳನ್ನು ಕಟ್ಟುತ್ತಾ

ಪುಟ 14 ನೋಡಿ



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಜನರಿಗೆ ಒಂದಿಷ್ಟೂ ಉಪಯೋಗವಿಲ್ಲದ, ಆದರೆ ಅವರ ಗಮನವನ್ನು ಬೇರೆಡೆಗೆ ಸೆಳೆಯುವಂತಹ ನಯನ ಮನೋಹರ ಕೆಲಸಗಳನ್ನು ಮೋದಿ ಸರ್ಕಾರವು ಮಾಡುತ್ತಲೇ ಇರಬೇಕಾಗುತ್ತದೆ ಎಂಬುದಾಗಿ ಅಮರ್ತ್ಯ ಸೇನ್ ಅವರು ಹೇಳಿದ್ದರು. ಅದು ಕರ್ಣಾನಂದಕರ ಕಥೆಗಳನ್ನು ಕಟ್ಟುತ್ತಾ ಹೋಗುತ್ತದೆ. ಜನರ ಲೌಕಿಕ ಜೀವನ ಅಧೋಗತಿಗಿಳಿದಷ್ಟೂ ಹೆಚ್ಚು ಹೆಚ್ಚು ಭ್ರಾಂತಿಕಾರಕ ಕಥೆಗಳನ್ನು ಕಟ್ಟುತ್ತಾ ಹೋಗಬೇಕಾತ್ತದೆ, ಹಿಂದುತ್ವದ ಕಥನವನ್ನು ಮುಂದುವರಿಸಲು, ವಿಚಾರಹೀನತೆಯ ಮೇಲಿನ ಅದರ ಅವಲಂಬನೆ ಹೆಚ್ಚುತ್ತಾ ಹೋಗುತ್ತದೆ.



ವಿಚಾರಹೀನತೆಯ ಪ್ರವಚನದ ವಿರುದ್ಧ ಒಂದು ಪ್ರಹಾರ

ಪುಟ 13 ರಿಂದ

ಹೋಗುತ್ತದೆ. ಅದರ ಆಳ್ವಿಕೆಯಲ್ಲಿ ಜನರ ಲೌಕಿಕ ಜೀವನ ಅಧೋಗತಿಗಿಳಿದಷ್ಟೂ ಅದು ಹೆಚ್ಚು ಹೆಚ್ಚು ಭ್ರಾಂತಿಕಾರಕ ಕಥೆಗಳನ್ನು ಕಟ್ಟುತ್ತಾ ಹೋಗಬೇಕಾತ್ತದೆ, ಹಿಂದುತ್ವದ ಕಥನವನ್ನು ಮುಂದುವರಿಸಲು, ವಿಚಾರಹೀನತೆಯ ಮೇಲಿನ ಅದರ ಅವಲಂಬನೆ ಹೆಚ್ಚುತ್ತಾ ಹೋಗುತ್ತದೆ.

ಹಿಂದುತ್ವ ಶಕ್ತಿಗಳ ಪ್ರಜಾಪ್ರಭುತ್ವ ವಿರೋಧಿ ಮತ್ತು ಜಾತ್ಯತೀತ ವಿರೋಧಿ ಸ್ವಭಾವವನ್ನು ಜನರು ವ್ಯಾಪಕವಾಗಿ ಗುರುತಿಸಿದ್ದಾರೆ. ವಾಸ್ತವವಾಗಿ, ಪ್ರಜಾಪ್ರಭುತ್ವ, ಮತ-ಧರ್ಮ ನಿರಪೇಕ್ಷತೆ ಮತ್ತು ಇತರ ಸಾಂವಿಧಾನಿಕ ಮೌಲ್ಯಗಳ ಆಧಾರದ ಮೇಲೆ ಕಟ್ಟಲಾದ ಸ್ವತಂತ್ರ ಭಾರತವು ವೈಚಾರಿಕ ಚರ್ಚೆಯನ್ನು ಪ್ರತಿಪಾದಿಸುತ್ತದೆ, ವಿಚಾರಹೀನತೆಯನ್ನಲ್ಲ. ಲೌಕಿಕ ಜೀವನವೇ ಅದರ ಮುಖ್ಯ ಕಾಳಜಿ. ಸಮಾಜವು ತನ್ನ ನಿಜ ಜೀವನದ ಪ್ರಶ್ನೆಗಳ ಮೇಲೆ ಬಹಿರಂಗ ಚರ್ಚೆಗಳಲ್ಲಿ ತೊಡಗಬೇಕು ಎಂದು ಅದು ಪರಿಭಾವಿಸುತ್ತದೆ.

ಆದ್ದರಿಂದ, ಹಿಂದುತ್ವದ ನಾಯಕರು ತಮ್ಮ ಸಂವಿಧಾನ ನಿಷ್ಠೆಯನ್ನು ಎಷ್ಟೇ ಗಟ್ಟಿಯಾಗಿ ಪ್ರತಿಪಾದಿಸಿದರೂ, ಅವರು ಹರಡುವ ಪ್ರವಚನದಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಅಥವಾ ಮತ-ಧರ್ಮ ನಿರಪೇಕ್ಷತೆಯ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ.

ಒಂದು ವಿಡಂಬನೆಯೊ ಎಂಬಂತೆ, ಜನರ ದೈನಂದಿನ ಜೀವನದ ಸಮಸ್ಯೆಗಳನ್ನು ಪಕ್ಕಕ್ಕೆ ಸರಿಸಲು ಹಿಂದುತ್ವ ಶಕ್ತಿಗಳು ಎಷ್ಟೇ ಹೆಣಗಾಡಿದರೂ, ಜನ ಜೀವನದ ಸಮಸ್ಯೆಗಳ ಚರ್ಚೆಯು ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಲೇ ಇರುತ್ತದೆ. ಇದು ಹಿಂದುತ್ವ ಶಕ್ತಿಗಳು ಗದ್ದಿಯಲ್ಲಿ ಕೂತಿರುವುದು ಒಂದು ತಾತ್ಕಾಲಿಕ ವಿದ್ಯಮಾನ ಎಂಬುದನ್ನು ತೋರಿಸುತ್ತದೆ. ಇತ್ತೀಚೆಗೆ ಬಿಹಾರದಲ್ಲಿ ನಡೆದ ಚುನಾವಣೆಗಳು ನಿರುದ್ಯೋಗದ ಸಮಸ್ಯೆ ಮತ್ತೊಮ್ಮೆ ತಲೆ ಎತ್ತಿದ್ದನ್ನು ಕಂಡೆವು. ಅಪಾರ ಸಂಪನ್ಮೂಲಗಳನ್ನು ಎನ್‌ಡಿಎ ವಿನಿಯೋಗಿಸಿದ್ದರೂ ಸಹ ವಿರೋಧ ಪಕ್ಷಗಳ ಮೈತ್ರಿಕೂಟವು ಗಳಿಸಿದ ಜನಮತವು ಉತ್ತಮವಾಗಿತ್ತು ಮಾತ್ರವಲ್ಲ ಎನ್‌ಡಿಎಗಿಂತಲೂ ತುಸು ಹೆಚ್ಚಿಗೆ ಇತ್ತು. ಬಿಹಾರ ಚುನಾವಣೆಯ ಒಂದು ಸಕಾರಾತ್ಮಕ ಸಾಧನೆಯೆಂದರೆ, ವಿಚಾರಹೀನತೆಯ ಕಥನವನ್ನು ಅದು ಪಲ್ಲಟಗೊಳಿಸಿತು.

ನವಂಬರ್26ರ ಮುಷ್ಕರವು ಈ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ದಿದೆ. ವಿಚಾರ ಆಧಾರಿತ ಚರ್ಚೆಯನ್ನು ಮುನ್ನೆಲೆಗೆ ಮರಳಿ ತರುವಲ್ಲಿ ಅದೊಂದು ದಿಟ್ಟ ಪ್ರಯತ್ನವೇ ಸರಿ. ಪ್ರಜಾಪ್ರಭುತ್ವ, ಮತ-ಧರ್ಮ ನಿರಪೇಕ್ಷತೆ ಮತ್ತು ಇತರ ಸಾಂವಿಧಾನಿಕ ಮೌಲ್ಯಗಳನ್ನು ಮೊದಲಿನ ಆರೋಗ್ಯಕರ ಸ್ಥಿತಿಗೆ ತರಬೇಕು ಎಂದಾದರೆ, ಜನರ ದಿನ ನಿತ್ಯದ ಸಮಸ್ಯೆಗಳ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತರಬೇಕಾಗುತ್ತದೆ. ಹಾಗಾಗಿ, ನವೆಂಬರ್ 26ರ ಮುಷ್ಕರವು ಪ್ರಜಾಪ್ರಭುತ್ವದ ಮತ್ತು ಮತ-ಧರ್ಮ ನಿರಪೇಕ್ಷತೆಯ ರಕ್ಷಣೆಯ ಕಾರ್ಯವೂ ಹೌದು.

ಪ್ರಧಾನಿಗಳಿಗೆ ಮಹಿಳಾ ಸಂಘಟನೆಗಳ ಬಹಿರಂಗ ಪತ್ರ

ಪುಟ 2 ರಿಂದ

ಬಹಳಷ್ಟು ಮಹಿಳೆಯರು ಇನ್ನೂ 'ಅದೃಶ್ಯ'ರಾಗಿಯೇ ಉಳಿದಿದ್ದಾರೆ. **ಕೃಷಿ ವಲಯದಲ್ಲಿ ಮಹಿಳೆಯರ ಪಾತ್ರವನ್ನು ಉಪೇಕ್ಷಿಸುವಂತಿಲ್ಲ. ಏಕೆಂದರೆ ಅವರು ಕೃಷಿ ಕೂಲಿಕಾರರಲ್ಲಿ 33% ಮತ್ತು ಸ್ವ-ಉದ್ಯೋಗಿ ರೈತರಲ್ಲಿ 48%"** ಎಂಬ ಸಂಗತಿಯನ್ನು ಈ ಪತ್ರ ಪ್ರಧಾನಿಗಳ ಗಮನಕ್ಕೆ ತಂದಿದೆ.

ರೈತರು ಸಾಲ ಮನ್ನಾ ಮತ್ತು ಸ್ವಾಮಿನಾಥ??? ಆಯೋಗದ ಶಿಫಾರಸಿನಂತೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸುವಂತೆ ಬಹಳ ಸಮಯದಿಂದ ಆಗ್ರಹಿಸುತ್ತ ಬಂದಿದ್ದಾರೆ. ಆದರೆ ಸರಕಾರ ಅವರ ಈ ಬೇಡಿಕೆಗಳನ್ನು ಈಡೇರಿಸುವ ಬದಲು ಈ ಮೂರು ಕಾಯ್ದೆಗಳನ್ನು ತಂದು ಅವರ ಸಂಕಟಗಳನ್ನು ಬಹಳಷ್ಟು ಹೆಚ್ಚಿಸಿದೆ, ರೈತ ಕುಟುಂಬಗಳನ್ನು ಕೃಷಿ ಕಾರ್ಪೊರೇಟ್‌ಗಳ ಮರ್ಜಿಗೆ ಒಳಪಡಿಸಿದೆ. ಇದರ ವಿರುದ್ಧ ಎದ್ದು ಬಂದಿರುವ ರಾಷ್ಟ್ರವ್ಯಾಪಿ ಪ್ರತಿಭಟನೆಗಳಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾರೆ ಎಂದಿರುವ ಪತ್ರ ರೈತರ ಹೋರಾಟಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ ಈ ಕೆಳಗಿನ ಬೇಡಿಕೆಗಳನ್ನು ಪ್ರಧಾನ ಮಂತ್ರಿಗಳ ಮುಂದಿಟ್ಟಿದೆ:

1. ರೈತರ ನ್ಯಾಯಬದ್ಧ ಮತ್ತು ಶಾಂತಿಯುತ ಪ್ರತಿಭಟನೆಗಳ ದಮನವನ್ನು ನಿಲ್ಲಿಸಬೇಕು.
2. ಹೋರಾಟ ನಡೆಸುತ್ತಿರುವ ರೈತರು ಮತ್ತು ಅವರ ಸಂಘಟನೆಗಳ ಮುಖಂಡರ ಮೇಲೆ ಹಾಕಿರುವ ಎಲ್ಲ ಕೇಸುಗಳನ್ನು ಹಿಂದಕ್ಕೆ ಪಡೆಯಬೇಕು.
3. ಕೊವಿಡ್ ಕಾಲದಲ್ಲಿ ತಂದಿರುವ ಮೂರು ರೈತ-ವಿರೋಧಿ ಕಾಯ್ದೆಗಳನ್ನು ರದ್ದು ಮಾಡಬೇಕು.
4. ಗುತ್ತಿಗೆ ಬೇಸಾಯಕ್ಕೆ ಪ್ರೋತ್ಸಾಹವನ್ನು ನಿಲ್ಲಿಸಬೇಕು.
5. ಎಲ್ಲ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ನಿಗದಿ ಮಾಡಬೇಕು ಮತ್ತು ಖಾತ್ರಿಪಡಿಸಬೇಕು.
6. ಹಸಿವು ಮತ್ತು ಬಡತನದ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕು.
7. ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ಖಾತ್ರಿಪಡಿಸಬೇಕು.
8. ರೈತರ, ವಿಶೇಷವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ವಿಧವೆಯರ ಹಾಗೂ ಕಿರುಹಣಕಾಸು ಕಂಪನಿಗಳು ಮತ್ತು ಸ್ವಸಹಾಯ ಗುಂಪುಗಳಿಂದ ಸಾಲ ಪಡೆದವರ ಸಾಲಗಳನ್ನು ಮನ್ನಾ ಮಾಡಬೇಕು.
9. ಎಲ್ಲ ಸಂಕಷ್ಟಕ್ಕೆ ಒಳಗಾಗಿರುವ ಕುಟುಂಬಗಳಿಗೆ ಮಾಸಿಕ ಆದಾಯ ಬೆಂಬಲ ಒದಗಿಸಬೇಕು.
10. ಆರೋಗ್ಯಪಾಲನೆ ಮತ್ತು ಶಿಕ್ಷಣಕ್ಕಾಗಿ ಸಾರ್ವತ್ರಿಕ ಸಾಮಾಜಿಕ ಭದ್ರತಾ ಬೆಂಬಲ ಒದಗಿಸಬೇಕು.

ಕಲಾವಿದರಿಗೆ ಸರಕಾರೀ ವಸತಿ ಬಿಡಲು ನೋಟೀಸು-ಸಹಮತ್ ಪ್ರತಿಭಟನೆ

ದಿಲ್ಲಿಯಲ್ಲಿ ಕೇಂದ್ರ ಸರಕಾರ 27 ಹಿರಿಯ ಕಲಾವಿದರಿಗೆ ಕೊಟ್ಟಿದ್ದ ಸರಕಾರೀ ನಿವಾಸಗಳನ್ನು ಡಿಸೆಂಬರ್ 3ರ ರೊಳಗೆ ಖಾಲಿ ಮಾಡಲು ನೋಟೀಸು ಕೊಟ್ಟಿದೆ, ಇವರೆಲ್ಲರೂ ತಂತಮ್ಮ ಕಲಾಪ್ರಕಾರಗಳಲ್ಲಿ ಮಾಡಿದ ಅಪಾರ ಸಾಧನೆಗಳಿಗೆ ಪುರಸ್ಕಾರವಾಗಿ ಈ ಸರಕಾರೀ ನಿವಾಸ ಅಥವ ಫ್ಲಾಟುಗಳನ್ನು ಲೀಸ್ ಮೇಲೆ ನೀಡಲಾಗಿತ್ತು. ಈ ಲೀಸನ್ನು ಕಾಲಕಾಲಕ್ಕೆ ವಿಸ್ತರಿಸಲಾಗುತ್ತಿದ್ದು, ಅವರು ಸರಕಾರ ವಿಧಿಸುತ್ತಿದ್ದ ಬಾಡಿಗೆಗಳನ್ನೂ ತೆರುತ್ತಿದ್ದರು. ಆದರೆ ಈಗ, ಅದೂ ಕೊವಿಡ್ ಸಂಕಟ ಕಾಲದಲ್ಲಿ ಈ ಲೀಸುಗಳನ್ನು ವಿಸ್ತರಿಸದೆ ಖಾಲಿ ಮಾಡಬೇಕೆಂದು ನೋಟೀಸು ಕೊಡುವ ಮಟ್ಟಕ್ಕೆ ಹೋಗಿರುವುದು ಅವರಲ್ಲಿ ಅನೇಕರಿಗೆ ಆಶ್ಚರ್ಯ ಮತ್ತು ನೋವನ್ನು ಉಂಟುಮಾಡಿದೆ ಎಂದು ವರದಿಯಾಗಿದೆ.

ನೋಟೀಸ್ ಪಡೆದಿರುವ ಹಿರಿಯ ಕಲಾವಿದರಲ್ಲಿ ಖ್ಯಾತ ಒಡಿಸ್ಸಿ ನೃತ್ಯಗುರು 90ವರ್ಷ ದಾಟಿರುವ ಮಾಯಾಧರ್ ರಾವುತ್, ಕಥಕ್ ನೃತ್ಯಗುರು, ಪದ್ಮ ವಿಭೂಷಣ ಪ್ರಶಸ್ತಿ ಪಡೆದಿರುವ, 80 ವರ್ಷ ದಾಟಿರುವ ಬಿರ್ಜೂ ಮಹಾರಾಜ್, ವರ್ಣಚಿತ್ರ ಕಲಾವಿದ ಜತಿನ್ ದಾಸ್ ಮುಂತಾದವರಿದ್ದಾರೆ.

ಸಹಮತ್ (ಸಫ್ದರ್ ಹಾಶ್ಮಿ ಸ್ಮಾರಕ ಟ್ರಸ್ಟ್) ಕೇಂದ್ರ ಸರಕಾರದ ಈ ಕ್ರಮಕ್ಕೆ ಪ್ರತಿಭಟನೆ ವ್ಯಕ್ತಪಡಿಸಿದೆ. ಹಿಂದಿನ ಸರಕಾರಗಳ ಅಡಿಯಲ್ಲಿ ನಿರ್ದಿಷ್ಟ ಮಾನದಂಡಗಳ ಪ್ರಕಾರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಕಲಾವಿದರಿಗೆ ದಿಲ್ಲಿಯಲ್ಲಿ ತಮ್ಮ ಸಾಧನೆಗಳನ್ನು ಮುಂದುವರೆಸಲು ಅನುಕೂಲವಾಗುವಂತೆ ಸರಕಾರಿ ನಿವಾಸಗಳನ್ನು ಒದಗಿಸುವ ಒಂದು ದೀರ್ಘ ಸಮಯದ ಧೋರಣೆ ಇತ್ತು.

ಈಗ ನೋಟೀಸು ಪಡೆದಿರುವ ಕಲಾವಿದರಲ್ಲಿ ಹಲವರು ಬಹಳ ವಯಸ್ಸಾದವರು, ದಿಲ್ಲಿಯಲ್ಲಿ ಅವರಿಗೆ ಬೇರೆ ಮನೆಯಿಲ್ಲ. ಪ್ರಖ್ಯಾತರೂ ಸೇರಿದಂತೆ ಬಹಳಷ್ಟು ಕಲಾವಿದರ, ಆರ್ಥಿಕ ಪರಿಸ್ಥಿತಿಗಳೂ ಚೆನ್ನಾಗಿಲ್ಲ ಎಂಬುದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ. ಅದರಲ್ಲೂ ನೃತ್ಯ ಪಟುಗಳಿಗೆ ಜೀವನ ಸಾಗಿಸಬೇಕಾದರೆ ಶಿಷ್ಯರಿಗೆ ಕಲಿಸುವುದೊಂದೇ ದಾರಿ.

ಪಂಡಿತ್ ಬಿರ್ಜೂ ಮಹಾರಾಜ್‌ರಂತವರು ಕೂಡ ಈ ಇಳಿವಯಸ್ಸಿನಲ್ಲಿ ಎಲ್ಲಿಗೆಂದು ಹೋಗಲಿ, ಇನ್ನು ಹೆಚ್ಚೇನೂ ಸಮಯ ಉಳಿದಿಲ್ಲ ನನಗೆ ಎಂದು ಸಾರ್ವಜನಿಕವಾಗಿಯೇ ಅಳಲು ತೋಡಿಕೊಳ್ಳಬೇಕಾಗಿ ಬಂದಿರುವುದು ನಮ್ಮ ದೇಶದ ಮೇಲೊಂದು ಕಳಂಕ ಎಂದು ಸಹಮತ್ ಬೇಸರ ವ್ಯಕ್ತಪಡಿಸಿದೆ.

ಎಲ್ಲ ನೃತ್ಯಪಟುಗಳು, ಸಂಗೀತಗಾರರು, ವರ್ಣಚಿತ್ರ ಕಲಾವಿದರು ಮತ್ತು ನೃತ್ಯ ಚರಿತ್ರೆಕಾರರು ನಮ್ಮ ಸಾಂಸ್ಕೃತಿಕ ಜೀವನದ ಪ್ರಮುಖ ವ್ಯಕ್ತಿಗಳು, ಭಾರತದಲ್ಲಿ ಮತ್ತು ಜಗತ್ತಿನಾದ್ಯಂತ ನಮ್ಮ ಸಂಸ್ಕೃತಿಯ ರಾಯಭಾರಿಗಳು ಎಂಬ ಪ್ರಶಂಸೆ ಪಡೆದಿರುವವರು. ಅವರಿಗೆ ದಿಲ್ಲಿಯ ಮಾರುಕಟ್ಟೆ ದರಗಳಲ್ಲಿ ಬಾಡಿಗೆ ತೆರುವ ಶಕ್ತಿಯಿಲ್ಲ ಎಂದಿರುವ ಸಹಮತ್ "ನಾವು, ಸಹಕಲಾವಿದರು, ಸರಕಾರ ತನ್ನ ನಿರ್ಧಾರವನ್ನು ಮರು ಪರಿಶೀಲಿಸಬೇಕು ಎಂದು ವಿನಂತಿಸಿಕೊಳ್ಳುತ್ತೇವೆ. ನಮ್ಮ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸಿರುವ ಅರ್ಹ ಕಲಾವಿದರಿಗೆ ಒಂದು ಸಾಂಸ್ಕೃತಿಕ ಬೆಂಬಲವಾಗಿ ತನ್ನ ವಸತಿ ಸಂಗ್ರಹದಲ್ಲಿ ಒಂದು ಸಣ್ಣ ಭಾಗವನ್ನು ಕೊಡಮಾಡುವುದು ಸರಕಾರಕ್ಕೆ ಖಂಡಿತಾ ಸಾಧ್ಯವಿದೆ" ಎಂದು ಹೇಳಿದೆ.

ಫ್ರಾನ್ಸ್, ಜರ್ಮನಿ ಮುಂತಾದ ಹಲವು ದೇಶಗಳಲ್ಲಿ ಕಲೆ ಮತ್ತು ಕಲಾವಿದರಿಗೆ ಸರಕಾರದ ಮನ್ನಣೆ ಇದೆ, ಅಲ್ಲದೆ ಸರಕಾರೀ ನಿಯಮಾವಳಿಗಳಲ್ಲಿ ಅದನ್ನು ಕುಂಠಿತಗೊಳಿಸದೆ ಸಂಸ್ಕೃತಿಗೆ ಪ್ರಾಥಮಿಕತೆಯನ್ನು ನೀಡಲಾಗುತ್ತಿದೆ. ಆದರೆ **"ಪ್ರಾಚೀನ ಭಾರತೀಯ ಸಂಸ್ಕೃತಿ"ಯ ಬಗ್ಗೆ ಬಹಳ ಮಾತಾಡುವವರ ಸರಕಾರವೊಂದು ಕಲಾವಿದರ ನಿಜ ಪರಿಸ್ಥಿತಿಗಳ ಬಗ್ಗೆ ಹೆಚ್ಚು ಸಹಾನುಭೂತಿ ಹೊಂದಿರಬೇಕಾಗಿತ್ತು** ಎಂದು ಕಲಾವಿಮರ್ಶಕರು ಅಭಿಪ್ರಾಯ ಪಡುತ್ತಿದ್ದಾರೆ.

ರೈತರ ಹೋರಾಟಕ್ಕೆ ನಾಗರಿಕ ಸಮಾಜದ ಚಳುವಳಿಗಳ ಮುಖಂಡರ ಕರೆ

ಕೇಂದ್ರ ಸರಕಾರ ದಿಲ್ಲಿಯ ಸುತ್ತಮುತ್ತಲಿನ ಪಂಜಾಬ್, ಹರ್ಯಾಣ ,ಉತ್ತರಪ್ರದೇಶ, ಉತ್ತರಾಖಂಡದಿಂದ ಮಾತ್ರವಲ್ಲ, ದೇಶದ ಇತರೆಡೆಗಳಿಂದಲೂ ಬಂದಿರುವ ಲಕ್ಷಾಂತರ ರೈತರನ್ನು ದಿಲ್ಲಿಯ ಪ್ರವೇಶ ಪ್ರದೇಶಗಳಲ್ಲಿ ಪೋಲೀಸ್, ಬಿಎಸ್‌ಎಫ್, ಅಶ್ರುವಾಯು, ಲಾಠಿಪ್ರಹಾರ, ಜಲಫಿರಂಗಿಗಳಿಂದ ತಡೆದು ನಿಲ್ಲಿಸಿರುವುದನ್ನು ಖಂಡಿಸಿರುವ ನಾಗರಿಕ ಸಮಾಜದ ವಿವಿಧ ವಿಭಾಗಗಳಿಗೆ ಸೇರಿದ ಪ್ರಮುಖರು ಅವರ ಧೀರ ಹೋರಾಟಕ್ಕೆ ಬೆಂಬಲ ಮತ್ತು ಸೌಹಾರ್ದ ವ್ಯಕ್ತಪಡಿಸಿದ್ದಾರೆ. ಡಿಸೆಂಬರ್ 2ರಂದು ನೇಶನ್ ಫಾರ್ ಫಾರ್ಮರ್ಸ್, ಪಿ.ಎ.ಆರ್.ಐ., ಫೋರಂ ಫಾರ್ ಟ್ರೇಡ್ ಅಂಡ್ ಜಸ್ಟಿಸ್, ಇನ್ಸಾಫ್, ಅನ್ವೇಷಣ್, ಪೀಪಲ್ ಫಸ್ಟ್, ರೈಟ್ ಟು ಫುಡ್ ಕ್ಯಾಂಪೇನ್, ಪಿಯುಸಿಎಲ್, ಜನವಾದಿ ಲೇಖಕ್ ಸಂಘ್, ಅಖಿಲ ಭಾರತ ಜನವಿಜ್ಞಾನ ಜಾಲ, ಅಖಿಲ ಭಾರತ ಜನವಾದಿ ಮಹಿಳಾ ಸಂಘ, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ರಾಷ್ಟ್ರೀಯ ಮಹಿಳಾ ಒಕ್ಕೂಟ ಮುಂತಾದ ಸಂಘಟನೆಗಳ ಮುಖಂಡರು ಮತ್ತು ಚಿಂತಕರು ಸೇರಿದಂತೆ 200ಕ್ಕೂ ಹೆಚ್ಚು ಮಂದಿ ಈ ಆನ್‌ಲೈನ್ ಸಭೆಯಲ್ಲಿ ಭಾಗವಹಿಸಿದರು.

ಸರಕಾರ ಸಪ್ಟಂಬರ್ 2020ರಲ್ಲಿ ಸಂಸತ್ತಿನಲ್ಲಿ ಪ್ರಜಾಪ್ರಭುತ್ವ-ವಿರೋಧಿ ರೀತಿಯಲ್ಲಿ ಪಾಸು ಮಾಡಿಸಿಕೊಂಡಿರುವ ಎರಡು ಕಾಯ್ದೆಗಳು ಮತ್ತು ಒಂದು ತಿದ್ದುಪಡಿ ಕಾಯ್ದೆ ಮತ್ತು ವಿದ್ಯುಚ್ಛಕ್ತಿ ಮಸೂದೆಯನ್ನು ಹಿಂತೆಗೆದುಕೊಂಡು ರೈತರ ಈ ಬೇಡಿಕೆಯನ್ನು ಮನ್ನಿಸುವ ಪ್ರಾಮಾಣಿಕತೆಯನ್ನು ತೋರಿಸಬೇಕು, ತಕ್ಷಣವೇ ಈ ಕಾಯ್ದೆಗಳ ಜಾರಿಯನ್ನು ತಡೆಯುವ ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಈ ಸಭೆ ಆಗ್ರಹಿಸಿತು.

ಈ ಸಭೆಯ ಸಂಘಟಕರಲ್ಲಿ ಒಬ್ಬರಾದ ನೇಶನ್ ಫಾರ್ ಫಾರ್ಮರ್ಸ್‌ನ ದಿನೇಶ ಅಬ್ರೋಲ್ ಇದು ಕೇವಲ ಪಂಜಾಬೀ ರೈತರ ಚಳುವಳಿಯಲ್ಲ, **ಇದು ಅಖಿಲ ಭಾರತ ಆಂದೋಲನ** ಎಂದರು. ಹರ್ಯಾಣ ಸರಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಎಂ.ಜಿ.ದೇವಸಹಾಯಂ ಮಾತಾಡುತ್ತ **"ರೈತರ ಮೇಲೆ ಜಲಫಿರಂಗಿಗಳನ್ನು ಬಳಸಿರುವುದು ಬರ್ಬರ ಕೃತ್ಯ** "ಎಂದರು.

ಭಿನ್ನಮತವನ್ನು ಒಂದು ನಿಯೋಜಿತ ಸ್ಥಳಕ್ಕೆ ಸೀಮಿತಗೊಳಿಸಬೇಕು ಎಂದು ಸುಪ್ರಿಂ ಕೋರ್ಟ್ ಹೇಳಿದೆ, ಆದರೆ **ಭಿನ್ನಮತ ಎಂದರೆ ನಿಯೋಜಿತ ಸ್ಥಳಗಳನ್ನು ಮುರಿಯುವುದು ಎಂದೇ ಅರ್ಥ, ರೈತರು ಅದನ್ನು ಮಾಡುತ್ತಿದ್ದಾರೆ** ಎಂದು ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಹೇಳಿದರು.

ಈ ಕಾಯ್ದೆಗಳನ್ನು ಕೊವಿಡ್ ಪಿಡುಗು ತಾರಕಕ್ಕೆ ಏರಿದ್ದಾಗ, ಸರಕಾರಕ್ಕೆ ಬೇರೆ ಜವಾಬ್ದಾರಿಗಳಿದ್ದಾಗ ಏಕೆ ಪಾಸು ಮಾಡಿಸಿಕೊಳ್ಳಲಾಯಿತು? ಇಂತಹ ಸಮಯದಲ್ಲಿ ಈ ಸುಧಾರಣೆಗಳನ್ನು ತುರುಕಿಸಿದರೆ ಕಾರ್ಮಿಕರು ಮತ್ತು ರೈತರು ಅವುಗಳಿಗೆ ವಿರೋಧವನ್ನು ಸಂಘಟಿಸಲು ಸಾಧ್ಯವಾಗುವುದಿಲ್ಲ ಎಂದು ಅದು ಭಾವಿಸಿತು, ಆದರೆ ಅದೀಗ ಹುಸಿಯಾಗಿದೆ ಎಂದು ಅವರು ಮುಂದುವರೆದು ಹೇಳಿದರು.

ಜವಹರಲಾಲ್ ವಿವಿ ಯ ಪ್ರಾಧ್ಯಾಪಕ ಹಾಗೂ ಶ್ರಮ ಮತ್ತು ಕೃಷಿ ಅರ್ಥಶಾಸ್ತ್ರದ ಪರಿಣಿತರೂ ಆದ ಪ್ರವೀಣ್ ಝಾ **ಈ ಕಾಯ್ದೆಗಳು ಕೃಷಿ ವಲಯದ ಮೇಲೆ ಎಸಗಿರುವ ಸಾರ್ವಜನಿಕ ಧೋರಣೆ ಚಾಲಿತ ಅಪರಾಧ** ಎಂದು ವರ್ಣಿಸಿದರು. ಕಾಂಟ್ರಾಕ್ಟ್ ಕೃಷಿ ಕಳೆದ-40-50 ವರ್ಷಗಳಲ್ಲಿ ಬೇರೆ ದೇಶಗಳಲ್ಲಿ ಕೃಷಿಯನ್ನು ಅಸಮರ್ಥಗೊಳಿಸಿದೆ; ಬಂಡವಾಳಿಗರಿಗೆ ಅಧಿಕಾರ ಕೊಡಬೇಕಾದರೆ ಎಪಿಎಂಸಿಗಳನ್ನು ಮುಗಿಸಿಬಿಡಬೇಕು, ಅದನ್ನು ಮಾಡಲು ಸರಕಾರ ಮುಂದಾಗಿದೆ ಎಂದೂ ಅವರು ಹೇಳಿದರು.

ಕೃಷಿ ರಾಜ್ಯಪಟ್ಟಿಯಲ್ಲಿರುವ ವಿಷಯವಾಗಿರುವಾಗ ಅದಕ್ಕೆ ಸಂಬಂಧಪಟ್ಟ ಎಲ್ಲ ಚಟುವಟಿಕೆಗಳೂ ರಾಜ್ಯದ ಅಧಿಕಾರ ವ್ಯಾಪ್ತಿಯೊಳಕ್ಕೆ ಬರಬೇಕು. ಆದ್ದರಿಂದ ಕೇಂದ್ರ ಸರಕಾರ ಈ ಕಾಯ್ದೆಯನ್ನು ತಂದಿರುವುದು **"ಶಾಸಕೀಯ ದುಸ್ಸಾಹಸ"** ಎಂದು ಟಾಟಾ ಸಮಾಜ ವಿಜ್ಞಾನಗಳ ಸಂಸ್ಥೆ ಯ ಪ್ರಾಧ್ಯಾಪಕ ಆರ್. ರಾಂಕುಮಾರ್ ಹೇಳಿದರು. ಇದಕ್ಕೆ ಸುಪ್ರಿಂ ಕೋರ್ಟಿನಲ್ಲಿ ಸವಾಲು ಹಾಕುವುದು ಸಾಧ್ಯವಿದೆ ಎಂದರು. **ಕೇಂದ್ರ ಸರಕಾರ ಈ ತ್ರಿವಳಿ ಕಾಯ್ದೆಗಳನ್ನು ರದ್ದುಗೊಳಿಸಿ ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸುವ ಮೂಲಕ ಅವರವರಿಗೆ ಅನುಗುಣವಾದ ರೀತಿಯಲ್ಲಿ ಕಾಯ್ದೆಗಳು ಮೂಡಿ ಬರುವಂತೆ ಮಾಡಬೇಕು** ಎಂದು ಸಲಹೆ ಮಾಡಿದರು, ಈ ಕಾಯ್ದೆಯಿಂದ ರೈತರಿಗೆ ಹೆಚ್ಚಿನ ಸ್ವಾತಂತ್ರ್ಯ ಸಿಗುತ್ತದೆ, ಮಧ್ಯವರ್ತಿಗಳು ಇಲ್ಲವಾಗುತ್ತಾರೆ, ರೈತರಿಗೆ ಹೆಚ್ಚಿನ ಬೆಲೆಗಳು ಸಿಗುತ್ತವೆ ಎಂಬುದೆಲ್ಲ ಸರಕಾರದ ಸುಳ್ಳು ದಾವೆಗಳು ಎಂದರು.

ಮಹಿಳಾ ಸಂಘಟನೆಗಳ ಮುಖಂಡರಾದ ಮರಿಯಮ್ ಧವಳೆ, ಆನಿ ರಾಜ, ಕವಿತಾ ಕೃಷ್ಣನ್ ಮತ್ತಿತರರು ಮಾತಾಡಿದರು.

ಈ ಸಭೆಯ ನಂತರ ಹೊರಡಿಸಿರುವ ಜಂಟಿ ಹೇಳಿಕೆ, **ಇದುವರೆಗೆ ಮುಂದುವರೆದ ದೇಶಗಳ ಒತ್ತಡಗಳನ್ನು ಎದುರಿಸಿ ನಿಲ್ಲುವ ಪ್ರಗತಿಪರ ನಿಲುವನ್ನು ಭಾರತ ವಹಿಸಿತ್ತು, ಆದರೆ ಈಗ ಹೊಸ ಕೃಷಿ ಕಾಯ್ದೆಗಳನ್ನು ಪಾಸು ಮಾಡಿಸಿರುವುದು ತದ್ವಿರುದ್ಧ** ಭಾವನೆಯನ್ನು ಉಂಟು ಮಾಡಿದೆ ಎಂದಿದೆ.

"ದೇಶಾದ್ಯಂತ ಎಲ್ಲ ಪ್ರಗತಿಪರ ಮತ್ತು ಪ್ರಜಾಪ್ರಭುತ್ವವಾದಿ ಸಂಘಟನೆಗಳು ಮತ್ತು ವ್ಯಕ್ತಿಗಳು ಒಂದು ಘನತೆಯ ಬದುಕಿಗಾಗಿ ನ್ಯಾಯಯುತ ಮತ್ತು ಪ್ರಜಾಸತ್ತಾತ್ಮಕ ಹೋರಾಟದಲ್ಲಿ ರೈತರ ಬೆಂಬಲಕ್ಕೆ ನಿಲ್ಲಬೇಕು" ಎಂದು ಅದು ಕರೆ ನೀಡಿದೆ.



ಇರಾನಿನ ಪರಮಾಣು ವಿಜ್ಞಾನಿಯ ಹತ್ಯೆಯ ಹಿಂದೆ ಏನಿದೆ?

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಇರಾನಿನ ಉನ್ನತ ಪರಮಾಣು ವಿಜ್ಞಾನಿ ಮತ್ತು ಉಪ ರಕ್ಷಣಾ ಸಚಿವರಾಗಿರುವ ಮೊಹ್ಸೆನ್ ಫಖ್ರಿಜಾಡೆ ಅವರ ಹತ್ಯೆ ಪಶ್ಚಿಮ ಏಷ್ಯಾದಲ್ಲಿ ಹೊಸ ಬಿಕ್ಕಟ್ಟನ್ನು ಹುಟ್ಟು ಹಾಕುವ ಸಂಭವವನ್ನು ತಳ್ಳಿ ಹಾಕುವಂತಿಲ್ಲ. ಇರಾನ್ ಗೆ ಈ ವರ್ಷದಲ್ಲಿ ಇದು ಎರಡನೇ ದೊಡ್ಡ ಅಘಾತವಾಗಿದೆ. ಕಳೆದ ಜನವರಿಯಲ್ಲಿ ಇರಾನಿನ ಮೇಜರ್ ಜನರಲ್ ಖಾಸಿಂ ಸುಲೇಮಾನಿ' ಯವರನ್ನು ಕೊಲ್ಲಲಾಗಿತ್ತು. ಇದೀಗ ವಿಜ್ಞಾನಿ ಮೊಹ್ಸೆನ್ ಹತ್ಯೆಯಾಗಿದೆ. ಕಳೆದ ಶುಕ್ರವಾರ ಟೆಹ್ರಾನ್ ನ ಹೊರವಲಯದಲ್ಲಿ ಮೊಹ್ಸೆನ್ ರನ್ನು ಬಂದೂಕು ಮತ್ತು ಬಾಂಬ್ ದಾಳಿಯಲ್ಲಿ ಕೊಲೆ ಮಾಡಲಾಯಿತು. ಇದರಲ್ಲಿ ಅವರ ಅಂಗರಕ್ಷಕ ನನ್ನೂ ಕೊಲ್ಲಲಾಯಿತು. ಕಳೆದ ಒಂದು ದಶಕದಲ್ಲಿ ಇರಾನಿನ ಹಲವಾರು ಪರಮಾಣು ವಿಜ್ಞಾನಿಗಳ ಸರಣಿ ಹತ್ಯೆಗಳು ನಡೆದಿವೆ. ಆಗ, "ಇರಾನ್ ಪರಮಾಣು ಅಣ್ವಸ್ತ್ರ ಹೊಂದುವುದನ್ನು ತಪ್ಪಿಸಲು ಇಸ್ರೇಲ್ ತನ್ನ ಎಲ್ಲಾ ಮಾರ್ಗಗಳನ್ನು ಬಳಸುತ್ತದೆ" ಎಂದು ಅದರ ರಕ್ಷಣಾ ಮಂತ್ರಿ ಗಳು ಬಹಿರಂಗವಾಗಿಯೇ ಹೇಳಿಕೆ ನೀಡಿ ಇಸ್ರೇಲ್ ನ ಪಾತ್ರ ಒಪ್ಪಿಕೊಂಡಿದ್ದರು.

ಮೊಹ್ಸೆನ್ ಹತ್ಯೆಯ ಅಘಾತ ಇರಾನ್‌ಗೆ ನಿರ್ಣಾಯಕ ಸಮಯದಲ್ಲಿ ಬಂದಿದೆ. ಇನ್ನೆರಡು ತಿಂಗಳೊಳಗೆ ಅಮೆರಿಕಾಕ್ಕೆ ಹೊಸ ಅಧ್ಯಕ್ಷ ಜೋ ಬೈಡೆನ್ ಆಡಳಿತ ವಹಿಸಿ ಕೊಳ್ಳುತ್ತಾರೆ. ಬೈಡನ್ ಅಧ್ಯಕ್ಷೀಯ ಚುನಾವಣೆಯ ಸಂದರ್ಭದಲ್ಲಿ, ಇರಾನ್ ಜೊತೆಗಿನ ಪರಮಾಣು ಶಸ್ತ್ರಾಸ್ತ್ರಗಳ ಒಪ್ಪಂದ ವನ್ನು ಪುನರ್ ಪರಿಶೀಲನೆ ಮಾಡಲಾಗುವುದು. ಈ ಕುರಿತಂತೆ ಇರಾನ್ ಜೊತೆ ಮಾತುಕತೆಗೆ ಮರಳುವ ಭರವಸೆಗಳನ್ನು ನೀಡಿದ್ದಾರೆ. ಇದರಿಂದಾಗಿ, ಈ ಎರಡು ದೇಶಗಳ ನಡುವೆ ಉಂಟಾಗಿದ್ದ "ಗರಿಷ್ಠ ಒತ್ತಡ" ದ ದಿನಗಳು ಕೊನೆಗೊಳಿಸಬಹುದು ಎಂದು ನಂಬಲಾಗಿದೆ. ಜನರಲ್ ಕಾಸಿಂ ಸೊಲೈಮಾನಿ ಹತ್ಯೆಯನ್ನು ಅಮೆರಿಕಾವೇ ಮಾಡಿಸಿದ್ದು ಎಂಬುದು ಜಗಜ್ಜಾಹಿರ ವಿಷಯ. ಈ ಹತ್ಯೆಯಾದ ನಂತರ, ಎರಡು ದೇಶಗಳ ಮದ್ಯೆ ಯುದ್ದದ ಅಂಚಿಗೆ ಹೋಗುವ ಕ್ಲಿಷ್ಟ ಪರಿಸ್ಥಿತಿ ಉಂಟಾಗಿತ್ತು.

ಹೀಗಾಗಿ, ಹೊರ ಹೋಗುವ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆ ಹೊಸ ಅಧ್ಯಕ್ಷ ಬೈಡೆನ್ ಇರಾನ್ ವಿರುದ್ದ ತಮ್ಮ ಯುದ್ದ ನೀತಿಯನ್ನು ಬದಲಿಸುವುದು ಅವರಿಗೆ ಬೇಕಾಗಿಲ್ಲ. ಅಮೆರಿಕಾದೊಂದಿಗೆ ಇರಾನ್ ನ ಸಂಬಂಧವು ಮತ್ತು ಪಶ್ಚಿಮ ಏಶ್ಯಾದ ಪ್ರಕ್ಷುಬ್ಧ ಪರಿಸ್ಥಿತಿ ತಿಳಿಯಾಗುವುದನ್ನು ಸಹಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ, ಇರಾನ್ ನನ್ನು ಪ್ರಚೋದಿಸುವ ಸಲುವಾಗಿಯೇ, ಮೊಹ್ಸೆನ್ ಹತ್ಯೆಯನ್ನು ಮಾಡಲಾಗಿದೆ ಎಂಬ ಅನುಮಾನ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದೆ.

ಪಶ್ಚಿಮ ಏಶ್ಯಾದಲ್ಲಿ ಶಕ್ತಿರಾಷ್ಟ್ರಗಳಾಗಿರುವ ಇಸ್ರೇಲ್ ಮತ್ತು ಸೌದಿ ಅರೇಬಿಯಾ ಇವೆರಡೂ ಅಮೆರಿಕಾದ ಮಿತ್ರರಾಷ್ಟ್ರಗಳು. ಇವೆರಡು ದೇಶಗಳು ಇರಾನ್ ನ್ನು ಬಹಳ ಹಿಂದಿನಿಂದಲೂ ಆ ಪ್ರದೇಶಧಲ್ಲಿ ಪೈಪೋಟಿ ನೀಡುವ ಶತ್ರುಶಕ್ತಿಯಾಗಿ ನೋಡಿವೆ. ಇರಾನ್ ಪರಮಾಣು ಅಣ್ವಸ್ತ್ರ ಮತ್ತು ಅದಕ್ಕಾಗಿ ಯುರೇನಿಯಂ ಸಂಸ್ಕರಣ ಸಾಮರ್ಥ್ಯ ಹೊಂದುವುದನ್ನು ಅಮೆರಿಕಾದಂತೆ ಸೌದಿ ಅರೇಬಿಯ ಮತ್ತು ಇಸ್ರೇಲ್ ಸಹ ಸಹಿಸುವುದಿಲ್ಲ. ಹೀಗಾಗಿ, ಬೈಡನ್ ಅಧ್ಯಕ್ಷತೆಯಲ್ಲಿ, ಯು.ಎಸ್, ಇರಾನ್ ನೊಂದಿಗೆ ಮಾತುಕತೆಗೆ ಮರಳುವುದನ್ನು ಅಥವಾ ಇರಾನ್ ಮೇಲಿನ ಆರ್ಥಿಕ ನಿರ್ಬಂಧಗಳನ್ನು ಸಡಿಲಿಸುವುದನ್ನು ಇವೆರಡು ದೇಶಗಳೂ ಸ್ವಾಗತಿಸುವುದಿಲ್ಲ.

ಇದಲ್ಲದೆ, ಇಸ್ರೇಲ್ ಪ್ರಧಾನಿ ನೇತುನ್ಯಾಹು, ಆಂತರಿಕವಾಗಿ ಭ್ರಷ್ಟಾಚಾರದ ಗಂಭೀರದ ಆರೋಪ ಎದುರಿಸುತ್ತಿದ್ದಾರೆ. ಅವರ ರಾಜಕೀಯ ಪ್ರತಿಷ್ಠೆ ನೆಲಕಚ್ಚಿದೆ. ಇದರಿಂದ ಹೊರಬರಲು, ಅವರಿಗೆ ಜನರ ಗಮನ ಬೇರೆಡೆಗೆ ಸೆಳೆದು ಇರಾನ್ ನ್ನು ಮಟ್ಟ ಹಾಕಿ ತಾನು ಇಸ್ರೇಲನ್ನು ಒಂದು ಅಜೇಯ ಪ್ರಾದೇಶಿಕ ಶಕ್ತಿರಾಷ್ಟ್ರ ಮಾಡಿ ಅದರ ರಾಷ್ಟ್ರೀಯ ಪತ್ರಿಷ್ಠೆ ಹೆಚ್ಚಿಸಬಲ್ಲ ಗಟ್ಟಿ ನಾಯಕನೆಂದು ಬಿಂಬಿಸಿಕೊಳ್ಳಬೇಕಾಗಿದೆ. ಆದ್ದರಿಂದ ಟ್ರಂಪ್ ನ ಬೆಂಬಲದೊಂದಿಗೆ, ಇರಾನ್ ಮೇಲೆ ಯುದ್ದ ನಡೆಸಲು ಪ್ರಚೋದನೆಯಲ್ಲಿ ತೊಡಗಿದ್ದಾರೆ. ಇವೆಲ್ಲ ಮೊಹ್ಸೆನ್ ಹತ್ಯೆಗೆ ಅನೇಕ ಸಂಭಾವ್ಯ ಪ್ರೇರಣೆಗಳು ಎದ್ದು ಕಾಣುತ್ತವೆ. ಈ ಹತ್ಯೆಯನ್ನು ದೂರ–ನಿಯಂತ್ರಿತ ಸ್ವಯಂಚಾಲಿತ ಗನ್ ಗಳಿಂದ ನಡೆಸಲಾಗಿದ್ದು, ಉನ್ನತ ತಂತ್ರಜ್ಞಾನ ಬಳಸಲಾಗಿದ್ದು ಇದರ ಹಿಂದೆ ಇಸ್ರೇಲ್ ನ ಕೈವಾಡವಿದೆ ಎಂದು ಈಗಾಗಲೇ ಇರಾನ್ ಸರ್ಕಾರ ಆರೋಪಿಸಿದೆ. ಇರಾನ್ ಇಸ್ರೇಲನ್ನು ಮಾತ್ರ ಆರೋಪಿಸಿದ್ದರೂ, ಇದಕ್ಕೆ ಅಮೆರಿಕದ ಬೆಂಬಲವಿಲ್ಲ ಎನ್ನುವುದು ಅಸಾಧ್ಯ.

ಇತ್ತೀಚೆಗೆ ಸೌದಿ ಅರೇಬಿಯಾ ದಲ್ಲಿ ನಡೆದ ರಹಸ್ಯ ಸಭೆಯೊಂದರಲ್ಲಿ, ಇಸ್ರೇಲ್ ನ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಯುಎಸ್ ನ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಮತ್ತು ಸೌದಿ ಕ್ರೌನ್ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಭಾಗವಹಿಸಿದ್ದರು. ಇರಾನ್ ವಿರುದ್ಧ “ಗರಿಷ್ಟ ಒತ್ತಡ” ನೀತಿಯನ್ನು ಹೇಗೆ ಹೇರಬೇಕು ಮತ್ತು ಬೈಡನ್ ಆಡಳಿತ ವಹಿಸಿ ಕೊಳ್ಳುವ ಮುನ್ನಾ ಇರಾನ್ ನನ್ನು ಹೇಗೆ ಯುದ್ದಕ್ಕೆ ಪ್ರಚೋದಿಸಬೇಕು' ಎಂದು ಚರ್ಚಿಸಿದ್ದಾರೆಂದು ನಂಬಲಾಗಿದೆ. ಏಕೆಂದರೆ, ಟ್ರಂಪ್ ಅಧ್ಯಕ್ಷ ಸ್ಥಾನದ ಅವಧಿ ಇನ್ನನೆರಡು ತಿಂಗಳಲ್ಲಿ ಕೊನೆಗೊಳ್ಳುವುದು. ಇದಕ್ಕೆ ಮುನ್ನಾ, ಇರಾನ್ ಅನ್ನು ಪ್ರಚೋದಿಸಿ, ಈ ಮೂರು ದೇಶಗಳು ಇತರೆ ಇರಾನ್ ವಿರೋಧಿ ದೇಶಗಳೊಂದಿಗೆ, ಒಂದಾಗಿ ಯುದ್ದ ಮಾಡುವ ಸಂಭಾವ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅಮೆರಿಕದ ಬೆಂಬಲದಿಂದಲೇ, ಇಸ್ರೇಲ್ ತನ್ನ ಭಯೋತ್ಪಾದಕ ಏಜೆಂಟ್ ರಿಂದ ಮೊಹ್ಸೆನ್ ರನ್ನು ಕೊಲೆ ಮಾಡಿಸಿದೆ ಎಂಬ ಅನುಮಾನಕ್ಕೆ ಇದು ಕಾರಣವಾಗಿದೆ.

ಉನ್ನತ ವಿಜ್ಞಾನಿ ಯ ಹತ್ಯೆ ಯಿಂದಾಗಿ, ಹೊಸ ಸವಾಲನ್ನು ಇರಾನ್ ಆಂತರಿಕವಾಗಿಯೂ ಎದುರಿಸುತ್ತಿದೆ. ಇರಾನ್ ಅಧ್ಯಕ್ಷ ಹಸನ್ ರೂಹಾನಿ ಕೂಡಾ "ಸರಿಯಾದ ಸಮಯದಲ್ಲಿ ಇರಾನ್" ಪ್ರತಿಕ್ರಿಯೆ ನೀಡುತ್ತದೆ ಎಂದಿದ್ದಾರೆ. ಇರಾನಿ ಸರಕಾರ ಇಸ್ರೇಲಿ ಗೂಢಚಾರ ಸಂಸ್ಥೆ ಮೊಸಾದ್ ನ ಏಜೆಂಟರು ಐ.ಎ.ಇ.ಎ (ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಘಟನೆ) ಇನಸ್ಪೆಕ್ಟರುಗಳ ಹೆಸರಲ್ಲಿ ದೇಶದೊಳಗೆ ನುಸುಳಿದ್ದಾರೆ ಎಂದು ಆಪಾದಿಸಿದೆ.. ಆದ್ದರಿಂದ ಐ.ಎ.ಇ.ಎ (ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಘಟನೆ) ಇನಸ್ಪೆಕ್ಟರುಗಳ ಮೇಲೆ ಹೊಸ ನಿರ್ಬಂಧಗಳನ್ನು ಹೇರುವುದಾಗಿ ಹೇಳಿದೆ.

ಇರಾನಿನ ಶಾಂತಿ ಚಳುವಳಿಗಾರರು ವಿಜ್ಞಾನಿ ಮೊಹ್ಸೆನ್ ಫಕ್ರಿಜಾಡೆ ಮಹಾಬಾದಿಯ ಹತ್ಯೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಇಡೀ ಪಶ್ಚಿಮ ಏಶ್ಯಾ ಪ್ರದೇಶದಲ್ಲಿ ಇದು ವ್ಯಾಪಕ ರಕ್ತಸಿಕ್ತ ಸಂಘರ್ಷ ಕ್ಕೆ ಕಾರಣವಾಗ ಬಹುದು ಎಂದು ಎಚ್ಚರಿಸಿದ್ದಾರೆ. ಇರಾನ್ ನ ಕಮ್ಯುನಿಸ್ಟ್ ತುಡೆ ಪಾರ್ಟಿ ' ಟ್ರಂಪ್ ಆಡಳಿತದ ಸಂಪೂರ್ಣ ಜ್ಞಾನ ಮತ್ತು ಬೆಂಬಲದೊಂದಿಗೆ, ಇಸ್ರೇಲ್ ಏಜೆಂಟ್ ರು ಟೆಹ್ರಾನ್ ಹೊರವಲಯದಲ್ಲಿ ವಿಜ್ಞಾನಿ ಮೊಹ್ಸೆನ್ ರನ್ನು ಹತ್ಯೆಗೈದಿದ್ದಾರೆ ಎಂದು ಆರೋಪಿಸಿದೆ. 2018 ರಲ್ಲಿ ಟ್ರಂಪ್ ಮುರಿದು ಹಾಕಿದ ಇರಾನಿನ ಪರಮಾಣು ಅಭಿವೃದ್ಧಿಯ ನಿಷೇಧದ ಆರು ಪಕ್ಷಗಳ ಒಪ್ಪಂದವನ್ನು' ಪುನಃಸ್ಥಾಪನೆ ಮಾಡಲು ಬೈಡನ್ ಆಸಕ್ತಿ ತೋರಿದ್ದಾರೆ. ಇದನ್ನು ಟ್ರಂಪ್ ಸಹಿಸಿಕೊಳ್ಳಲು ಅಸಾಧ್ಯವಾಗಿದೆ. ಹಾಗಾಗಿಯೇ, ಟ್ರಂಪ್ ನ ಯುದ್ದಕೋರತನದ ಪ್ರೇರಣೆಯೇ ಮೊಹ್ಸೆನ್ ಕೊಲೆಗೆ ಕಾರಣವಿರಬಹುದು ಎಂದಿದೆ.

ಈ ಲಜ್ಜೆಗೆಟ್ಟ ಹತ್ಯೆಯನ್ನು ಜಗತ್ತಿನಾದ್ಯಂತ ಖಂಡಿಸಲಾಗಿದೆ. ಯುರೋಪಿಯನ್ ಒಕ್ಕೂಟವು ಇದೊಂದು 'ಅಪರಾಧ ಕೃತ್ಯ' ಎಂದು ದೂಷಿಸಿದೆ. ಸಿರಿಯಾ, ಟರ್ಕಿ, ವೆನೆಜುವೆಲಾ ಮತ್ತು ಕತಾರ್ ಸೇರಿದಂತೆ ಹಲವಾರು ದೇಶಗಳು " ಈ ಭಯೋತ್ಪಾದಕ ಕೃತ್ಯ"ವನ್ನು ಖಂಡಿಸಿವೆ. ವಿಶ್ವಸಂಸ್ಥೆಯು' ಇದೊಂದು ಕಾನೂನು ಬಾಹಿರ ಕೃತ್ಯವಾಗಿದ್ದು, ಎಲ್ಲರೂ ಖಂಡಿಸಲೇ ಬೇಕು ಎಂದಿದೆ. ಆದಾಗ್ಯೂ, ಶಾಂತಿ ರೀತಿಯಲ್ಲಿ ಇರಬೇಕೆಂದು ಕರೆ ನೀಡಿದೆ. ಅಮೆರಿಕಾ ಮಾತ್ರ ಮೌನವಾಗಿದೆ. ಅಧ್ಯಕ್ಷ ಟ್ರಂಪ್ ಯಾವುದೇ ಪ್ರತಿಕ್ರಿಯೆ ವ್ಯಕ್ತ ಪಡಿಸಿಲ್ಲ.

ಹಾಗಾದರೆ, ಟ್ರಂಪ್, ನೇತನ್ಯಾಹು ಮತ್ತು ಮೊಹಮ್ಮದ್ ಸಲ್ಮಾನ್ ರ ಮುಂದಿರುವ ಕಾರ್ಯಸೂಚಿ ಗಳೇನು ? ಕಾಲ್ಕೆರೆದು ಇರಾನ್ ನನ್ನು ಯುದ್ದಕ್ಕೆ ಪ್ರಚೋದಿಸುವುದೇ ? ಅದಕ್ಕೂ ಪ್ರತಿಕ್ರಿಯಿಸದಿದ್ದರೆ ಅದರ ಪರಮಾಣು ಅಣ್ವಸ್ತ್ರ ಸ್ಥಾವರಗಳ ಮೇಲೆ ಬಾಂಬು ದಾಳಿ ನಡೆಸಿ ಇರಾನ್ ಅನ್ನು ಮತ್ತಷ್ಟು ಪ್ರಚೋದಿಸಿ ಯುದ್ದಕ್ಕೆ ಆಹ್ವಾನಿಸುವುದೇ ?

ಇವೆಲ್ಲವನ್ನೂ ಅರಿತಿರುವ ಇರಾನ್ ಬೈಡನ್ ಅಧ್ಯಕ್ಷರಾಗಿ ಆಡಳಿತ ಚುಕ್ಕಾಣಿ ಹಿಡಿಯುವವರೆಗೂ ಅಥವಾ ಪರಮಾಣು ಒಪ್ಪಂದದ ಕುರಿತಂತೆ ಬೈಡನ್ ಮಾತುಕತೆ ನಡೆಸುವವರೆಗೂ ಕಾಯುತ್ತಾ? ಅಥವಾ ಇಸ್ರೇಲ್ ಮತ್ತು ಅದರ ಮಿತ್ರ ರಾಷ್ಟಗಳ ಪ್ರಚೋದನೆಗೆ ತುತ್ತಾಗಿ, ಅವು ನಡೆಸಬಹುದಾದ ಸಂಭಾವ್ಯ ದಾಳಿಗೆ ಪ್ರತಿ ದಾಳಿ ಹೂಡುತ್ತಾ? ಅದನ್ನು ಟ್ರಂಪ್ ಇರುವಾಗಲೇ ಮಾಡುತ್ತಾ ಅಥವಾ ಬೈಡನ್ ಅಧಿಕಾರವಹಿಸಿಕೊಂಡ ಮೇಲೆ ಮಾಡುತ್ತಾ? ಮುಂದಿನ ಎರಡು ತಿಂಗಳಲ್ಲಿ ವಿಜ್ಞಾನಿ ಮೊಹ್ಸೆನ್ ಹತ್ಯೆಯಿಂದಾಗಿ ಪಶ್ಚಿಮ ಏಶ್ಯಾದಲ್ಲಿ ನ ಬೆಳವಣಿಗೆಗಳು ಆತಂಕಕಾರಿ ದಿಕ್ಕಿನಲ್ಲಿ ಹೋಗುವ ಸಾಧ್ಯತೆಯೇ ಹೆಚ್ಚು..

ಯುರೋಪಿನಲ್ಲಿ 7 ಲಕ್ಷ ಮನೆ ಇಲ್ಲದ ನಿರ್ಗತಿಕರು

ಯುರೋಪ್ ಶ್ರೀಮಂತ ದೇಶಗಳ ಖಂಡವೆಂದೂ, ಜನರ ಸರಾಸರಿ ಜೀವನ ಮಟ್ಟ ಸಹ ಉತ್ತಮವಾಗಿದೆಯೆಂದೂ ಸಾಮಾನ್ಯ ಭಾವನೆಯಿದೆ. ಯುರೋಪಿನಲ್ಲಿ 7 ಲಕ್ಷ ಮನೆಇಲ್ಲದ ನಿರ್ಗತಿಕರು ಇದ್ದಾರೆ. ಮಾತ್ರವಲ್ಲ, ಕಳೆದ 10 ವರ್ಷಗಳಲ್ಲಿ ಇದು ಶೇ. 70 ರಷ್ಟು ಹೆಚ್ಚಿದೆ. ಈ ಮಾಹಿತಿ ಕೊಟ್ಟಿದ್ದು ಯಾವುದೋ ಸಮೀಕ್ಷಾ ಸಂಸ್ಥೆ ಅಥವಾ ಎನ್.ಜಿ.ಒ ಅಲ್ಲ. ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಇದರ ಕುರಿತು ಮಾಹಿತಿ ನೀಡಿ ಎಚ್ಚರಿಕೆ ಕೊಡಲಾಗಿದೆ. ಮನೆ ಇಲ್ಲದ ನಿರ್ಗತಿಕ ಪರಿಸ್ಥೀತಿಯನ್ನು ಕಡಿಮೆ ಮಾಡುತ್ತಾ 2030 ರ ಹೊತ್ತಿಗೆ ಪೂರ್ಣವಾಗಿ ನಿರ್ಮೂಲನ ಮಾಡಲು ಯೋಜನೆಯನ್ನು ಅಂಗೀಕರಿಸಲಾಗಿದೆ. ಹಲವು ದೇಶಗಳ ನಡುವೆ ಪ್ರಮುಖ ವ್ಯತ್ಯಾಸಗಳಿದ್ದರೂ ಈ ಪ್ರದೇಶದ 27 ದೇಶಗಳಲ್ಲೂ ಮನೆಇಲ್ಲದವರ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಮನೆಬಾಡಿಗೆ ಶೇ. 5.2 ಎಷ್ಟು ಏರಿದೆ. ಮನೆ ಇಲ್ಲದ ನಿರ್ಗತಿಕ ಸ್ಥಿತಿ ತೀವ್ರ ಬಡತನದ ಸೂಚಕವೆಂದು ಹೇಳಿದ ಯುರೋಕೂಟದ ಸರಕಾರ ಇದರ ವಿರುದ್ಧ ತುರ್ತು ಕ್ರಮಕೈಗೊಳ್ಳಬೇಕೆಂದು ಕರೆ ಕೊಟ್ಟಿದೆ. ■







JANASHAKTHI KANNADA VARA PATRIKE December 7-13, 2020 Price: Rs. 10/- Date of Publication: 4 December 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21


ಕೆ.ಆರ್. ಪುರಂ, ಬೆಂಗಳೂರು



ಮೈಸೂರ್ ಬ್ಯಾಂಕ್, ಬೆಂಗಳೂರು

"ದಿಲ್ಲಿ ಚಲೋ" ರೈತರ ಹೋರಾಟ ಮತ್ತು ರಾಜ್ಯದ ರೈತ ಕೃಷಿ ಕೂಲಿಕಾರರ ಬೇಡಿಕೆಗಳಿಗಾಗಿ ಆಗ್ರಹಿಸಿ ರಾಜ್ಯಾದಾದ್ಯಂತ ಪ್ರತಿಭಟನೆ


ಕೋಲಾರ



ಮಡಿಕೇರಿ



ಸಿಂದನೂರು


ಹಾಸನ


ಯಾದಗಿರಿ


ಚಿಕ್ಕಬಳ್ಳಾಪುರ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**